## ಸೋಮವಾರ, ೨೮ನೇ ಏಪ್ರಿಲ್ ೧೯೪೭

ಭಾರತ ಸಂವಿಧಾನ ರಚನಾಸಭೆಯ ಮೂರನೇ ಅಧಿವೇಶನ ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೧ ಘಂಟೆಗೆ ಪ್ರಾರಂಭವಾಯಿತು. ರಾಷ್ಟ್ರಪತಿ [ಗೌರವಾನ್ವಿತ ಡಾ| ರಾಜೇಂದ್ರ ಪ್ರಸಾದ್]ಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಮುಂದೆ ಕಾಣಿಸಿದಂತಹ ಸದಸ್ಯರು ತಮ್ಮ ಪರಿಚಯ ಪತ್ರಗಳನ್ನು ಹಾಜರು ಪಡಿಸಿ, ರಿಜಿಸ್ಟರ್‌ನಲ್ಲಿ ಸಹಿ ಹಾಕಿದರು.

೧. ಸರ್ ಬ್ರಜೇಂದ್ರ ಲಾಲ್ ಮಿಟ್ಟರ್ (ಬರೋಡಾ)
೨. ಮಾನ್ಯ ಗೋಪಾಲದಾಸ್ ಅಂಬಾಯದಾಸ್ ದೇಸಾಯ್ (ಬರೋಡಾ)
೩. ಮಾನ್ಯ ಪಿ. ಗೋವಿಂದ ಮೆನನ್ (ಕೊಚ್ಚಿ)
೪. ಸರ್. ಟಿ. ವಿಜಯರಾಘವಾಚಾರ್ಯ (ಉದಯಪುರ್)
೫. ಸರ್. ವಿ.ಟಿ. ಕೃಷ್ಣಮಾಚಾರಿ (ಜೈಪುರ್)
೬. ಪಂಡಿತ್ ಹೀರಾಲಾಲ್ ಶಾಸ್ತ್ರಿ (ಜೈಪುರ್)
೭. ಮಾನ್ಯ ಸಿ.ಎಸ್. ವೆಂಕಟಾಚಾರ್ (ಜೋಧ್‌ಪುರ್)
೮. ಮಾನ್ಯ ಜೈನಾರಾಯಣ ವ್ಯಾಸ್ (ಜೋಧ್‌ಪುರ್)
೯. ಸರ್ದಾರ್ ಕೆ.ಎಂ. ಪಣಿಕ್ಕರ್(ಬಿಕಾನೀರ್)
೧೦. ರಾಜಾಲಾಲ್ ಶಿವಬಹಾದ್ದೂರ್ ಸಿಂಗ್, ಚುರ್ಹತ್‌ನ್ ರಾವ್ (ರೇವಾ)
೧೧. ಲಾಲ್ ಯಾದೇಂದ್ರ ಸಿಂಗ್ (ರೇವಾ)
೧೨. ಸರ್ದಾರ್ ಜೈದೇವ್ ಸಿಂಗ್ (ಪಾಟಿಯಾಲ)
೧೩. ಸರ್ದಾರ್ ಗ್ಯಾನ್ ಸಿಂಗ್ ರಾರೆವಾಲ (ಪಾಟಿಯಾಲ)
೧೪. ಸನ್ಮಾನ್ಯ ಡಾ| ಕೈಲಾಸನಾಥ ಖಟ್ಟು (ಯು.ಪಿ.–ಸಾಮಾನ್ಯ)
೧೫. ಪ್ರೊಫೆಸರ್ ಕೆ.ಟಿ.ಷಾ (ಬಿಹಾರ್–ಸಾಮಾನ್ಯ)
೧೬. ಮಾನ್ಯ ಮಹಾವೀರ್ ತ್ಯಾಗಿ (ಯು.ಪಿ.–ಸಾಮಾನ್ಯ)
೧೭. ಮಾನ್ಯ ಉಪೇಂದ್ರನಾಥ ಬರ್ಮನ್ (ಬಂಗಾಳ–ಸಾಮಾನ್ಯ)
೧೮. ಮಾನ್ಯ ಪಿ.ಎಂ. ವೇಲಾಯುಧಪಾಣಿ (ಮದರಾಸು–ಸಾಮಾನ್ಯ)

### ಅಧ್ಯಕ್ಷರ ಭಾಷಣ

**ಸನ್ಮಾನ್ಯ ಅಧ್ಯಕ್ಷರು :** ಸಭೆಯ ಕಳೆದ ಅಧಿವೇಶನ ಕಳೆದು ಕೇವಲ ಮೂರು ತಿಂಗಳ ನಂತರ ನಾವು ಸಭೆ ಸೇರುತ್ತಿದ್ದೇವೆ. ಈ ನಡುವೆ ಕೆಲವು ಮುಖ್ಯ ಘಟನೆಗಳು ಸಂಭವಿಸಿವೆ. ಅವುಗಳ ಬಗ್ಗೆ ಸಂಕ್ಷಿಪ್ತವಾಗಿ ಪ್ರಸ್ತಾಪಿಸುವುದು ಅಗತ್ಯವೆಂದು ನಾನು ಭಾವಿಸುತ್ತೇನೆ. ಅದಕ್ಕೆ ಮುನ್ನ ನಮ್ಮ ಸದಸ್ಯರಲ್ಲಿ ಮೂವರ ನಿಧನದ ದುಃಖವಾರ್ತೆಯನ್ನು ಸದನಕ್ಕೆ ತಿಳಿಸುವುದಿದೆ.

೧. ರಾಜಾ ಮಹೇಶ್ವರ ದಯಾಳ್ ಸೇತ್ (ಯು.ಪಿ. ಇಂದ)
೨. ಸರ್. ಅಜ್ಹಿಜ್ ಉಲ್ ಹಕ್ (ಬಂಗಾಳದಿಂದ) ಮತ್ತು
೩. ಮಾನ್ಯ ಕೆ.ಎಲ್. ಮಜ್ಹುಮ್‌ದಾರ್ (ಬರೋಡಾದಿಂದ)

ಕೊನೆಯ ಸದಸ್ಯರ ಮರಣ ಆಘಾತಕಾರಿ. ಅದು ಆಕಸ್ಮಿಕ ಸನ್ನಿವೇಶದಲ್ಲಿ ನಡೆದ ದುರ್ಘಟನೆ. ನನಗೆ ತಿಳಿದುಬಂದಂತೆ ಅವರು ಈ ಅಧಿವೇಶನದಲ್ಲಿ ಭಾಗವಹಿಸಲೆಂದು ಬರುತ್ತಿದ್ದರು. ಅವರು ಪಯಣಿಸುತ್ತಿದ್ದ ರೈಲ್ವೆ ಬೋಗಿಗೆ ಬೆಂಕಿ ಹತ್ತಿಕೊಂಡಿತು. ಅದರ ಪರಿಣಾಮವಾಗಿ ಅವರು ಮೃತರಾದರು. ಅಗಲಿದ ಸದಸ್ಯರ ಕುಟುಂಬಕ್ಕೆ ಸಹಾನುಭೂತಿ ವ್ಯಕ್ತ ಪಡಿಸಲು, ಸಭೆಯ ಅನುಮತಿ ಕೋರುತ್ತೇನೆ..

ಸದನದ ಪರವಾಗಿ, ಈ ಅಧಿವೇಶನದಲ್ಲಿ ಭಾಗವಹಿಸಿರುವ ಆಯಾ ರಾಜ್ಯಗಳ ಪ್ರತಿನಿಧಿಗಳಿಗೆ ಸ್ವಾಗತ ಕೋರುತ್ತೇನೆ. ಸಭೆ ಕೈಗೆತ್ತಿಕೊಂಡಿರುವ ಮಹಾನ್ ಕರ್ತವ್ಯದಲ್ಲಿ ಸಹಕಾರ ನೀಡಲು ಇತರ ಪ್ರತಿನಿಧಿಗಳು ಆಗಮಿಸುವ ಭರವಸೆ ಹೊಂದಿದ್ದೇನೆ. ರಾಷ್ಟ್ರದ ಪುತ್ರ ಪುತ್ರಿಯರು, ಅವರು ಎಲ್ಲೆ ಇರಲಿ, ಬ್ರಿಟಿಷ್ ಇಂಡಿಯಾದಲ್ಲೋ ಅಥವಾ ಬೇರೆ ರಾಜ್ಯಗಳಲ್ಲೋ, ಯಾವುದೇ ಸಮುದಾಯಕ್ಕೆ ಸೇರಿರಲಿ ಅವರೆಲ್ಲರ ತಜ್ಞ ಸಹಕಾರದ ಅಗತ್ಯ, ಪ್ರಸ್ತುತ ಕೈಗೆತ್ತಿಕೊಂಡಿರುವ ಬಲು ದೊಡ್ಡ ಕರ್ತವ್ಯ ನಿರ್ವಹಣೆಗೆ ಬೇಕಿದೆ ಎಂಬುದನ್ನು ನಾನು ಒತ್ತಿ ಹೇಳಬೇಕಿಲ್ಲ. ನಾವೀಗ ರಚಿಸಲಿರುವ ಸಂವಿಧಾನವನ್ನು ನಮ್ಮ ದೇಶದ ಭವಿಷ್ಯ ಬಹಳಷ್ಟು ಅವಲಂಬಿಸಿದೆ. ಕೇವಲ ನಮ್ಮ ರಾಷ್ಟ್ರದ ಜನತೆ ಮಾತ್ರವಲ್ಲದೆ, ಇಡೀ ವಿಶ್ವದ ಜನಸಮುದಾಯ ಗಮನಿಸುತ್ತಿದೆ. ಜನರೆಲ್ಲ ಕುತೂಹಲ ಮತ್ತು ಆತಂಕದಿಂದ ನೋಡುತ್ತಿರುವಾಗ, ನಾವು ದೇಶದ ಯಾವುದೇ ಭಾಗದಿಂದ, ಯಾವುದೇ ಕೋಮನ್ನು ಪ್ರತಿನಿಧಿಸಲಿ, ನಮ್ಮ ಕರ್ತವ್ಯದ ಪೂರೈಕೆಗೆ, ಕೊಡುಗೆ ನೀಡುವ ಹೊಣೆ ನಮ್ಮದಾಗಿರುತ್ತದೆ.

ನಮ್ಮ ನೆರೆಯ ಹಾಗೂ ಭೂತಪೂರ್ವ ಸಹಭಾಗಿ ಬರ್ಮಾದಲ್ಲಿ ಸಂವಿಧಾನ ರಚನಾಸಭೆ ಚುನಾಯಿತಗೊಂಡಿದ್ದು, ಅದರ ಧ್ಯೇಯೋದ್ದೇಶಗಳೂ ನಮ್ಮವೆ ಆಗಿರುವ ವರ್ತಮಾನ ಬಂದಿದೆ. ಈಗ ಅಲ್ಲಿಯ ಜನತೆಯ ಮುಂದಿರುವುದು ಸ್ವತಂತ್ರ ಬರ್ಮಾ, ಅದರ ಬೃಹತ್ ಸಭೆಗೆ, ಸದನದ ಪರವಾಗಿ, ಸ್ವಾಗತ ಕೋರಿ, ಶುಭ ಹಾರೈಸೋಣವೆ? ಅವು ಸಾಧಿಸಬೇಕಿರುವ ಗುರಿಯ ಹಾದಿಯಲ್ಲಿ, ಅದರ ಕರ್ತವ್ಯ ಫಲಪ್ರದವಾಗಲೆಂದು ಆಶಿಸೋಣವೆ?

ಕಳೆದ ಬಾರಿ ನಾವು ಸಭೆ ಸೇರಿದಾಗ, ಬ್ರಿಟಿಷ್ ಸರ್ಕಾರವು ಜೂನ್ ೧೯೪೭ರ ವೇಳೆಗೆ ಆಡಳಿತವನ್ನು ಹಸ್ತಾಂತರಿಸುವುದಾಗಿ, ತಮ್ಮ ಉದ್ದೇಶವನ್ನು ಘೋಷಿಸಿತ್ತು. ಸಹಜವಾಗಿ ಇದು ನಮ್ಮ ಕೆಲಸವನ್ನು ತ್ವರಿತಗೊಳಿಸಲು ಅಗತ್ಯ ಪಡಿಸಿದೆ. ನಾವು ವೃಥಾ ಕಾಲಹರಣ ಮಾಡದೆ ಕರ್ತವ್ಯೋನ್ಮುಖರಾಗಬೇಕು. ಆದಷ್ಟು ಬೇಗನೆ ನಮ್ಮ ಸಂವಿಧಾನ ರಚನೆಯಲ್ಲಿ ತೊಡಗಬೇಕು. ಬ್ರಿಟಿಷ್ ಸರ್ಕಾರವು ನಿಗದಿತ ವೇಳೆಗೆ ಮುಂಚೆಯೇ, ಆಡಳಿತ ಹಸ್ತಾಂತರಕ್ಕೆ ಪೂರ್ವಸಿದ್ಧತೆ ನಡೆಸಲು ಬದ್ಧಕಂಕಣವಾಗಿದೆ. ಒಂದೆಡೆ ಈ ಕೆಲಸ ಭರದಿಂದ ನಡೆಯುತ್ತಿದೆ; ನಾವು ಸಂವಿಧಾನಬದ್ಧ ಆಡಳಿತಕ್ಕೆ ಅಗತ್ಯವಿರುವ ಭಾರತ ಸಂವಿಧಾನದೊಡನೆ ಸಕಾಲದಲ್ಲಿ ಸಜ್ಜುಗೊಳ್ಳಬೇಕು. ಸಭೆಯು ತನ್ನ ಕಾರ್ಯವನ್ನು ಚುರುಕುಗೊಳಿಸುವುದೆಂದು ನಾನು ನಂಬುತ್ತೇನೆ. ಸಭೆಯ ಮುಂದೆ, ತೊಂದರೆಗಳು ಅಡ್ಡಿ ಅಡಚಣೆಗಳು, ಉಂಟಾಗುವುದರಲ್ಲಿ ಸಂದೇಹವಿಲ್ಲ. ನಾವು ದೃಢ ಸಂಕಲ್ಪದಿಂದ ಮುನ್ನಡೆದರೆ ಅವುಗಳನ್ನು ಎದುರಿಸಬಲ್ಲೆವು.

ಸಭೆಯು ಹಲವಾರು ಉಪಸಮಿತಿಗಳನ್ನು ರಚಿಸಿದ್ದು ನೆನಪಿನಲ್ಲಿರಬಹುದು. ಇಷ್ಟರಲ್ಲೆ ನಾಲ್ಕು ಸಮಿತಿಗಳ ವರದಿಯನ್ನು ಸದನದ ಮುಂದಿಡಲಾಗುತ್ತದೆ. ಸಂವಿಧಾನ ರಚನೆಗೆ ಆಧಾರವಾಗಿರುವ ನಿಯಮಗಳನ್ನು ರೂಪಿಸಲು, ಸಮಿತಿಗಳನ್ನು ಸಭೆ ನೇಮಕ ಮಾಡಬೇಕೆಂಬುದು ನನ್ನ ಸಲಹೆ. ಆ ನಿಯಮಗಳು ಒಪ್ಪಿಗೆಯಾದ ನಂತರ, ಒಂದು ಸೂಕ್ತ ಏಜೆನ್ಸಿ ಸಂವಿಧಾನದ ಕರಡು ತಯಾರಿಕೆಯಲ್ಲಿ ತೊಡಗಬೇಕು. ಹಾಗೆ ಸಿದ್ಧಗೊಂಡ ಕರಡು, ಈ ಸಭೆಯ ಮುಂದೆ ಸಾದ್ಯಂತ ಪರಿಶೀಲನೆಗೆ ಒಳಪಡಬೇಕು. ನನ್ನದೊಂದು ಸಲಹೆ; ಕರಡು

ತಯಾರಿಕೆಗೆ ಆಧಾರವಾಗಿರುವ ನಿಯಮಗಳನ್ನು ರಚಿಸಲು ನೇಮಕವಾಗಿರುವ ಉಪಸಮಿತಿ ತನ್ನ ವರದಿಯನ್ನು ಸಕಾಲದಲ್ಲಿ ಸಲ್ಲಿಸಬೇಕು. ಆ ವರದಿ ಬರುವ ಜೂನ್ ಯಾ ಜುಲೈ ತಿಂಗಳಿನಲ್ಲಿ ಸಭೆಯ ಪರಿಶೀಲನೆಗೆ ಒಳಪಡಬೇಕು. ಸಭೆಯ ವರದಿಯನ್ನು ಪರಿಶೀಲಿಸಿದ ನಂತರ, ಕರಡು ಸಿದ್ಧಗೊಳ್ಳಬಹುದು. ಸಭೆಯ ಸೆಪ್ಟೆಂಬರ್ ಮಾಹೆಯಲ್ಲಿ ಸಮಾವೇಶಗೊಳ್ಳಬಹುದು. ಅಕ್ಟೋಬರ್ ಆಖ್ಯೆರಿನೊಳಗೆ ಸಂವಿಧಾನಕ್ಕೆ ಅಂತಿಮ ರೂಪ ಕೊಡಬಹುದು. ವ್ಯವಹಾರ ಸಮಿತಿ ಮತ್ತು ನಾನು ಆಲೋಚಿಸಿರುವಂತೆ, ಇದುವೆ ಸ್ಥೂಲವಾದ ಕ್ರಮಾದೇಶವಾಗುತ್ತದೆ. ಸಂವಿಧಾನ ತ್ವರಿತ ಗತಿಯಲ್ಲಿ ಸಿದ್ಧಗೊಳ್ಳುವುದು ಅಗತ್ಯ. ಮುಂದೆ ಬ್ರಿಟಿಷ್ ಸರ್ಕಾರ ನಿಗದಿಗೊಳಿಸಿದ ವೇಳೆಗೆ ಈ ಆಡಳಿತ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಳಿಸುವುದು ಸಾಧ್ಯವಾಗುತ್ತದೆ. ನಾನು ಮಾಡಿರುವ ಸಲಹೆ ತಾತ್ಪೂರ್ತಿಕ. ವಿದ್ಯಮಾನಗಳು ಬೆಳೆಯುತ್ತಿದ್ದಂತೆ, ಸಂವಿಧಾನ ರಚನಾಸಭೆ ತನ್ನ ಕಾರ್ಯಪೂರೈಕೆಗೆ ಯಾವೆಲ್ಲ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೋ, ಯಾರೂ ಖಚಿತವಾಗಿ ಹೇಳಲಾರರು. ನಾವು ನಮ್ಮ ಗುರಿಯೇನೆಂಬುದನ್ನು ವಿಶದಪಡಿಸಿದ್ದೇವೆ. ಸಂವಿಧಾನದ ರಚನೆ ಅದಕ್ಕೆ ಬದ್ಧವಾಗಿರತಕ್ಕದು.

ನಾವು ತಯಾರಿಸಲಿರುವ ಸಂವಿಧಾನದ ಕರಡು ಯಾವುದೇ ರೂಪದಲ್ಲಿರಲಿ, ಅವಿಭಾಜ್ಯ ಭಾರತಕ್ಕಾಗಿಯೋ ಅಥವಾ ಅದರ ಭಾಗಗಳಿಗಾಗಿಯೋ, ಹೇಗೇ ಇರಲಿ, ಅದರ ವ್ಯಾಪ್ತಿಗೊಳಪಟ್ಟ ಎಲ್ಲರಿಗೂ ಅದು ತೃಪ್ತಿ ತರುವಂತೆ ನಾವು ನೋಡಿಕೊಳ್ಳಬೇಕು. ಭಾರತದೊಳಗಣ ವಿವಿಧ ರಾಜ್ಯಗಳ ಹಾಗೂ ವಿವಿಧ ಪ್ರಾಂತ್ಯಗಳ ಒಕ್ಕೂಟವು, ಕ್ಯಾಬಿನೆಟ್ ಮಿಷನ್ ಮೇ ೧೬ರ ಹೇಳಿಕೆಯ ಮುಖ್ಯಾಂಶವಾಗಿದ್ದು ನಾವು ಅದನ್ನು ಒಪ್ಪಿಕೊಂಡಿದ್ದೇವೆ. ಒಕ್ಕೂಟದಲ್ಲಿ ಎಲ್ಲ ಪ್ರಾಂತ್ಯಗಳೂ ಸೇರದೆ ಇರಬಹುದು. ಅಂತಹ ದುರದೃಷ್ಟಕರ ಸನ್ನಿವೇಶ ಉದ್ಭವಿಸಿದರೆ, ನಾವು ಆಂಶಿಕ ಸಂವಿಧಾನದಿಂದಲೆ ತೃಪ್ತರಾಗಬೇಕಾಗುವುದು. ಅಂತಹ ಸಂದರ್ಭದಲ್ಲಿ ದೇಶದ ಎಲ್ಲ ಭಾಗಗಳಿಗೂ ಅನ್ವಯಿಸುವ, ಒಂದೇ ನಿಯಮವಿರುವಂತೆ ನಾವು ಒತ್ತಾಯಿಸಬೇಕು; ಅದು ಕಾರ್ಯಸಾಧ್ಯವೂ ಹೌದು. ಯಾವುದೇ ಅನಾಸಕ್ತ ಭಾಗದ ಮೇಲೆ ಸಂವಿಧಾನವನ್ನು ಹೇರಲಾಗದು. ಇದರರ್ಥ ಭಾರತ ಮಾತ್ರವಲ್ಲದೆ, ಪ್ರಾಂತ್ಯಗಳೂ ವಿಭಜನೆಗೊಳ್ಳಬಹುದು. ಅಂತಹ ಪರಿಸ್ಥಿತಿಯನ್ನು ಎದುರಿಸಲು ನಾವು ಸಿದ್ಧರಿರಬೇಕು. ಸಭೆಯ ಅಂತಹ ವಿಭಜನೆಗೂ ಹೊಂದಿಕೊಳ್ಳುವ ಸಂವಿಧಾನವನ್ನು ರಚಿಸಬೇಕಾಗುತ್ತದೆ. ಕರ್ತವ್ಯದ ಆಗಾಧತೆ ನಮ್ಮನ್ನು ಧೃತಿಗೆಡಿಸದಿರಲಿ. ಅಭಿವೃದ್ಧಿಯ ಹಾದಿಯಿಂದ ನಮ್ಮನ್ನು ಪಲ್ಲಟಗೊಳಿಸದಿರಲಿ. ವಿಶ್ವಾಸದಿಂದ ಮುನ್ನಡೆಯೋಣ. ನಮ್ಮನ್ನು ಇಲ್ಲಿಗೆ ಕಳುಹಿಸಿಕೊಟ್ಟ ರಾಷ್ಟ್ರದ ಮೇಲೆ ಭರವಸೆ ಇಡೋಣ. ಕೆಲವು ಸದಸ್ಯರು ಮಾತನಾಡಲು ಇಚ್ಛಿಸುತ್ತಾರೆಂದುಕೊಂಡಿದ್ದೇನೆ. ಸರ್. ಬಿ.ಎಲ್. ಮಿಟ್ಟರ್ ಅವರು ಪ್ರಾರಂಭಿಸಲೆಂದು ಕೋರುತ್ತೇನೆ.

**ಸರ್ ಬ್ರಜೇಂದ್ರಲಾಲ್ ಮಿಟ್ಟರ್** : ತಾವು ಸೌಜನ್ಯಪೂರ್ವಕವಾಗಿ ನಮ್ಮನ್ನು ಆಹ್ವಾನಿಸಿದ್ದೀರಿ; ಧನ್ಯವಾದಗಳು. ರಾಜ್ಯಗಳ ಪ್ರತಿನಿಧಿಗಳಾಗಿ ನಾವಿಲ್ಲಿಗೆ ಆಗಮಿಸಿದ್ದೇವೆ. ಇನ್ನಷ್ಟು ಪ್ರತಿನಿಧಿಗಳು ಬಂದಿದ್ದರೆ ಒಳಿತಾಗುತ್ತಿತ್ತು. ಮುಂದಿನ ಅಧಿವೇಶನದಲ್ಲಿ ರಾಜ್ಯಗಳ ಪ್ರತಿನಿಧಿಗಳ ಆಸನಗಳು ಖಾಲಿಯಾಗಿ ಉಳಿಯುವುದಿಲ್ಲವೆಂಬ ಖಚಿತ ಭರವಸೆ ಹೊಂದಿದ್ದೇನೆ. ಬರೋಡಾ ನಿಯೋಗ, ತೀವ್ರ ಆಘಾತಕ್ಕೊಳಗಾಗಿದೆ. ಅದರ ಓರ್ವ ಸದಸ್ಯರು ಸಭೆಯ ಅಧಿವೇಶನದಲ್ಲಿ ಪಾಲ್ಗೊಳ್ಳಲು ಆಗಮಿಸುತ್ತಿದ್ದ ಸಂದರ್ಭದಲ್ಲಿ ದುರಂತ ಸಂಭವಿಸಿದೆ.

ಮಾನ್ಯರೆ, ಸ್ವತಂತ್ರ ಭಾರತದ ಸಂವಿಧಾನ ರಚನೆಯಲ್ಲಿ ಈ ಸಭೆ ಉದ್ಯುಕ್ತವಾಗಿದೆ. ನಮ್ಮ ರಾಜ್ಯಗಳು ಭಾರತದ ಅವಿಭಾಜ್ಯ ಅಂಗಗಳು. ಬ್ರಿಟಿಷ್ ಇಂಡಿಯಾದೊಡನೆ ಸ್ವಾತಂತ್ರ್ಯವನ್ನು ಹಂಚಿಕೊಳ್ಳುತ್ತೇವೆ. ಆದುದರಿಂದ ಸಂವಿಧಾನ ರಚನೆಯ ಹೊಣೆಗಾರಿಕೆಯಲ್ಲಿ ನಾವು ಭಾಗಿಯಾಗುತ್ತೇವೆ. (ಘೋಷಾನುಮೋದನೆ).

ನಾವಿಲ್ಲಿ, ಭಾರತೀಯರೆಂಬ ಹಕ್ಕಿನಿಂದ ಬಂದಿದ್ದೇವೆ; ಮೌನಸಮ್ಮತಿಯಿಂದಲ್ಲ. ಸರ್ವಸಮ್ಮತವಾದ ಕರ್ತವ್ಯವನ್ನು ನಿರ್ವಹಿಸುವಲ್ಲಿ, ನಮ್ಮ ಗಣನೀಯ ಕೊಡುಗೆ ನೀಡಲು ಸಮರ್ಥರಾಗಿದ್ದೇವೆ. ನೂರೈವತ್ತು ವರುಷಗಳ ಬ್ರಿಟಿಷ್ ಏಕಚ್ಛತ್ರಾಧಿಪತ್ಯ ಬ್ರಿಟಿಷ್ ಇಂಡಿಯಾದಲ್ಲಿ ಏಕರೂಪತೆಯನ್ನು ಸಾಧಿಸಿದೆ. ಆದರೆ

ರಾಜ್ಯಗಳಲ್ಲಿ ಅಗಾಧ ವೈವಿಧ್ಯವಿದೆ. ಕೆಲವು ರಾಜ್ಯಗಳು ಬ್ರಿಟಿಷ್ ಇಂಡಿಯಾದಂತೆಯೇ ಮುಂದುವರೆದಿವೆ. ಅಲ್ಲಿಯ ಜನರು ಆಡಳಿತದೊಡನೆ ನಿಕಟ ಸಂಪರ್ಕ ಹೊಂದಿರುತ್ತಾರೆ. ಕೆಲವೆಡೆ ಸಂಪೂರ್ಣ ನಿರಂಕುಶ ಪ್ರಭುತ್ವವಿದೆ. ಕೆಲವೆಡೆ ಊಳಿಗಮಾನ್ಯ ಪದ್ಧತಿ ಮತ್ತೆ ಕೆಲವು ಅತಿ ಪುರಾತನ. ಇವೆಲ್ಲವನ್ನೂ ಭಾರತೀಯ ಸಂವಿಧಾನದ ತೆಕ್ಕೆಯೊಳಗೆ ತರಬೇಕು. ಏಕೆಂದರೆ, ಭಾರತದ ೪೦೦ ದಶಲಕ್ಷ ಜನಸಂಖ್ಯೆಯಲ್ಲಿ ನಾವು ೯೩ ದಶಲಕ್ಷ ಪ್ರಜೆಗಳೂ ಸೇರುತ್ತೇವೆ. ಪ್ರಧಾನ. ರಚನೆಯನ್ನು ಕೆಡಿಸುವುದು ನಮ್ಮ ಉದ್ದೇಶವಲ್ಲ (ಈ ರಚನೆಯನ್ನು ಸಭೆಯ ಮೊದಲನೆ ನಿಕಾಯದಲ್ಲಿ ವಿಶದ ಪಡಿಸಲಾಗಿದೆ). ಆದರೆ ಈ ರಚನೆಯಲ್ಲಿ ವೈವಿಧ್ಯವನ್ನು ಹುದುಗಿಸಲೆತ್ನಿಸುತ್ತಿದ್ದೇವೆ. ತನ್ಮೂಲಕ ನಮ್ಮ ಶಕ್ತ್ಯನುಸಾರ ಅದರಲ್ಲಿ ಸರಿಹೊಂದಬಹುದು.

ವೈವಿಧ್ಯದಲ್ಲಿ ಏಕತೆ ಸಾಧಿಸುವುದು ನಮ್ಮ ಉದ್ದೇಶ. ನಮ್ಮೊಡನೆ ಬೆರೆಯುವರಲ್ಲಿ ತುಸು ಸಹನೆ ತೋರುವಂತೆ ನಮ್ಮ ಬ್ರಿಟಿಷ್ ಇಂಡಿಯಾ ಸಹವರ್ತಿಗಳನ್ನು ಪ್ರಾರ್ಥಿಸುತ್ತೇನೆ. ನಾವೂ ಸಹ ಅವರೊಡನೆ ಮುನ್ನಡೆಯಲು ಬಯಸುತ್ತೇವೆ. ಆದರೆ ನಮ್ಮ ಗತಿಗೆ ಚ್ಯುತಿ ಬಾರದಂತೆ ನಿಯಂತ್ರಣ ಸಾಧಿಸಬೇಕಾಗುತ್ತದೆ. ರಾಷ್ಟ್ರಗಳ ಒಕ್ಕೂಟದಲ್ಲಿ ಭಾರತ ತಲೆಯೆತ್ತಿ ನಡೆಯುವಂತಾಗಲು, ಭಾರತದ ಒಕ್ಕೂಟ ಕೇಂದ್ರದಲ್ಲಿ ಸಾಕಷ್ಟು ಬಲಶಾಲಿಯಾಗಿರಬೇಕೆಂಬ ತಮ್ಮ ಆಶಯಕ್ಕೆ ನಮ್ಮ ಸಹಮತವಿದೆ. ಪ್ರತ್ಯೇಕ ಸ್ವತಂತ್ರ ಅಸ್ತಿತ್ವದಲ್ಲಿ ನಮಗೆ ನಂಬಿಕೆ ಇಲ್ಲ. ಅದರಿಂದ ನಮ್ಮ ಕೇಂದ್ರ ದುರ್ಬಲಗೊಳ್ಳುತ್ತದೆ. ನಾವು ಸಹಕಾರ ಮನೋಭಾವದಿಂದ ನಿಮ್ಮೊಂದಿಗೆ ಒಂದಾಗುತ್ತೇವೆ. ಕೇಂದ್ರಕ್ಕೆ ಬಾಧಕವಾಗುವಂತೆ, ವಿಶೇಷ ಸವಲತ್ತಿಗಾಗಿ ಅಪೇಕ್ಷಾ ಮನೋಭಾವದಿಂದ ಸೇರುತ್ತಿಲ್ಲ. ವಿಭಿನ್ನ ಘಟಕಗಳ ಪ್ರತಿಭೆ ಮತ್ತು ಸಾಮರ್ಥ್ಯಕ್ಕನುಗುಣವಾಗಿ ಸಂವಿಧಾನವನ್ನು ರೂಪಿಸಲು ಯತ್ನಿಸುತ್ತೇವೆ. ಅದರಿಂದ ಸಂವಿಧಾನವು ಸಹಜವಾಗಿಯೂ ಆರೋಗ್ಯಕರವಾಗಿ ರೂಪುಗೊಳ್ಳುತ್ತದೆ.

ಮಾನ್ಯರೆ, ಮತ್ತೆ ತಮಗೆ ಧನ್ಯವಾದಗಳು.

**ಸರ್ದಾರ್ ಕೆ.ಎಂ. ಪಣಿಕ್ಕರ್** (ಬಿಕಾನೀರ್) : ಸನ್ಮಾನ್ಯ ಅಧ್ಯಕ್ಷರೆ, ಬ್ರಜೇಂದ್ರ ಮಿಟ್ಟರ್ ಅವರ ಭಾವಪೂರ್ಣ ಮಾತಿನ ಧಾಟಿಯಲ್ಲೆ, ನಾನೂ ಸಹ, ತಾವು ಸ್ವಾಗತಿಸಿರುವ ರಾಜ್ಯಗಳ ಪ್ರತಿನಿಧಿಗಳಾಗಿ ಒಂದುಗೂಡಿ ಇಲ್ಲಿಗೆ ಆಗಮಿಸಿ ತಮ್ಮ ಸ್ಥಾನವನ್ನಲಂಕರಿಸಿರುವ ಪ್ರತಿನಿಧಿಗಳ ಪರವಾಗಿ ತಮಗೆ ನಮ್ಮ ಧನ್ಯವಾದಗಳನ್ನರ್ಪಿಸಲು ಇಚ್ಛಿಸುತ್ತೇನೆ. ವಾಸ್ತವವಾಗಿ ಈ ದಿನ ಎಂದು ಬಂದೀತೆಂಬ ನಿರೀಕ್ಷಣೆಯಲ್ಲಿದ್ದೆವು. ನಮ್ಮದೊಂದು ಕನಸು ಇಂದು ನನಸಾಗಿದೆ. ಏಕೆಂದರೆ, ಇಡೀ ಭಾರತದ ಪರವಾಗಿ ಮಾತನಾಡಲಿರುವ ಪ್ರತಿನಿಧಿಗಳು ಏಕತ್ರ ಸಂಘಟಿಸಿ ಸಲಹೆ ಸೂಚನೆಗಳನ್ನು ಪಡೆದಿರುವುದು. ಭಾರತದ ಇತಿಹಾಸದಲ್ಲಿ ಒಂದು ಅಭೂತಪೂರ್ವ ಘಟನೆ. ಭಾರತದ ವಿವಿಧ ವರ್ಗಗಳು ಸಭೆ ಸೇರಿರುವ ನಿದರ್ಶನಗಳಿವೆ. ನಾವು ಕೂಡ, ರಾಜ್ಯ ಪ್ರತಿನಿಧಿಗಳಾಗಿ ಅಂತರರಾಜ್ಯ ಸಭೆಗಳಲ್ಲಿ ಆಗಿಂದ್ದಾಗೆ ಸೇರುವುದುಂಟು. ಆದರೆ ನನಗೆ ಜ್ಞಾಪಕವಿರುವಂತೆ, ಭಾರತದ ಇತಿಹಾಸದಲ್ಲಿ ದೇಶದ ಎಲ್ಲ ಭಾಗಗಳಿಂದಲೂ ಪ್ರತಿನಿಧಿಗಳು ಆಗಮಿಸಿ ಒಂದೆಡೆ ಕಲೆತು, ತಮ್ಮ ಭವಿಷ್ಯವನ್ನು ನಿರ್ಧರಿಸುತ್ತಿರುವ ಘಟನೆ ಹಿಂದೆಂದೂ ನಡೆದಿಲ್ಲ. ಆದುದರಿಂದ ಕೆಲ ಪ್ರತಿನಿಧಿಗಳು ತಮ್ಮ ಸ್ಥಾನಗಳಲ್ಲಿ ಆಸೀನರಾಗಿರುವುದಕ್ಕೆ, ಒಂದು ಸಾಂಕೇತಿಕ ಮೌಲ್ಯವಿದೆ. ಇದು ಇಲ್ಲಿ ಸಭೆ ಸೇರಿರುವ ಒಟ್ಟು ಪ್ರತಿನಿಧಿಗಳ ಸಂಖ್ಯೆಗಿಂತಲೂ ಹೆಚ್ಚು ತೂಗುತ್ತದೆ. ಅಥವಾ ಸ್ವತಃ ತಾವೇ ತಾವಾಗಿ ಸೇರಿರುವ ಪ್ರತಿನಿಧಿಗಳ ಔಚಿತ್ಯ ಹೀನತೆಯನ್ನೂ ಮಸುಕುಗೊಳಿಸುತ್ತದೆ. ಇದು ಮುಂದಿನ ದಿನಗಳಲ್ಲಿ ಕಾಣಲಿರುವ ಏಕತೆಯ ಕುರುಹು. ರಾಜ್ಯ ಪ್ರತಿನಿಧಿಗಳು ಮತ್ತು ಭಾರತೀಯ ಪ್ರಾಂತ್ಯಗಳ ನಡುವಣ ಪರಸ್ಪರ ಸಹಕಾರದೊಡನೆ ನಡೆಯುವ ಕಾರ್ಯವೈಖರಿಯಿಂದ, ಹೊಸತೊಂದು ಭಾರತ ಒಕ್ಕೂಟದ ಉದಯವನ್ನು ನಿರೀಕ್ಷಿಸಬಹುದು.

ಮುಖ್ಯ ವಿಷಯವನ್ನು ಪ್ರಸ್ತಾವಿಸುವ ಮುನ್ನ ನಾವಿಲ್ಲಿ ಬಂದು ಕೂರುವುದಕ್ಕೆ ಅವಕಾಶ ಮಾಡಿಕೊಟ್ಟ ಸಂಧಾನ ಸಮಿತಿಯ ಕಾರ್ಯಸಾಧನೆಗಾಗಿ ಸಮಿತಿಗೆ ಧನ್ಯವಾದಗಳನ್ನು ಸಮರ್ಪಿಸಬೇಕು. ಅದರ ಬಗ್ಗೆ ಹೆಚ್ಚು ಹೇಳುವುದೇನಿಲ್ಲ. ಆದರೆ ಇಷ್ಟನ್ನು ಮಾತ್ರ ಹೇಳಬಹುದು. ನಿಮ್ಮ ಪ್ರತಿನಿಧಿಗಳು ಭಾರತೀಯ ರಾಜ್ಯಗಳ

ಪ್ರಶ್ನೆಯನ್ನು ಬಗೆಹರಿಸುವಲ್ಲಿ, ವಿವೇಕ, ಧೈರ್ಯ ಮತ್ತು ದೂರದೃಷ್ಟಿ ತೋರದೆ ಇದ್ದಿದ್ದರೆ, ಪ್ರಾರಂಭದಿಂದಲೂ ಈ ಕಾರ್ಯದಲ್ಲಿ ತೊಡಗಬೇಕೆಂದು ತವಕಿಸುತ್ತಿದ್ದ ನಮಗಾರಿಗೂ ಇಲ್ಲಿ ಬಂದು ಕೂರಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಈ ಕೆಲಸವನ್ನು ಆಗಮಾಡಿಸಿದ ಸಂಧಾನ ಸಮಿತಿಗೆ ಇಲ್ಲಿರುವ ಎಲ್ಲ ಪ್ರತಿನಿಧಿಗಳ ಪರವಾಗಿ ಧನ್ಯವಾದಗಳು. ಹೌದು, ನಾವು ಕೆಲವೇ ರಾಜ್ಯಗಳನ್ನು ಪ್ರತಿನಿಧಿಸುತ್ತಿದ್ದೇವೆ. ಭಾರತೀಯ ರಾಜ್ಯಗಳ ೯೩ ದಶಲಕ್ಷ ಜನರನ್ನು ಪ್ರತಿನಿಧಿಸುವ ಎಲ್ಲರೂ ಇಲ್ಲಿಗೆ ಆಗಮಿಸಿಲ್ಲ. ಆದರೆ ಒಂದು ವಿಷಯವನ್ನು ಮಾತ್ರ ಹೇಳಬಯಸುತ್ತೇನೆ. ನಾವು ನಗಣ್ಯರಾದ ಅಲ್ಪ ಸಂಖ್ಯಾತರಲ್ಲ. ಇಲ್ಲಿರುವ ನಾವು, ರಾಜ್ಯಗಳ ೯೩ ದಶಲಕ್ಷ ಪ್ರಜೆಗಳ ಪೈಕಿ ೨೦ ದಶಲಕ್ಷಕ್ಕೂ ಕಡಿಮೆ ಇಲ್ಲದಂತೆ ಪ್ರಜೆಗಳ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿದ್ದೇವೆ. ಮತ್ತು ಇನ್ನೂ ಹತ್ತು ಹದಿನೈದು ದಶಲಕ್ಷ ಪ್ರಜೆಗಳ ಪ್ರತಿನಿಧಿಗಳು ತಾವು ಸಂವಿಧಾನ ರಚನಾಸಭೆಯಲ್ಲಿ ಭಾಗವಹಿಸಬೇಕೆಂಬ ಇರಾದೆಯನ್ನು ಔಪಚಾರಿಕವಾಗಿ ಪ್ರಕಟಿಸಿದ್ದಾರೆ. ಮತ್ತೆ ಆ ವಿಷಯಕ್ಕೆ ಬಂದಾಗ ವಾಸ್ತವವಾಗಿ ಭಾರತೀಯ ರಾಜ್ಯಗಳ ಜನತೆಯನ್ನು ಗಮನಾರ್ಹವಾಗಿ ಪ್ರತಿನಿಧಿಸುವ ನಾವು ಇಲ್ಲಿ ಒಂದೆಡೆ, ಸಂವಿಧಾನ ರಚನಾ ಸಭೆಯಲ್ಲಿ ಸೇರಿದ್ದೇವೆ.

ಇಲ್ಲಿ, ಈಗಲೆ ನಾನೊಂದು ವಿಷಯವನ್ನು ನಿವೇದಿಸಬೇಕಿದೆ. ನಾವಿಲ್ಲಿ ಬಲವಂತಕ್ಕೆ ಮಣಿದು ಬಂದಿಲ್ಲ. ಅಥವಾ ಯಾವುದೇ ಒತ್ತಡಕ್ಕೆ ತಲೆಬಾಗಿ ಬಂದುದಲ್ಲ. ರಾಜ್ಯಗಳಿಗೆ ಸಂಬಂಧಿಸಿದಂತೆ, ಬಲಾತ್ಕಾರ ಅಥವಾ ಒತ್ತಡ ಹೇರುವ ಅವಕಾಶವೆ ಒದಗಿಬಂದಿಲ್ಲ. ಮೊದಲಿನಿಂದಲೂ ಇದೊಂದು ಸ್ವಪ್ರೇರಿತ ಸಾಂಗತ್ಯ ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ನಾವು ಒತ್ತಾಯಕ್ಕೆ ಮಣಿದು ಬಂದಿದ್ದೇವೆಂಬ ಮಾತನ್ನು ಯಾರಾದರೂ ಅವರು ಎಷ್ಟೇ ಉನ್ನತ ಸ್ಥಾನದಲ್ಲಿರಲಿ, ಆಡಿದರೆ ಅವರಿಗೆ ವಾಸ್ತವದ ಅರಿವಿಲ್ಲವಷ್ಟೆ. ಒತ್ತಾಯಕ್ಕೆ ಪಕ್ಕಾಗುವ ಮುನ್ನ ಅರೆಕ್ಷಣ ಯೋಚಿಸಿ ನೋಡುವಂತೆ ಯಾರಾದರೂ ಮಹನೀಯರು, ನಮಗೆ ಕಿವಿಮಾತು ಹೇಳುವುದಿದ್ದರೆ, ಅಂಥವರು ತಮ್ಮ ಟೀಕೆಯಿಂದ ಸೂಚ್ಯವಾಗಿ ನಮ್ಮ ವಿವೇಕಕ್ಕೆ ಮಸಿ ಬಳಿಯುತ್ತಿದ್ದಾರೆಂದು, ಸ್ಪಷ್ಟವಾಗಿ, ನಿಸ್ಸಂದಿಗ್ಧವಾಗಿ ಹೇಳುತ್ತೇನೆ. ಭಾರತಕ್ಕೆ ಸಂಬಂಧಿಸಿದ ವಿಷಯಗಳಲ್ಲಿ, ನಮ್ಮ ರಾಷ್ಟ್ರಭಕ್ತಿಗೆ ಏನಿದೆ ಕೊರತೆ? ಇಂತಹ ಘನಕಾರ್ಯದಲ್ಲಿ ತೊಡಗುವುದು ನಮ್ಮ ಹಕ್ಕು, ಕರ್ತವ್ಯವೂ ಹೌದು. ಈ ಬಗ್ಗೆ ಒತ್ತಡವೇಕೆ? ನಮಗೇನೂ ಕಾಳಜಿ ಇಲ್ಲವೆ. ಆದುದರಿಂದ ಇಲ್ಲಿ, ಈ ಹೊತ್ತಿನಲ್ಲಿ, ನಮ್ಮ ಮೇಲೆ ಯಾರೂ ಒತ್ತಡ ಹೇರಿಲ್ಲವೆಂದು ದೃಢವಾಗಿ ಹೇಳುತ್ತಿದ್ದೇನೆ. ಆದುದರಿಂದ ಒಬ್ಬರ ಮೇಲೊಬ್ಬರು ಬಲಾತ್ಕಾರ ಹೇರುವಂತೆ ಆಡಿದ ವ್ಯಂಗ್ಯೋಕ್ತಿ, ಅವಿವೇಕವೂ ಅಹಿತಕರವೂ ಹೌದು.

ಇನ್ನೊಂದು ಮಾತು ಹೇಳುವುದಿದೆ; ಅದು ನಿರ್ವಿವಾದ. ಯಾವ ಪ್ರತಿಫಲಾಪೇಕ್ಷೆಯಿಂದಲೂ ನಾವಿಲ್ಲಿ ಸಮಾವೇಶಗೊಂಡಿಲ್ಲ. ಭಾರತ ಸ್ವಾತಂತ್ರ್ಯದ ಆಯೋಜನೆಯಂತಹ ಮಹಾನ್ ಕರ್ತವ್ಯದಲ್ಲಿ ಸಹಕರಿಸುವುದು ನಮ್ಮ ಕರ್ತವ್ಯ. ಹಾಗಾಗಿ ನಾವು ಇಲ್ಲಿದ್ದೇವೆ; ಬೇರಾರಿಗಾದರೂ ಇಲ್ಲಿರುವುದು ಹಕ್ಕೆಂಬಂತೆ, ನಮಗೂ ಈ ಸಭೆಯಲ್ಲಿ ಪಾಲ್ಗೊಳ್ಳುವದು ಹಕ್ಕಿದೆ ಎಂದು ಭಾವಿಸುತ್ತೇವೆ. ಕಾದು ನೋಡಬೇಕೆಂದು ಕೆಲವರು ನಮ್ಮ ಕಿವಿಯೂದಿದ್ದೂ ಉಂಟು. ಇದೊಂದು ವಿಚಿತ್ರ ಸಿದ್ಧಾಂತ. ಮಿಕ್ಕವರ ಪಾಡೇನಾಗಬಹುದು ಎಂಬುದನ್ನು ನಾವು ಕಾದು ನೋಡಬಹುದಷ್ಟೆ. ಮುಂದೆ ನಮಗೇ ಏನಾದರೂ ಆದಲ್ಲಿ ಅದರ ನಿರ್ಲಿಪ್ತ ನೋಡುಗರಾಗಿ ನಾವು ನಿಲ್ಲಬಹುದೆ? ಆ ಕಾರಣ, ಭಾರತ ಸ್ವಾತಂತ್ರ್ಯದ ಆಯೋಜನೆ ಮಿಕ್ಕವರಿಗೆ ಹೇಗೋ ಹಾಗೆಯೇ ನಮಗೂ, ಅದೊಂದು ಕರ್ತವ್ಯವೆ. ಆ ದೃಷ್ಟಿಕೋನದಿಂದ ಪರಿಭಾವಿಸಿದಾಗ, ಕಾದುನೋಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಮಗೆ ಯಾವ ಪ್ರತಿಫಲವೂ ಬೇಕಿಲ್ಲ, ಯಾರ ತಲೆಯ ಮೇಲೆ ನಮ್ಮ ಹೊಣೆಗಾರಿಕೆಯನ್ನು ಹೊರಿಸುವುದಿಲ್ಲ. ನಮ್ಮ ಸಮಸ್ಯೆಗಳನ್ನು ಈ ಬೃಹತ್ ಸಭೆ ಸಹಾನುಭೂತಿಯಿಂದ ಪರಿಶೀಲಿಸಬೇಕೆಂಬುದಷ್ಟೆ ನಮ್ಮ ಬಯಕೆ. ಈ ಸಮಸ್ಯೆ ಭಾರತದ ಬಹ್ವಂಶವನ್ನು ಬಾಧಿಸುವುದರಿಂದ ಅದರ ಬಗ್ಗೆ ಸ್ನೇಹಪೂರ್ಣ ದೃಷ್ಟಿ ಬೀರಬೇಕೆಂಬುದು ನಮ್ಮ ಕೋರಿಕೆ. ನಮ್ಮ ಕಡೆಯಿಂದ, ವಿನಮ್ರರಾಗಿ, ಭಾರತದ ಪುರೋಭಿವೃದ್ಧಿಗೆ

ಶ್ರಮಿಸುತ್ತೇವೆ. ಇದು ಸಾಕಾರಗೊಳ್ಳಲೆಂಬುದೆ ನಮ್ಮೆಲ್ಲರ ಬಯಕೆ ಮಾನ್ಯರೆ, ಧನ್ಯವಾದಗಳು.

**ಮಾನ್ಯ ಪಿ. ಗೋವಿಂದ ಮೆನನ್** (ಕೊಚ್ಚಿ) : ಸನ್ಮಾನ್ಯ ಅಧ್ಯಕ್ಷರೆ, ಈ ಐತಿಹಾಸಿಕ ಸಭೆಯ ಕಾರ್ಯಕಲಾಪಗಳಲ್ಲಿ ಪಾಲ್ಗೊಳ್ಳಲು ನನಗೆ ಆಹ್ವಾನ ನೀಡಿರುವುದು ನಿಜಕ್ಕೂ ಸಂತೋಷದ ವಿಷಯದ. ಭಾರತೀಯ ರಾಜ್ಯಗಳು, ತಮ್ಮ ಪ್ರತಿನಿಧಿಗಳನ್ನು ಈ ಸಭೆಗೆ ಕಳುಹಿಸಬೇಕೆ, ಬೇಡವೆ ಎಂಬುದರ ಬಗ್ಗೆ ಕಳೆದ ಕೆಲವು ತಿಂಗಳುಗಳಿಂದ ಚರ್ಚೆ, ಭಿನ್ನಾಭಿಪ್ರಾಯ, ಸಂಧಾನದ ಮಾತುಕತೆಗಳು ನಡೆಯುತ್ತಲೇ ಇದ್ದುವು. ಭಾಗವಹಿಸುವುದೆ ಆದರೆ ಹೇಗೆ ಮತ್ತು ಪ್ರತಿನಿಧಿಗಳ ಆಯ್ಕೆ ಏನೆಂಬುದರ ಬಗ್ಗೆಯೂ ಮಾತುಕತೆ ನಡೆಯಿತು. ಇದರಲ್ಲಿ ಬಹುಪಾಲು ಪರಿಹಾರವಾಗಬಹುದಿತ್ತು. ಉಳಿಯುವ ಒಂದೇ ಪ್ರಶ್ನೆ ಅತಿ ಸರಳವಾಗಿತ್ತು. ಆ ಪ್ರಶ್ನೆಯನ್ನು ಭಾರತೀಯ ರಾಜ್ಯಗಳ ಪ್ರಜೆಗಳ ದೃಷ್ಟಿಕೋನದಿಂದ ಬಗೆಹರಿಸಬಹುದಿತ್ತು.

ನಮ್ಮ ರಾಜ್ಯಗಳ ಪ್ರಜೆಗಳಿಗೆ ಇದರ ಬಗ್ಗೆ ಜಿಜ್ಞಾಸೆಯೇ ಇರಲಿಲ್ಲ. ಬ್ರಿಟಿಷ್ ಇಂಡಿಯಾದಲ್ಲಿರುವ ೩೦೦ ದಶಲಕ್ಷ ಭಾರತೀಯ ಸಹೋದರಿಯರ ಅಸ್ತಿತ್ವಕ್ಕಿಂತ ತಮ್ಮದು ಭಿನ್ನ ಎಂಬ ಭಾವನೆ ನಮ್ಮ ೧೦೦ ದಶಲಕ್ಷ ಪ್ರಜೆಗಳಿಗೆ ಆಗಲೂ ಇರಲಿಲ್ಲ. ಈಗಲೂ ಇಲ್ಲ. ಕಳೆದ ೨೭ ವರುಷಗಳಿಂದ ಮಹಾತ್ಮಾಗಾಂಧಿ ಮತ್ತು ಇತರ ಮಹಾನಾಯಕರ ಮುಖಂಡತ್ವದಲ್ಲಿ ಭಾರತ ತನ್ನ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದೆ. ಅದರಲ್ಲಿ, ಭಾರತೀಯ ರಾಜ್ಯಗಳ ಜನತೆಯ ಪಾಲು ಇದ್ದೇ ಇದೆ. ರಾಜ್ಯಗಳ ಪ್ರಜೆಗಳು, ತಮ್ಮ ಭವಿಷ್ಯ ಬೇರೆತ್ತಲೋ ಇದೆ ಎಂಬ ಭಾವನೆಯನ್ನು ತಳೆದಿರಲಿಲ್ಲ, ತೋರಲೂ ಇಲ್ಲ.

೨೫ ವರುಷಗಳ ಕಾದಾಟದ ಬಳಿಕ, ಈಗ ದೇಶವು ತನ್ನ ಮುಂದಿನ ಸಂವಿಧಾನವನ್ನು ರಚಿಸಲು ತೊಡಗಿರುವ ಸಮಯದಲ್ಲಿ, ಅದಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ತೊಡಗುವುದು ನಮ್ಮ ಕರ್ತವ್ಯ ಹಾಗೂ ನಮ್ಮ ಹಕ್ಕು ಎಂದು ಭಾವಿಸುತ್ತೇವೆ. ಮಾನ್ಯರೆ, ರಾಜ್ಯಗಳ ಜನತೆ, ಸಂವಿಧಾನ ರಚನಾ ಸಭೆಯಲ್ಲಿ ತೊಡಗಲು ಆಸಕ್ತಿ ಹೊಂದಿದ್ದಾರೆ.

ಆಕ್ಷೇಪಣೆಗಳು, ಸಂದೇಹಗಳು, ಪ್ರಶ್ನೆಗಳೂ ಬರುವುದು ಜನರಿಂದಲ್ಲ. ಅವರು ಬರುವಾಗ ದಿವಾನರು, ಮಂತ್ರಿಗಳು, ಪ್ರಭುಗಳು ಇಂಥವರಿಂದ ಬರುತ್ತವೆ. ದೈವದತ್ತ ಹಕ್ಕೆಂಬ ಸಿದ್ಧಾಂತವೊಂದರ ನೆರಳಲ್ಲಿ ಜನತೆಯನ್ನು ಪ್ರತಿನಿಧಿಸುತ್ತಾರೆಯೇ ಹೊರತು ಬೇರಾವ ವಿಧಾನದಿಂದಲೂ ಅಲ್ಲ. ಮುಂದಿನ ಅಧಿವೇಶನದೊಳಗೆ ಎಲ್ಲ ರಾಜ್ಯಗಳೂ ದೃಢ ನಿರ್ಧಾರವನ್ನು ಕೈಗೊಂಡು ನಮ್ಮೊಡನೆ ಕೈಜೋಡಿಸಿ, ಸದನಕ್ಕೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುತ್ತಾರೆಂದು ನಂಬುತ್ತೇನೆ.

ಈ ಸಭೆಯೊಡನೆ ಸೇರುವ ವಿಷಯದಲ್ಲಾಗಲಿ, ಮತ್ತಾವ ವಿಷಯದಲ್ಲಾಗಲಿ ಮೊದಲಿನಿಂದಲೂ ನಮ್ಮ ರಾಜ್ಯ ಕೊಚ್ಚಿ ಯಾವ ಸಂದಿಗ್ಧತೆಗೂ ಎಡೆಕೊಟ್ಟಿಲ್ಲ. ಕೊಚ್ಚಿಯ ಜನತೆ, ಪ್ರಾರಂಭದಿಂದಲೂ ಈ ಸಭೆಗೆ ಸೇರುವ, ಮತ್ತು ಇಲ್ಲಿ ತಮ್ಮ ಪ್ರತಿನಿಧಿಯಾ ಪ್ರತಿನಿಧಿಗಳು ಚುನಾಯಿತರಾಗುವ ಇರಾದೆ ಇಟ್ಟುಕೊಂಡಿದ್ದರು. ಕೊಚ್ಚಿಯ ಸುದೈವ, ಅಲ್ಲಿಯ ದೊರೆಗಳೂ ಇದೇ ಅಭಿಪ್ರಾಯವನ್ನು ಹೊಂದಿದ್ದರು. ೧೯೪೬ನೇ ಜುಲೈ ೨೯ರಂದು ಈ ಸಭೆಗೆ ರಾಜ್ಯಗಳ ಪ್ರತಿನಿಧಿಗಳನ್ನು ಕಳುಹಿಸುವ ಪ್ರಶ್ನೆ ಪರಿಶೀಲನೆಗೆ ಬರುವ ಮೊದಲೆ ಕೊಚ್ಚಿ ಮಹಾರಾಜರು ವಿಧಾನ ಪರಿಷತ್ತಿಗೊಂದು ಸಂದೇಶವನ್ನು ಈ ರೀತಿ ಕಳುಹಿಸಿದ್ದರು.

"ಪರಿಶೀಲನೆಗೆ ಉಳಿದಿರುವ ಒಂದೇ ವಿಷಯವೆಂದರೆ, ಸಂವಿಧಾನ ರಚನಾ ಸಭೆ ಮತ್ತು ಅದರಲ್ಲಿ ಕೊಚ್ಚಿ ಪ್ರಾಂತ್ಯದ ಪ್ರತಿನಿಧಿಗಳ ಸೇರ್ಪಡೆ. ಸಭೆಗೆ ಕೊಚ್ಚಿ ಪ್ರಾಂತ್ಯದಿಂದ ಎಷ್ಟು ಪ್ರತಿನಿಧಿಗಳನ್ನು ಕಳುಹಿಸಬೇಕೆಂಬ ಪ್ರಶ್ನೆ ಇನ್ನೂ ಬಗೆಹರಿದಿಲ್ಲ. ಏನೇ ಆಗಲಿ, ಪ್ರಾತಿನಿಧ್ಯದ ಕ್ರಮದ ಬಗ್ಗೆ ಇರಬಹುದಾದ ಎಲ್ಲ ಸಂದೇಹಗಳನ್ನು ಬದಿಗಿಟ್ಟು ಬಹಳ ಪ್ರಬುದ್ಧವಾಗಿ ಆಲೋಚಿಸಿ, ಜನತೆ ವಿಧಾನ ಪರಿಷತ್ತಿನ ಮೂಲಕ ತಮ್ಮ ಪ್ರತಿನಿಧಿಯೂ ಪ್ರತಿನಿಧಿಗಳನ್ನು ಆಯ್ಕೆ ಮಾಡಲೆಂದು ನಿರ್ಧರಿಸಿರುವುದಾಗಿ ತಿಳಿಸಲು ಸಂತೋಷವಾಗುತ್ತದೆ.

ರಾಜ್ಯದ ಪ್ರಾತಿನಿಧ್ಯದ ಬಗ್ಗೆ ತೀವ್ರವಾಗಿ ಆಲೋಚನೆ ಪ್ರಾರಂಭವಾಗದ ಸಮಯದಲ್ಲಿ ಮೇಲಿನ

ಹೇಳಿಕೆಯನ್ನು ನೀಡಲಾಗಿತ್ತು. ಯಾವ ರಾಜ್ಯವೂ ತಾನು ಸ್ವತಂತ್ರವಾಗಿರುವುದಾಗಿ ಹೇಳಿಕೆ ನೀಡಿರಲಿಲ್ಲ. ತನಗೂ ಸಂವಿಧಾನ ರಚನಾ ಸಭೆಗೂ ಏನೇನೂ ಸಂಬಂಧವಿಲ್ಲವೆಂದು ಹೇಳಿರಲಿಲ್ಲ. ಇತ್ತೀಚೆಗೆ ಕೆಲವು ಹೇಳಿಕೆಗಳು ನೀಡಲ್ಪಟ್ಟಿವೆ. ಅಂತಹ ಆಮಿಷವೊಡ್ಡುವ ಹಲವಾರು ಆಕರ್ಷಕ ಹೇಳಿಕೆಗಳ ಮಧ್ಯೆಯೂ ಕೊಚ್ಚಿಯ ನಿಲುವು ಬದಲಾಗಲಿಲ್ಲ. ಆ ರಾಜ್ಯದ ಪ್ರತಿಕ್ರಿಯೆಯನ್ನು ಮಹಾರಾಜರಿಗಿಂತಲೂ ಉತ್ತಮ ರೀತಿಯಲ್ಲಿ ಯಾರೂ ನಿವೇದಿಸಲು ಸಾಧ್ಯವಿಲ್ಲ ಮೊನ್ನೆ ಐಕ್ಯ ಕೇರಳ ಸಮಾವೇಶದಲ್ಲಿ ಮಹಾರಾಜರು ಈ ರೀತಿ, ತಮ್ಮ ಉದ್ಘಾಟನಾ ಭಾಷಣದಲ್ಲಿ ಅಪ್ಪಣೆ ಕೊಡಿಸಿದ್ದರು.

"ಈಗ ಭಾರತದ ಇತರೆಡೆಗೂ, ಕೊಚ್ಚಿಗೂ ಇರುವ ಸಂಬಂಧದ ವಿಷಯಕ್ಕೆ ಬರೋಣ. ಏಕೀಕೃತ ಕೇರಳ ರಾಜ್ಯದ ಸ್ಥಾಪನೆಗಾಗಿ, ರೀತಿ ನೀತಿಗಳನ್ನು ಪರಿಶೀಲಿಸುವ ಉದ್ದೇಶದಿಂದ ಈ ಸಮಾವೇಶವನ್ನು ಆಯೋಜಿಸಲಾಗಿದೆ. ಈ ಆಲೋಚನೆಯನ್ನು ಪುರಸ್ಕರಿಸುವುದು ತನಗಿಷ್ಟವಿಲ್ಲವೆಂದು ತಿರುವಾಂಕೂರು ಸರ್ಕಾರ ತಿಳಿಸಿದೆ. ೧೯೪೭ರ ಜೂನ್ ತಿಂಗಳ ನಂತರ ತನ್ನ ಸ್ವಾತಂತ್ರ್ಯವನ್ನು ಘೋಷಿಸುವ ಬಗ್ಗೆ ಒಲವು ತೋರಿದೆ. ಕೇಂದ್ರದೊಡನೆ ಅದರ ಸಂಬಂಧವನ್ನು, ಒಪ್ಪಂದಗಳ ಮೂಲಕ ನಿರ್ಣಯಿಸಬೇಕಾಗಿದೆ. ಈ ಸಂದರ್ಭದಲ್ಲಿ ಕೊಚ್ಚಿಯ ಧೋರಣೆ ಏನೆಂಬುದರ ಬಗ್ಗೆ ಕೇಳುವ ಇಚ್ಛೆ ತಮಗಿರಬಹುದು. ತಾಯ್ನಾಡಿನ ಒಂದು ಭಾಗವಾಗಿ ಕೊಚ್ಚಿ ಪ್ರಾಂತ್ಯ ಮುಂದುವರೆಯುವುದೆಂಬುದನ್ನು ಘೋಷಿಸಲು ನನಗೆ ಕಿಂಚಿತ್ತೂ ಅಳುಕಿಲ್ಲ. ಈ ಕೂಡಲೆ ಸಂವಿಧಾನ ರಚನೆ ಸಭೆಯೊಡನೆ ಅದು ಸೇರಲಿದೆ. ಕೊಚ್ಚಿಯ ಪ್ರಜೆ ತಾನು ಭಾರತೀಯನಾಗಲು ತನಗೆ ಹಕ್ಕಿಲ್ಲ ಎಂದುಕೊಳ್ಳುವಂತೆ, ಪ್ರಚೋದಕನಾಗಿ ನಾನೊಂದು ಶಬ್ದವನ್ನೂ ಉಚ್ಚರಿಸಲಾರೆ, ಅಥವಾ ಒಂದು ಕಾರ್ಯಕ್ಕೂ ಕೈ ಹಚ್ಚಲಾರೆ.

ಮಾನ್ಯರೆ, ನಾವು ಭಾರತೀಯರಾಗಿರುವುದರಿಂದ ಈ ಮಹಾನ್ ದೇಶದ ಭವಿಷ್ಯದ ಆಗುಹೋಗುಗಳನ್ನು ಹಂಚಿಕೊಳ್ಳಬೇಕೆಂಬ ಮನಸ್ಸುಳ್ಳವರು. ಅತೀವ ಸಂತೋಷದಿಂದ, ಕೃತಜ್ಞತಾ ಭಾವದಿಂದ ತಮ್ಮ ಆಹ್ವಾನವನ್ನು ಸ್ವೀಕರಿಸಿ ನಮ್ಮನ್ನು ಐತಿಹಾಸಿಕ ಸಭೆಯ ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಬಂದಿದ್ದೇನೆ. ಮಾನ್ಯರೆ, ನಿಮಗೆ ಧನ್ಯವಾದಗಳು.

**ಸರ್ ಟಿ. ವಿಜಯ ರಾಘವಾಚಾರಿ :** ಮಾನ್ಯರೆ, ದೆಹಲಿಯಲ್ಲಿ ನಾನಿರುವುದು, ಸಂತೋಷವೆನಿಸಿದೆ. ಹಿಂದೊಂದು ಮಾತು ಕೇಳಿಬರುತ್ತಿತ್ತು. ದೆಹಲಿ ಬಲುದೂರ ಎಂಬ ಮಾತು. ಈ ಸಂದರ್ಭವನ್ನು ಎದುರುಗೊಳ್ಳುವವರೆಗೆ ಅದು ಸತ್ಯ ಎಂಬುದರ ಅರಿವಾಗಿರಲಿಲ್ಲ. ಹಿಂದೆಲ್ಲ, ದೆಹಲಿ ನನ್ನ ಪಾಲಿಗೆ ಬಹಳ ಹತ್ತಿರ ಎನಿಸಿದೆ. ಆದರೆ ಅದು ಈ ಸಂದರ್ಭದಲ್ಲಿ ಮಾತ್ರ ನನಗೆ ಬಲು ದೂರ ಎನಿಸಿತ್ತು. ನಾನಿಲ್ಲಿರುವುದು ಸಂತಸದಾಯಕವಾಗಿದೆ. ಜೊತೆಗೆ ಇದೊಂದು ಐತಿಹಾಸಿಕ ದಿನ. ಇಂದು ನಾನಿಲ್ಲಿ ಇರುವುದೇ ಸಂತಸದ ಸಂಗತಿ. ಈ ಸಭೆಯನ್ನು ನೋಡಿ ಸಂಭ್ರಮಿಸದವನ ಹೃದಯ ಸಿಮ್ಲಾದ ಶೀತ ಗಾಳಿಯಂತೆ ಚುಮುಗುಟ್ಟುವ ತಣ್ಣನೆಯ ಎದೆ ಇರಬೇಕು. ಅಥವಾ ಪಡುದಿಸೆಯತ್ತ ಬೆಟ್ಟಗಳ ಮೇಲೆ ಹಾರುವ ವಿಮಾನಗಳ ತಳದಲ್ಲಿರುವ ಬಲೂಚಿಸ್ತಾನ್‌ನ ಬಂಡೆಗಲ್ಲಿನ ಹಾಗೆ ಕರಗದ ಕಾಣದ ಕಠಿಣ ಹೃದಯವಿರಬೇಕು. ಈ ಸಭೆ, ಖಂಡಿತವಾಗಿ ಇತಿಹಾಸದಲ್ಲಿ, ಕಾಲದ ಕಿರುಹಾದಿಯಲ್ಲಿ ಬಲು ಆಳಕ್ಕೆ ತನ್ನ ನೆನಪನ್ನುಳಿಸುತ್ತದೆ ಎಂದು ಭಾವಿಸುತ್ತೇನೆ. ನಾವು ವಿಭಿನ್ನ ಪ್ರಾಂತ್ಯದವರು, ವಿಭಿನ್ನ ರಾಜ್ಯದವರು ಒಂದೆಡೆ ಸೇರಿದ್ದೇವೆ. ನನಗಿಸುತ್ತೇ, ನಾವು ಭಾರತದ ಯಾವುದೋ ಒಂದು ಭಾಗವನ್ನು ಪ್ರತಿನಿಧಿಸುತ್ತಿಲ್ಲ. ನಾವು ಇಡೀ ಭಾರತದ ಸದಸ್ಯರೆಂಬುದು ಸುಸ್ಪಷ್ಟ. ಆ ಭಾವನೆಯಿಂದಲೆ ನಾವಿಲ್ಲಿ ಕಾರ್ಯೋನ್ಮುಖರಾಗುತ್ತೇವೆ. ಯಾವುದೇ ಪ್ರಾಂತೀಯ ಹಿತಾಸಕ್ತಿಗಾಗಿಯಲ್ಲ ಅಥವಾ ಯಾವುದೋ ಸಂಕುಚಿತ ಪ್ರಾದೇಶಿಕ ಆಸಕ್ತಿಯನ್ನು ಪೂರೈಸಲು ಅಲ್ಲ. ಆದರೆ ಏಕೈಕ ರಾಷ್ಟ್ರದ ವಿಶಾಲವಾದ ಹಿತದೃಷ್ಟಿಯಿಂದ ನಾವು ಶ್ರಮಿಸುತ್ತೇವೆ. ಯಾವುದೇ ಸ್ಥಳೀಯ ಸಮಸ್ಯೆ ಕುರಿತು ನಾನಿಲ್ಲಿ ಪ್ರಸ್ತಾವಿಸುವುದಿಲ್ಲ. ನಮ್ಮ ಸ್ಥಳೀಯ ಸಮಸ್ಯೆಗಳನ್ನು ನಮ್ಮಲ್ಲೇ ಬಗೆಹರಿಸಿಕೊಳ್ಳುತ್ತೇವೆ. ಇದು ಅಖಿಲ ಭಾರತ

ಸಮಸ್ಯೆಗಳ ವಿಚಾರ ವೇದಿಕೆ. ನಮ್ಮೆಲ್ಲರ ಧೀರ ಶಕ್ತಿಯನ್ನು ವಿನಿಯೋಗಿಸೋಣ. ನಮ್ಮ ಕಾರ್ಯವೈಖರಿಯನ್ನು ನಮ್ಮ ಪುತ್ರ, ಪೌತ್ರ, ಪ್ರಪೌತ್ರರೂ, ಮುಂದೆ ಹುಟ್ಟಲಿರುವ ಮಕ್ಕಳೂ ನೋಡಿ– "ನಮ್ಮ ಪಿತೃ, ಪಿತಾಮಹ, ಪ್ರಪಿತಾಮಹರು ೧೯೪೭ನೇ ಇಸವಿ ದೆಹಲಿಯಲ್ಲಿ ಕುಳಿತು ರಚಿಸಿದ ಸಂವಿಧಾನ, ಕಾಲದ ನಿಕಷಕ್ಕೆ ಒಡ್ಡಿಯೂ ನಿತ್ಯನೂತನವಾಗಿ ನಳನಳಿಸುತ್ತಿದೆ ಎಂದು ಸಂಭ್ರಮಿಸಬೇಕು. 'ಧನ್ಯರಿವರು, ಇವರ ಮಹತ್ಕಾರ್ಯ ಭಾರತದ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಿಕೊಟ್ಟಿದೆ' ಎಂದು ಇತಿಹಾಸ ಸಂತಸದಿಂದ ಉದ್ಗರಿಸುತ್ತದೆ. ಇಲ್ಲಿ ನಾವು ಸಂಕುಚಿತ ಅಭಿಪ್ರಾಯವನ್ನು ತಾಳುವಂತಿಲ್ಲ. ಉದಾರ ದೃಷ್ಟಿಕೋನದಿಂದ ಚಿಂತಿಸಬೇಕಾಗಿದೆ. ನಮ್ಮ ಕಾರ್ಯ ಸಮುಚಿತವಾಗಿರಬೇಕು. ಭಾರತದ ಸುಪುತ್ರರಾಗಿ, ನಮ್ಮ ಕರ್ತವ್ಯದಲ್ಲಿ ಯಶಸ್ವಿಗಳಾಗಬೇಕೇ ವಿನಾ, ನಮ್ಮ ಪ್ರಾಂತ್ಯಕ್ಕಾಗಿ ಶ್ರಮಿಸಿದೆವು ಎಂಬ ಕುಖ್ಯಾತಿಗೆ ಗುರಿಯಾಗುವುದು ಬೇಡ.

ಸನ್ಮಾನ್ಯ ಅಧ್ಯಕ್ಷರೆ, ತಮ್ಮ ನಲ್ನಾತುಗಳಿಗೆ ಧನ್ಯವಾದಗಳು.

**ಮಿ. ಜೈ ನಾರಾಯಣ ವ್ಯಾಸ್ :** (ಜೋಧ್‌ಪುರ್) *[ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಗಳ ಜನತೆಯ ಪರವಾಗಿ, ಅವರದೇ ನುಡಿಯಲ್ಲಿ ತಾವು ರಾಜ್ಯಗಳ ಪ್ರತಿನಿಧಿಗಳಿಗೆ ನೀಡಿದ ಆಹ್ವಾನಕ್ಕಾಗಿ ತಮಗೆ ಧನ್ಯವಾದಗಳು.]

೧೯೩೩ರವರೆಗೆ ರಾಜ್ಯಪ್ರಜೆಗಳಾದ ನಮಗೆ ಒಂದು ವರ್ಚಸ್ಸು ಒಂದು ಅಂತಸ್ತು ಎಂಬುದಿತ್ತು. ಏಕೆಂದರೆ ಆ ವರುಷ ಭಾರತ ಸರ್ಕಾರದ ಮಸೂದೆಯಲ್ಲಿ "ರಾಜರು ಮತ್ತು ಅವರ ಪ್ರಜೆಗಳು" ಎಂದು ಸಂಬೋಧಿಸಲಾಗಿತ್ತು. ದುರದೃಷ್ಟವಶಾತ್, ನಂತರ ದಿನಗಳಲ್ಲಿ ನಮ್ಮ ಅಸ್ತಿತ್ವ ಮರೆತೇ ಹೋಯಿತು, ಇಲ್ಲವೆ ನಿರ್ಲಕ್ಷ್ಯಕ್ಕೆ ಒಳಗಾಯಿತು. ೧೯೩೫ರ ಭಾರತ ಸರ್ಕಾರದ ಅಧಿನಿಯಮದಲ್ಲಿ ರಾಜ್ಯಗಳನ್ನು ಕುರಿತ ಉಲ್ಲೇಖವಿರಲಿಲ್ಲ. ಸರ್ ಸ್ಟಾಫರ್ಡ್ ಕ್ರಿಪ್ಸ್ ಭಾರತಕ್ಕೆ ಬಂದಾಗ, ಮತ್ತೆ ಯಾರಿಗೂ ನಮ್ಮ ನೆನಪೇ ಬರಲಿಲ್ಲ. ಕ್ಯಾಬಿನೆಟ್ ಮಿಷನ್ ಪ್ರಸ್ತಾವಗಳಲ್ಲೂ ನಮ್ಮ ಪ್ರಸ್ತಾಪವಿರಲಿಲ್ಲ. ನಾವು ನಿಮ್ಮೊಡನೆ ಈ ಸಭೆಯಲ್ಲಿ ಕಲೆತು ಮಾತನಾಡಲು ಸಾಧ್ಯವೇ ಆಗುತ್ತಿರಲಿಲ್ಲವೇನೋ. ಅಂತಹ ಸನ್ನಿವೇಶಗಳು ನಿರ್ಮಾಣವಾದುವು. ರಾಜರು ಮತ್ತವರ ಸಹವರ್ತಿಗಳು. ತಮ್ಮೊಡನೆ ನಮ್ಮನ್ನು ಒಗ್ಗೂಡಿಸಲು ತೀರ್ಮಾನಿಸಿದ ಹೊರತು ಈ ಸಮಾಗಮ ಸಾಧ್ಯವೇ ಆಗುತ್ತಿರಲಿಲ್ಲವೇನೋ. ನಾವಿಲ್ಲಿ ಇತಿಹಾಸವನ್ನು ನಿರ್ಮಿಸುತ್ತಿರುವುದು ನಮಗೆ ಸಂತಸ ತಂದಿದೆ. ಬ್ರಿಟಿಷ್ ಪ್ರಾಂತ್ಯಗಳ ಪ್ರತಿನಿಧಿಗಳೊಡನೆ ನಾವು ಅದಿಬದಿಯಲ್ಲಿ ಕುಳಿತಿದ್ದೇವೆ. ಅಂತೆಯೇ ಭಾರತೀಯ ರಾಜ್ಯಗಳ ಆಳುವರಸರ ಪ್ರತಿನಿಧಿಗಳೊಡನೆಯೂ ಬೆರೆತಿದ್ದೇವೆ. ನಮ್ಮ ಪ್ರಭುಗಳು ನಮ್ಮನ್ನು ರಾಜ್ಯ ಪ್ರತಿನಿಧಿಗಳೊಡನೆ ಸೇರಿಸಲು ಮನಸ್ಸು ಮಾಡಿರದಿದ್ದರೆ ಅಥವಾ ಸಂಧಾನ ಸಮಿತಿಯು, ಸಭೆಯಲ್ಲಿ ನಮ್ಮ ಪ್ರಾತಿನಿಧ್ಯವಿರಬೇಕೆಂದು ಒತ್ತಾಯಪಡಿಸದೆ ಇದ್ದಿದ್ದರೆ, ವರ್ತಮಾನದ ಸನ್ನಿವೇಶದಲ್ಲಿ, ನಾವು ಸಂವಿಧಾನ ರಚನಾ ಸಭೆಯಲ್ಲಿ ನಾವು ಭಾಗವಹಿಸುವುದು ಸಾಧ್ಯವೆ ಇರುತ್ತಿರಲಿಲ್ಲವೇನೋ. ನಮ್ಮ ಪ್ರತಿನಿಧಿಗಳು ನಿಮ್ಮವರೊಡನೆ ಸಾಕಷ್ಟು ಸಂಖ್ಯೆಯಲ್ಲಿ ಕಲೆತಿರುವುದು ನಿಜಕ್ಕೂ ಸಂತೋಷದಾಯಕ. ನಾವು ಸ್ವಹಿತಾಸಕ್ತಿಗಾಗಿ ಮಾತ್ರವಲ್ಲದೆ ಇಡೀ ರಾಷ್ಟ್ರದ ಹಿತಕ್ಕಾಗಿ ನಿಮ್ಮೊಡನೆ ಎಲ್ಲ ರೀತಿಯಲ್ಲೂ ಸಹಕರಿಸುವ ಭರವಸೆ ನೀಡುತ್ತೇವೆ. ನಾವು ಭಾರತದ ಅವಿಭಾಜ್ಯ ಅಂಗವೆಂದು ಭಾವಿಸುತ್ತೇವೆ. [ಕೆಲವು ಹೊರಗಣ ಮಂದಿ ನಮ್ಮೀರ್ವರ ನಡುವೆ ಕಂದಕ ನಿರ್ಮಿಸಿದ್ದರೂ ಸಹಿತ] ಆದರೆ ಈ ಕೃತಕ ಭಿತ್ತಿಗಳು ಕುಸಿಯುತ್ತಿವೆ. ಇಷ್ಟರಲ್ಲೇ ಭಾರತ ಏಕಮೇವಾದ್ವಿತೀಯ ಘಟಕವಾಗಿ ತನ್ನ ಅಂಕಿತವನ್ನು ಸ್ಥಾಪಿಸುತ್ತದೆ ಎಂಬ ಭರವಸೆ ನಮಗಿದೆ ಮತ್ತೆ ತಮಗೆ ನನ್ನ ಧನ್ಯವಾದಗಳು.]*

**ರಾಜಾಲಾಲ್ ಶಿವಬಹಾದೂರ್ :** [ರೇವಾ] ತಾವು ಅತ್ಯಂತ ಸೌಜನ್ಯಪೂರ್ವಕವಾಗಿ ನೀಡಿರುವ ಸ್ವಾಗತಕ್ಕೆ ನಮ್ಮ ಗೆಳೆಯರೊಂದಿಗೆ ನನ್ನ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ. ಕೇಂದ್ರ ಭಾರತದಲ್ಲಿ/ ಕೇಂದ್ರೀಯ ಭಾರತದಲ್ಲಿ [Central India] ಅತಿದೊಡ್ಡ ಪ್ರಾಂತ್ಯವೊಂದನ್ನು ನಾನು ಪ್ರತಿನಿಧಿಸುತ್ತೇನೆ. ರೇವಾ ಪ್ರಾಂತ್ಯ ಮುಂದಾಳತ್ವ ವಹಿಸದೆ ಹೋಗಿದ್ದಲ್ಲಿ, ಮಧ್ಯ ಭಾರತಕ್ಕೆ ಪ್ರಾತಿನಿಧ್ಯವೇ ಇಲ್ಲದಾಗುತ್ತಿತ್ತು. ಸರ್,

ಇಷ್ಟರಲ್ಲೇ, ಇತರ ರಾಜ್ಯಗಳ ನನ್ನ ಮಿತ್ರರು ಮತ್ತು ನೆರೆರಾಜ್ಯಗಳ ಮಿತ್ರರು. ಈ ಐತಿಹಾಸಿಕ ಸದನವನ್ನು ಖಂಡಿತ ಸೇರುತ್ತಾರೆಂದು ನಂಬುತ್ತೇನೆ. ತಾಯ್ನಾಡಿಗೆ ತನ್ನೆಲ್ಲ ಸೇವೆಯನ್ನು ಮುಡಿಪಿಡುವಲ್ಲಿ ರೇವಾ ಹಿಂದುಳಿಯಲಾರದು.

ಮಾನ್ಯರೆ, ನಿಮಗೆ ಧನ್ಯವಾದಗಳು.

**ಕೊಡಗಿನಿಂದ ಶುಭ ಹಾರೈಕೆ ಸಂದೇಶ :-**

**ಸನ್ಮಾನ್ಯ ಅಧ್ಯಕ್ಷರು :** ಕೊಡಗು ವಿಧಾನ ಪರಿಷತ್ತು ನಿರ್ಣಯವೊಂದನ್ನು ಅಂಗೀಕರಿಸಿದೆ. ಅಲ್ಲಿಯ ಮುಖ್ಯ ಕಮಿಷನರ್, ನನಗೆ, ಆ ನಿರ್ಣಯವನ್ನು ಕಳುಹಿಸಿದ್ದಾರೆ. ಅದನ್ನು ಈ ಸದನದಲ್ಲಿ ತಿಳಿಸಬೇಕೆಂಬುದು ಅವರ ಉದ್ದೇಶವಾಗಿದೆ. ನಾನು ಓದುತ್ತೇನೆ.

"ಭಾರತ ದೇಶಕ್ಕೊಂದು ಸರ್ವಸಮ್ಮತವಾದ ಸಂವಿಧಾನವನ್ನು ರಚಿಸಲು ತಮ್ಮ ಪ್ರಯತ್ನಗಳನ್ನು ತ್ವರಿತವಾಗಿಯೂ ಫಲಪ್ರದವಾಗಿಯೂ ವಿನಿಯೋಗಿಸಿದ, ಸಂವಿಧಾನ ರಚನಾ ಸಭೆಯ ಅಧ್ಯಕ್ಷರು ಮತ್ತು ಸದಸ್ಯರಿಗೆ ಈ ಪರಿಷತ್ತು ತನ್ನ ಪ್ರಾರ್ಥನಾಪೂರ್ವಕ ಶುಭಾಶಯಗಳ ನಿರ್ಣಯವನ್ನು ಅಂಗೀಕರಿಸಿದ್ದು, ಇದನ್ನು ನವದೆಹಲಿಯಲ್ಲಿರುವ ಅಧ್ಯಕ್ಷರಿಗೆ ತಲುಪಿಸುವಂತೆ ಕಮಿಷನರ್ ಅವರಿಗೆ ಸೂಚಿಸುತ್ತದೆ."

## ರಾಜ್ಯಗಳ ಸಮಿತಿಯ ವರದಿ

**ಸನ್ಮಾನ್ಯ ಅಧ್ಯಕ್ಷರು :** ಮುಂದಿನದು ಪಂಡಿತ್ ಜವಾಹರ್‌ಲಾಲ್ ನೆಹರು ಅವರು ಪ್ರಸ್ತಾವಿಸಲಿರುವ ನಿರ್ಣಯ.

**ಗೌರವಾನ್ವಿತ ಪಂಡಿತ್ ಜವಾಹರ್‌ಲಾಲ್ ನೆಹರು :** [ಸಂಯುಕ್ತ ಪ್ರಾಂತ್ಯಗಳು ಸಾಮಾನ್ಯ] ಮಾನ್ಯರೆ, ನಾನು ಪ್ರಸ್ತಾವಿಸಲು ಅನುಮತಿ ಬೇಡುತ್ತೇನೆ.

"ಸಂವಿಧಾನ ರಚನಾ ಸಭೆ, ರಾಜ್ಯಗಳ ಸಮಿತಿಗಳ ವರದಿಯನ್ನು ಪರಿಶೀಲಿಸಿದ್ದು, ಅದನ್ನು ದಾಖಲಿಸುವಂತೆ ನಿಲುವಳಿಯನ್ನು ಮಂಡಿಸುತ್ತೇನೆ."

"ಈಗಾಗಲೆ ಆಯ್ಕೆಗೊಂಡಿರುವ ರಾಜ್ಯ ಪ್ರತಿನಿಧಿಗಳನ್ನು ಸಭೆ ಆಹ್ವಾನಿಸುತ್ತದೆ. ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡದಿರುವ ರಾಜ್ಯಗಳು ಈ ಕೂಡಲೇ ಆ ಬಗ್ಗೆ, ಸರ್ವಸಮ್ಮತ ಒಪ್ಪಿಗೆ ಪ್ರಕ್ರಿಯಾನುಸಾರ ಕ್ರಮಕೈಗೊಳ್ಳುವುದೆಂಬ ಭರವಸೆ ವ್ಯಕ್ತಪಡಿಸುತ್ತದೆ.

ವರದಿಯ ಪ್ರತಿಗಳು ಈಗಾಗಲೆ ಎಲ್ಲ ಸದಸ್ಯರಿಗೂ ಹಂಚಲ್ಪಟ್ಟಿವೆ ಎಂದು ತಿಳಿದಿದ್ದೇವೆ. ಆದುದರಿಂದ ಅದನ್ನು ಓದಲು, ಸದನದ ವೇಳೆಯನ್ನು ವ್ಯಯಮಾಡಲು ಬಯಸುವುದಿಲ್ಲ ಅದು, ಈ ಸದನ ನೇಮಿಸಿದ ಸಂಧಾನ ಸಮಿತಿಯ ಕಾರ್ಯಚಟುವಟಿಕೆಗಳ ಸಾರಾಂಶವಷ್ಟೆ. ಆ ವರದಿಯನ್ನು ಆದಷ್ಟೂ ಸಂಕ್ಷಿಪ್ತಗೊಳಿಸಿದ್ದೇವೆ. ಇದರಿಂದ ಸದನಕ್ಕೆ ನಾವು ಅಳವಡಿಸಿದ ಹಾಗೂ ಚರ್ಚಿಸಿದ ಪ್ರಕ್ರಿಯೆಯ ಪರಿಚಯವಾಗುವುದು ಸುಲಭ. ಇದಲ್ಲದೆ ನಾನು ತಿಳಿಸುವುದೆಂದರೆ, ಈ ಸದನವಾಗಲಿ, ಸದಸ್ಯರಾಗಲಿ, ವ್ಯವಹಾರಗಳ ಸಂಪೂರ್ಣ ವರದಿಯನ್ನು ತಿಳಿಯಬಯಸುವವರಾದರೆ, ಅದರ (ಕಾರ್ಯಕಲಾಪದ) ಪದಶಃ ವರದಿ ಲಭ್ಯವಿದೆ. ಈ ವರದಿಯನ್ನು ಸದನದ ಗ್ರಂಥ ಭಂಡಾರದಲ್ಲಿ ಕಾಣಬಹುದು ಇದನ್ನು ತಿಳಿಸುವ ಕಾರಣವೇನೆಂದರೆ ಎಲ್ಲ ಬಗೆಯ ಪ್ರಕಾರುಗಳು ಏಳುತ್ತವೆ: ಜನರನ್ನು ದಿಕ್ಕು ತಪ್ಪಿಸುವ ಪ್ರಯತ್ನ ನಡೆಯುತ್ತದೆ. ಸಾರ್ವಜನಿಕರ ಮುಂದೆ ನಾವು ಸಮಗ್ರ ಮಾಹಿತಿ ಇಡುತ್ತಿಲ್ಲವೆಂದು ಜನರು ಭಾವಿಸುತ್ತಾರೆ. ನಾವು ಬಚ್ಚಿಡುವ ವಿಷಯವೇನೂ ಇಲ್ಲಿಲ್ಲ. ವಾಸ್ತವವಾಗಿ ಸದನದಿಂದ ಏನನ್ನೂ ಬಚ್ಚಿಸಲು ನಮಗಾಗುತ್ತಿರಲಿಲ್ಲ. ಆದುದರಿಂದ, ಪ್ರಭುಗಳ ಸಂಧಾನ ಸಮಿತಿಯ ಸದಸ್ಯರೊಡನೆ, ನಾವು ನಡೆಸಿದ ಏನೆಲ್ಲ ಮಾತುಕತೆಯ ಪದಶಃ ವರದಿಯನ್ನು ಯಾರಾದರೂ ಸದಸ್ಯರು ನೋಡಬಯಸುವರಾದರೆ, ಅದು ಗ್ರಂಥ ಭಂಡಾರದಲ್ಲಿ ಲಭ್ಯವಿದೆ. ಅದು ತೀರಾ ದೊಡ್ಡ ವರದಿ. ನಾವು

ಅದನ್ನು ಅಚ್ಚುಮಾಡಿಸಿ ಸದನದಲ್ಲಿ ಹಂಚಲಾಗುತ್ತಿರಲಿಲ್ಲ. ಜೊತೆಗೆ ಅದನ್ನು ಸಾರ್ವಜನಿಕ ಮುದ್ರಣಾಲಯದಲ್ಲಿ ಅಷ್ಟು ಮಾಡಿಸುವುದೂ ಅಚ್ಚು ವಿಹಿತವಲ್ಲ. ಈ ಸದನದ ಸಮಿತಿ ಮತ್ತು ಸದಸ್ಯರ ನಡುವೆ ಗೋಪ್ಯವಾಗಿಡುವಂತಹುದೇನಿಲ್ಲ. ಆದುದರಿಂದ ಆ ದಾಖಲೆಯು ಸಾರ್ವತ್ರಿಕ ಪ್ರಕಟಣೆಗಾಗಿ ಇರುವಂತಹುದಲ್ಲ ಅದನ್ನು ಆಕರ ಗ್ರಂಥವಾಗಿ ಅವಲೋಕಿಸಲು ಇಷ್ಟಪಡುವ ಸದಸ್ಯರು ಗ್ರಂಥಾಲಯದಿಂದ ಪಡೆಯಬಹುದೆಂಬುದನ್ನು ಮಾತ್ರ ನೆನಪು ಮಾಡಲು ಬಯಸುತ್ತೇನೆ.

ಈ ಸಮಿತಿಯು ನೇಮಕಗೊಂಡುದರ ಉದ್ದೇಶ ನಿರ್ದಿಷ್ಟವಾದುದೆಂಬುದು ಸಮಿತಿಗೆ ನೆನಪಿರಬಹುದು– ಸಭೆಯ ಸದಸ್ಯತ್ವದ ಸಂಖ್ಯೆಯನ್ನು ೯೩ಕ್ಕೆ ಮೀರದಂತೆ ಗೊತ್ತು ಪಡಿಸುವುದು ಮತ್ತು ಸಭೆಗೆ ಸದಸ್ಯರ ಪ್ರವೇಶಾವಕಾಶ ಕಲ್ಪಿಸುವ ವಿಧಾನ, ಇವು ನಮಗೆ ಖಚಿತವಾಗಿ ನೀಡಲ್ಪಟ್ಟ ನಿರ್ದೇಶನಗಳು. ಅಂತೆಯೇ ನಾವು ಕಾರ್ಯಪ್ರವೃತ್ತರಾದೆವು. ಆದರೆ ಪ್ರಭುಪೀಠದಿಂದ ಆಯ್ಕೆಗೊಂಡ, ಸಂಧಾನ ಸಮಿತಿಯನ್ನು ನಾವು ಭೇಟಿ ಮಾಡಿದಾಗ, ಮಿಕ್ಕ ಪ್ರಶ್ನೆಗಳನ್ನು ಎತ್ತಲಾಯಿತು. ಪ್ರಭುಗಳ ಸಂಘ ಸಂಸ್ಥೆಗಳು ಅಂಗೀಕರಿಸಿದ ಹಲವಾರು ನಿರ್ಣಯಗಳು ಎದುರುಗೊಂಡುವು. ನಮಗೆ ಬೇರಾವ ವಿಷಯಗಳ ಬಗ್ಗೆಯೂ ಚರ್ಚಿಸುವ ಅಧಿಕಾರವಿಲ್ಲವೆಂದು ಹೇಳಿದೆವು. ನಮಗೆ ನೀಡಿರುವ ಅಧಿಕಾರ, ಇವೆರಡು ವಿಷಯಗಳಿಗೆ ಮಾತ್ರ ಸೀಮಿತ. ವಾಸ್ತವವಾಗಿ ನಾವು ಒಂದು ಹೆಜ್ಜೆ ಮುಂದಿಟ್ಟೆವು. ಮಿಕ್ಕೆಲ್ಲ ವಿಷಯಗಳನ್ನು ಚರ್ಚಿಸುವ ಅಧಿಕಾರ ಈಗ ರಚನೆಯಾಗಿರುವಂಥ ಸಂವಿಧಾನ ರಚನಾ ಸಭೆಗೆ ಇರುವುದೋ ಇಲ್ಲವೋ ಎಂಬುದೇ ಸಂದೇಹಾಸ್ಪದವಾಗಿದೆ ಎಂದು ಹೇಳಿದೆವು. ಆದರೂ ವಿಷಯವನ್ನು ಮುಂದುವರೆಸುವ ಆತುರ ನಮಗಿತ್ತು. ನಮ್ಮ ಆತುರ ಎಷ್ಟಿತ್ತೆಂದರೆ ನಮ್ಮಲ್ಲಿ ಕೆಲವರು ಅವರೊಡನೆ ಮಾತುಕತೆ ಮುಂದುವರೆಸಿದೆವು. ಅಂತಹ ಸಂದರ್ಭಗಳಲ್ಲಿ ಅವರಲ್ಲಿದ್ದ ಕೆಲ ಸಂದೇಹಗಳನ್ನು ನಿವಾರಿಸಿದೆವು. ಮತ್ತೆ ಕೆಲವು ಪ್ರಶ್ನೆಗಳನ್ನು ಅನೌಪಚಾರಿಕವಾಗಿ ಉತ್ತರಿಸಿದೆವು. ನಮ್ಮ ವತಿಯಿಂದಲೆ ವೈಯಕ್ತಿಕವಾಗಿ ಉತ್ತರಿಸಿದ್ದೂ ಉಂಟು. ಏಕೆಂದರೆ ನೀವು ವಿಧಿಸಿದ ನಿಬಂಧನೆಗಳನ್ನು ಉಲ್ಲಂಘಿಸುವ ಅಧಿಕಾರ ನಮಗಿರಲಿಲ್ಲ. ನಿಮಗೆ ಸಲ್ಲಿಸಿರುವ ವರದಿಯಲ್ಲಿ ಅದರ ಉಲ್ಲೇಖವಿದೆ. ಈ ಮಾತನ್ನು ನಾನು ನಿರ್ದಿಷ್ಟಗೊಳಿಸುತ್ತಿರುವ ಕಾರಣ, ವಿದ್ಯಮಾನಗಳು ಸ್ಪಷ್ಟವಾಗಿ ನಿವೇದನೆಯಾಗಬೇಕೆಂಬುದಷ್ಟೆ. ಅವರೊಡನೆ ನಡೆಸಿದ ಚರ್ಚೆಗಳ ನಡುವೆ ಕೆಲವು ಮುಖ್ಯವಾದ ವಿಚಾರಗಳು ಪ್ರಸ್ತಾಪಿಸಲ್ಪಟ್ಟವು. ಅಲ್ಲಿ ನಾವು ಹೇಳಿದುದೆಲ್ಲವನ್ನೂ ಇಲ್ಲಿ ಹೆಚ್ಚು ಕಡಿಮೆ ಹಿಂದೆಯೇ ಹೇಳಿದ್ದೆ ಅಥವಾ ಇತರ ಸದಸ್ಯರೇ ತಿಳಿಸಿದ್ದರು. ಆದುದರಿಂದ ನನಗೆ ಅವುಗಳನ್ನು ತಿಳಿಸುವುದೇನೂ ಕಷ್ಟವಾಗಲಿಲ್ಲ. ಏಕೆಂದರೆ, ತಿಳಿಸದೆ ಹೋದಲ್ಲಿ ಈ ಸಭೆಗೆ ಒಪ್ಪಿಗೆಯಾಗದ ವಿಷಯಗಳ ಬಗ್ಗೆ ಮಾತನಾಡಬೇಕಾದ ಸಮಸ್ಯೆ ತಲೆದೋರುತ್ತಿತ್ತು. ಅಥವಾ ಹೇಳಿದ್ದು ತಪ್ಪೆಂದು ಸಭೆ ಒಪ್ಪದಿರಲೂ ಬಹುದಿತ್ತು. ನಮಗೆಲ್ಲರಿಗೂ ಈ ಬಗ್ಗೆ ಕೆಲವೊಂದು ಅಭಿಪ್ರಾಯಗಳಿರುತ್ತವೆ. ನಿರ್ಣಯದ ಗುರಿಗಳನ್ನು ಕುರಿತು ಈ ಹಿಂದೆ ಇಲ್ಲಿ ನಾನು ಮಾತನಾಡಿದ್ದೆ. ಆಗ ರಾಜ್ಯಗಳು ಮತ್ತು ಅವುಗಳನ್ನಾಳುವ ಪ್ರಭುಗಳ ಬಗ್ಗೆ ಪ್ರಸ್ತಾಪಿಸಿದ್ದೆ. ವೈಯಕ್ತಿಕವಾಗಿ ನನ್ನದೆ ಕೆಲವು ಅಭಿಪ್ರಾಯಗಳಿದ್ದರೂ, ಅವು ಸಂವಿಧಾನ ರಚನಾ ಸಭೆಯ ನಿಲುವಿಗೆ ಅಡ್ಡಿ ತರಲಾರವೆಂಬುದನ್ನು ಸ್ಪಷ್ಟಪಡಿಸಿದ್ದೆ. ಅದರ ಕಾರ್ಯವ್ಯಾಪ್ತಿಗೂ ಬಾಧಕವಾಗಲಾರರೆಂಬುದನ್ನೂ ಖಚಿತಪಡಿಸಿದ್ದೆ. ಇಡೀ ಭಾರತಕ್ಕೆ ಒಂದು ಗಣರಾಜ್ಯವಿರಬೇಕೆಂಬುದರ ಪರವಾಗಿ ನಾವು ನಿರ್ಧಾರ ತೆಗೆದುಕೊಂಡಿದ್ದರೂ. ಯಾವುದೇ ರಾಜ್ಯ ತನ್ನ ದೊರೆಯ ಆಳ್ವಿಕೆಯಲ್ಲಿ ಮುಂದುವರೆಯಲು ಅಭ್ಯಂತರವಿಲ್ಲ. ಪರಂತು, ಅದು ಸ್ವಾತಂತ್ರ್ಯದ ಬೃಹತ್ ವ್ಯವಸ್ಥೆಯೊಳಗೆ ಅಡಕವಾಗುವಂತಿರಬೇಕು ಮತ್ತು ಅಲ್ಲಿ ಕೂಡ ಇದೇ ಬಗೆಯ ಸ್ವಾತಂತ್ರ್ಯವಿರಬೇಕು ಮತ್ತು ಜವಾಬ್ದಾರಿಯನ್ನು ಸರ್ಕಾರ ವಹಿಸಬೇಕು. ಹಾಗಾಗಿ ಇಂತಹ ಪ್ರಶ್ನೆಗಳನ್ನು ಕೇಳಿದಾಗ ಅವುಗಳಿಗೆ ಉತ್ತರ ನೀಡಲು ನನಗೆ ಕಷ್ಟವೇನೂ ಆಗಲಿಲ್ಲ. ಏಕೆಂದರೆ ಅದೇ ಅರ್ಥ ಬರುವಂತೆ. ಅಷ್ಟೇ ಪರಿಣಾಮಕಾರಿಯಾಗಿ ಈ ಸಭೆಯಲ್ಲಿ, ಹಿಂದೆಯೇ ತಿಳಿಸಲಾಗಿತ್ತು.

ಆ ಪ್ರಶ್ನೆಗಳು ಯಾವುವು? ಮೊದಲನೆಯದು ಒಂದು ಅನಾವಶ್ಯಕವಾದ ಪ್ರಶ್ನೆ. ಅದು ನಮ್ಮ ಕಾರ್ಯವ್ಯಾಪ್ತಿಗೆ ಸಂಬಂಧಿಸಿದುದು ಎಂದರೆ ಮೇ ೧೬ರ (೧೯೪೬) ಕ್ಯಾಬಿನೆಟ್ ಮಿಷನ್‌ರ ಹೇಳಿಕೆಯನ್ನು ಎಲ್ಲಿಯವರೆಗೆ ಅಂಗೀಕರಿಸಿದ್ದೇವೆಂಬುದು; ನಾವದನ್ನು ಅಂಗೀಕರಿಸಿದ್ದೇವೆ. ಅದರಂತೆಯೇ ಕೆಲಸ ಮಾಡುತ್ತಿದ್ದೇವೆ. ಅಲ್ಲಿಗೆ ಮುಗಿಯಿತು. ಮುಂದೇನು ಬದಲಾವಣೆ ಆಗಬಹುದೆಂಬುದು ನನಗೆ ಗೊತ್ತಿಲ್ಲ. ಮತ್ತು ಈ ಬದಲಾವಣೆಗಳು ನಮ್ಮ ಕಾರ್ಯವೈಖರಿಯ ಮೇಲೆ ಏನೆಂಥ ಪರಿಣಾಮ ಬೀರಬಲ್ಲವೆಂಬುದೂ ತಿಳಿಯದು. ಏನೇ ಆಗಲಿ ನಾವು ಆ ಹೇಳಿಕೆಯನ್ನು ಸಮಗ್ರವಾಗಿ ಒಪ್ಪಿದ್ದೇವೆ. ಅದರಂತೆ ಕಾರ್ಯತತ್ಪರರಾಗಿದ್ದೇವೆ.

ಅದು ಇನ್ನೊಂದು ನಿರ್ಧಾರಕ್ಕೆ ಅನಿವಾರ್ಯವಾಗಿ ನಮ್ಮನ್ನು ಒಯ್ಯುತ್ತದೆ. ಅದೆಂದರೆ, ಕೇಂದ್ರದ ವ್ಯಾಪ್ತಿಗೆ ಒಳಪಡದ ವಿಷಯಗಳನ್ನು ಬೇರೆ ಬೇರೆ ಘಟಕಗಳು ಆಲೋಚಿಸಬೇಕು. ಇವು ರಾಜ್ಯಗಳು ಮತ್ತು ಪ್ರಾಂತ್ಯಗಳ ಆಲೋಚನಾ ಪರಿಧಿಯೊಳಗೆ ಬರತಕ್ಕವು. ಇದನ್ನು ಕ್ಯಾಬಿನೆಟ್ ಮಿಷನ್ ಹೇಳಿಕೆ ಸ್ಪಷ್ಟಪಡಿಸಿದೆ. ಇದೇ ಮಾತನ್ನು ನಾವು ಅಲ್ಲಿ ಹೇಳಿ, ಖಚಿತಪಡಿಸಿದೆವು. ಕೇಂದ್ರಕ್ಕೆ ಸಂಬಂಧಿಸಿದ ವಿಷಯಗಳಾಗುವುವು ಮತ್ತು ಯಾವುವು ಸಂಬಂಧ ಪಡುವುದಿಲ್ಲವೆಂಬ ವಿಷಯವನ್ನು ಜಾಗ್ರತೆಯಿಂದ ಸದನ ಈಗ ಪರಿಶೀಲಿಸಬೇಕು. ಆದರೆ ಕೇಂದ್ರದ ವಿಷಯ, ವ್ಯಾಪ್ತಿಯ ಒಳಗೆ ಬಾರದವು ಎಲ್ಲವೂ, ಘಟಕಕ್ಕೆ ವಹಿಸಲ್ಪಡತಕ್ಕವು.

ನಂತರ ಇನ್ನೂ ಒಂದು ವಿಷಯವನ್ನು ಅವರಿಗೆ ತಿಳಿಸಿದೆವು. ಸಂವಿಧಾನ ರಚನಾ ಸಭೆಗೆ ಸೇರುವುದಾಗಲಿ ಅಥವಾ ಅದರ ಯೋಜನೆಗಳನ್ನು ಅಂಗೀಕರಿಸುವುದಾಗಲಿ ಬಿಡುವುದಾಗಲಿ ಎಲ್ಲವೂ ಅವರ ನಿರ್ಧಾರಕ್ಕೆ ಬಿಟ್ಟಿದ್ದು. ಮಿ. ಫಣಿಕ್ಕರ್ ಅವರು ಹೇಳಿದಂತೆ ಅಲ್ಲಿ ಯಾವುದೇ ಒತ್ತಡಕ್ಕೆ ಆಸ್ಪದವಿರಲಿಲ್ಲ. ಇಲ್ಲಿ ಭಾಗವಹಿಸುತ್ತಿರುವ ರಾಜ್ಯಗಳ ಮೇಲಾಗಲಿ, ಪ್ರಾಂತ್ಯಗಳ ಮೇಲಾಗಲಿ, ಅಥವಾ ಭಾರತದ ಯಾವುದೇ ಭಾಗದ ಮೇಲಾಗಲಿ, ಬಲಾತ್ಕಾರವಿರಲಿಲ್ಲ. ಆದರೆ ವ್ಯಕ್ತಿಗತವಾದ ಆಗ್ರಹಕ್ಕೆ ಆಸ್ಪದವಿಲ್ಲದಿದ್ದರೂ ಮುಂದೆ ಸಂಭವಿಸಬಹುದಾದ ಘಟನಾವಳಿಯ ಒತ್ತಡ ಅನಿವಾರ್ಯವಾದಾಗ ಅದನ್ನು ಯಾರೂ ಕಡೆಗಣಿಸಲಾಗದು. ಇದು ಅತಿ ದೊಡ್ಡ ಗಮನಾರ್ಹ ಅಂಶ. ಆದುದರಿಂದ ಇಲ್ಲಿ ಯಾರ ಒತ್ತಡಕ್ಕೂ ಅವಕಾಶವಿಲ್ಲದಿದ್ದರೂ, ಕೆಲವೊಂದು ಘಟಕಗಳು ಅಥವಾ ಭಾರತದ ಭಾಗಗಳು ತಾವೇ ತಮ್ಮ ಜವಾಬ್ದಾರಿಗಳನ್ನು ಒಪ್ಪಿ, ಸಭೆಯೊಳಗೆ ಸೇರಲು ನಿರ್ಧರಿಸಿದರೆ, ಅವಕ್ಕೆ ಕೆಲವೊಂದು ಸೌಲಭ್ಯಗಳು, ಹಕ್ಕುಗಳು ಪ್ರತಿಯಾಗಿ ದೊರೆಯುತ್ತವೆ. ಯಾರು ಒಳಕ್ಕೆ ಬರಲಾರರೋ, ಅವರು ಆ ಹೊಣೆ ಹೊರಲು ಸಿದ್ಧರಿಲ್ಲವೆಂಬ ಕಾರಣಕ್ಕಾಗಿ, ಅಂತಹ ಹಕ್ಕುಗಳೂ ಕೂಡ ದೊರೆಯವು. ಇದು ಅನಿವಾರ್ಯ. ಒಮ್ಮೆ, ಒಂದು ಘಟಕ, ರಾಜ್ಯ ಅಥವಾ ಭಾರತದ ಯಾವುದೇ ಭಾಗ ನಿರ್ಣಯಿಸಿದಾಗ ಇತರ ಪರಿಣಾಮಗಳು ಹಿಂದೆಯೇ ಬರುತ್ತವೆ. ಪ್ರಾಯಶಃ ಎರಡರ ನಡುವಣ ಕಂದಕ ಬಿರಿಯುತ್ತದೆ. ಅದೆಂದರೆ ಘಟನಾವಳಿಗಳ ಒತ್ತಡ ಇಲ್ಲವಾದರೆ, ಇಲ್ಲಿಗೆ ಬರುವ ಇಲ್ಲವೆ ಬಾರದಿರುವ ವಿಷಯ. ಆಯಾ ರಾಜ್ಯಕ್ಕೆ ಬಿಟ್ಟಿದ್ದು. ಹೀಗಾಗಿ ಆ ವಿಷಯವನ್ನು ಸ್ಪಷ್ಟಪಡಿಸಲಾಗಿದೆ.

ಈ ಸಂದರ್ಭದಲ್ಲಿ ಪ್ರಸ್ತಾಪಿಸಲಾದ ಮತ್ತೊಂದು ವಿಷಯವೆಂದರೆ, ರಾಜ್ಯಗಳಲ್ಲಿ ಪ್ರಭುತ್ವದ ಆಳ್ವಿಕೆ. ಒಂದು ವಿಷಯವನ್ನು ನಾವು ಹಿಂದೆಯೇ ತಿಳಿಸಿದ್ದೆ. ಹಿಂದೊಂದು ಕಾಲದಲ್ಲಿ ರಾಜರ ಆಳ್ವಿಕೆಯಿಂದ ಪ್ರಜೆಗಳಿಗೆ ಏನೇ ಒಳಿತಾಗಿರಲಿ, ವರ್ತಮಾನದ ಜಾಗತಿಕ ಸಂದರ್ಭದಲ್ಲಿ ಅಂತಹ ಆಳ್ವಿಕೆ ಜನಪ್ರಿಯವಾಗದು. ಅದು ಮರೆಯಾಗುತ್ತಿರುವ ವ್ಯವಸ್ಥೆ. ಅದು ಇನ್ನೆಷ್ಟು ಕಾಲ ಮುಂದುವರೆಯುವುದೋ ಕಾಣೆ. ಈ ಬಗ್ಗೆ ನನ್ನ ಅನಿಸಿಕೆ ಅಪ್ರಸ್ತುತ. ಈ ಸಭೆ ಹೇಗೆ ಪರಿಗಣಿಸುತ್ತದೆಯೋ ಅದು ಮುಖ್ಯ. ಅದು ಏನು ಮಾಡಲಿದೆ ಎಂಬುದು ಮುಖ್ಯವಾಗುತ್ತದೆ. ನಾವೀಗಾಗಲೇ ಸ್ಪಷ್ಟಪಡಿಸಿರುವಂತೆ, ರಾಜ್ಯಗಳ ಆಂತರಿಕ ವ್ಯವಹಾರದಲ್ಲಿ ನಾವು ತಲೆ ಇಡುವುದಿಲ್ಲ. ಜನತೆ ತನ್ನ ಬೇಕು ಬೇಡಗಳನ್ನು ಆಯಾ ರಾಜ್ಯಗಳಲ್ಲಿ ನಿರ್ಧರಿಸತಕ್ಕದ್ದು ಆ ಪ್ರಶ್ನೆ, ಇಲ್ಲಿ ಉದ್ಭವಿಸುವುದಿಲ್ಲ. ಇಲ್ಲಿ ನಾವು ಚರ್ಚಿಸುತ್ತಿರುವುದು ಕೇಂದ್ರೀಯ ವಿಷಯ, ಮೂಲಭೂತ ಹಕ್ಕುಗಳು ಮತ್ತು ಆ ಬಗೆಯ ಇತರ ವಿಷಯಗಳು ಇಲ್ಲಿ ಚರ್ಚೆಗೆ ಬರತಕ್ಕವು. ಆದುದರಿಂದ ಉಭಯತ್ರ

ನಡೆದ ಸಮಾಲೋಚನೆಯ ನಡುವೆ, ರಾಜಾಡಳಿತದ ವಿಷಯ ತಲೆ ಇಡಲಿಲ್ಲ. ಆ ಬಗ್ಗೆ, ಇಲ್ಲಿಯೂ ನಾವು ಚರ್ಚಿಸಲಾರೆನೆಂಬುದನ್ನು ನಾನು ಅವರಿಗೆ ತಿಳಿಪಡಿಸಿದೆ.

ಕೊನೆಯದಾಗಿ, ಈ ಸಭೆಯಲ್ಲಿ ಮಂಡಿಸಲಾದ ಧ್ಯೇಯೋದ್ದೇಶಗಳನ್ನು ಕುರಿತ ನಿರ್ಣಯ, ಚರ್ಚೆಗೆ ಬಂತು. ಇದು, ನಿಲುವಳಿಯಲ್ಲಿ ವ್ಯಕ್ತಪಡಿಸಲಾದ ಕೆಲ ಶಬ್ದಗಳು ತಂದ ಆತಂಕಕ್ಕೆ ಸಂಬಂಧಿಸಿದ್ದು. ನಿರ್ಣಯದಲ್ಲಿ ಗಡಿ ಬದಲಾವಣೆ ಕುರಿತ ಉಲ್ಲೇಖ ಜಿಜ್ಞಾಸೆಗೆ ಕಾರಣವಾಗಿತ್ತು. ಅದಕ್ಕೂ ರಾಜ್ಯಗಳಿಗೂ ಏತರ ಸಂಬಂಧವೂ ಇಲ್ಲವೆಂಬುದನ್ನು ಸಭೆ ನೆನಪಿನಲ್ಲಿಟ್ಟಿರಬಹುದು. ಮುಂದೆ ಇಂತಹ ಸಂದರ್ಭಗಳು ಒದಗಿಯೇ ತೀರುವುದರಿಂದ, ಗಡಿಯ ಬಗ್ಗೆ ಮುಂದಿನ ದಿನಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಅನುವಾಗುವವು ಉಪಬಂಧಗಳಷ್ಟೆ; ಅವು ಅಂತಹ ಹೊಂದಾಣಿಕೆಯಿಂದ ಹೊಸ ಹೊಸ ಘಟಕಗಳು ಹುಟ್ಟುವ ಸಂದರ್ಭಕ್ಕಾಗಿ ರೂಪಿಸಿದವು. ಅವೆಲ್ಲವೂ ಕೇಂದ್ರದ ವಿಭಿನ್ನ ಘಟಕಗಳಾಗಿರುವಂಥವು. ಸ್ಪಷ್ಟವಾಗಿ ಹೇಳುವುದಾದರೆ, ಅತಿ ಸಣ್ಣ ಘಟಕಗಳು, ಹಾಗೂ ಭಾರತದ ಅತ್ಯಲ್ಪ ಗಾತ್ರದ ಭಾಗಗಳು, ಆಂಶಿಕವಾಗಿ ಅಸ್ತಿತ್ವದಲ್ಲಿರುವುದು ಸಾಧ್ಯವಿಲ್ಲ. ಗಾತ್ರದಲ್ಲಿ ಸಾಧ್ಯವಾದಷ್ಟೂ ಹಿರಿದಾದ ಘಟಕಗಳ ರಚನೆಗೆ, ಯೋಗ್ಯ ವ್ಯವಸ್ಥೆಯಾಗಬೇಕು. ಪ್ರಾಂತಗಳ ವಿಭಜನೆಯ ಬಗ್ಗೆ ಇಂದು ಹಾಗೂ ಮುಂದೂ ಸಹ ಪ್ರಶ್ನೆಗಳು ಏಳುತ್ತವೆ. ಅದನ್ನು ಕುರಿತ ತೀವ್ರ ಭಾವನೆಗಳು ಈಗಾಗಲೇ ಮೊಳೆತಿವೆ. ಅವುಗಳನ್ನು ಕುರಿತು ಈಗ ನಾವು ಚರ್ಚಿಸುತ್ತಿದ್ದೇವೆ. ಅದಕ್ಕೆ ಬೇರೆಯೇ ಕಾರಣಗಳಿರಬಹುದು. ಉದಾ:–ಪಂಜಾಬ್ ಮತ್ತು ಬಂಗಾಳ. ಇವೆಲ್ಲವನ್ನೂ ಪರಿಗಣಿಸಬೇಕಾಗುತ್ತದೆ. ಆದರೆ ಇದಕ್ಕೂ, ನಿರ್ಣಯ ಧ್ಯೇಯೋದ್ದೇಶಗಳಿಗೂ ಸಂಬಂಧವಿಲ್ಲ. ಒಂದು ಮಾತಂತೂ ಖಚಿತ. ಯಾವುದೇ ಗಡಿ ಪ್ರಾಂತ್ಯದ, ಎಲ್ಲೆಗಳನ್ನು ಪರಸ್ಪರ ಸಮ್ಮತಿಯಿಂದಲೆ ಬದಲಿಸಬೇಕಾಗುವುದೆಂಬುದನ್ನೂ ಸಂಧಾನ ಸಮಿತಿಯಲ್ಲಿ ವಿವಾದಕ್ಕೆ ಎಡೆಯಿಲ್ಲದಂತೆ ಖಚಿತಪಡಿಸಲಾಗಿದೆ.

ಪ್ರಭುಗಳ ಪಕ್ಷದ ಸಂಧಾನ ಸಮಿತಿಗೆ, ನಮ್ಮ ಸಮಿತಿಯ ಪರವಾಗಿ ಕೆಲವು ಹೇಳಿಕೆಗಳನ್ನು ನೀಡಲಾಗಿದೆ. ಅವು ಹಲವಾರು ಜಿಜ್ಞಾಸೆಗಳನ್ನು ಪರಿಹರಿಸಿವೆ. ಅವುಗಳನ್ನು ಉಳಿದು ಮಿಕ್ಕ ವಿಷಯಗಳತ್ತ ಗಮನ ಹರಿಸಿದೆವು.

ಬೇರೆ ವಿಷಯಗಳು ಚರ್ಚೆಗೆ ಬಂದಾಗ, ನಮಗೆ ಮೊದಲು ಪ್ರಸ್ತುತವಾದುದೆಂದರೆ, ಸ್ಥಾನಗಳ ಹಂಚಿಕೆ. ಈ ವಿಷಯವನ್ನು ನಾವು ಎರಡು ಸಚಿವಾಲಯಗಳ ಪರಾಮರ್ಶೆಗೆ ಬಿಟ್ಟೆವು; ಅವುಗಳಲ್ಲಿ ಒಂದು, ಸಂವಿಧಾನ ರಚನಾ ಸಭೆಯ ಸಚಿವಾಲಯ; ಮತ್ತೊಂದು ಪ್ರಭುಗಳ ಪೀಠಕ್ಕೆ ಸಂಬಂಧಿಸಿದ ಕಾರ್ಯಾಲಯ. ಅದೊಂದು ದಿನ ಮಧ್ಯಾಹ್ನ ೧.೩೦ಕ್ಕೆ ಈ ವಿಷಯವನ್ನು ಎರಡೂ ಸಚಿವಾಲಯಗಳಿಗೆ ವಹಿಸಿದೆವು. ಅದೇ ದಿನ ಅವೆರಡೂ ಮಧ್ಯಾಹ್ನ ೩ ಗಂಟೆಗೆ ಸಭೆ ಸೇರಿದುವು. ಮತ್ತೆ ಸಂಜೆ ೫ ಗಂಟೆಗೆ ಒಂದು ಸರ್ವಸಮ್ಮತ ಪ್ರಕ್ರಿಯೆಯನ್ನು ಅಂಗೀಕರಿಸಿದುವು. ಅದೊಂದು ಅವಿಸ್ಮರಣೀಯ ಘಟನೆ. ನಿಜ; ಸ್ಥಾನಗಳ ಹಂಚಿಕೆಯ ಬಗ್ಗೆ ಕ್ಯಾಬಿನೆಟ್ ಮಿಷನ್ ಯೋಜನೆಯಲ್ಲಿ ಒಂದಿಷ್ಟು ನಿಯಮಗಳನ್ನು ರೂಪಿಸಲಾಗಿತ್ತು. ದಶಲಕ್ಷಕ್ಕೆ ಒಂದು ಸ್ಥಾನದಂತೆ, ಒಟ್ಟು ೯೩ ಸ್ಥಾನಗಳು. ದುರದೃಷ್ಟವಶಾತ್ ಈ ಸ್ಥಾನ ಹಂಚಿಕೆಯ ವಿಷಯ ಕ್ಲಿಷ್ಟವಾದುದು. ಅತಿ ದೊಡ್ಡ ವಾದ ವಿವಾದಗಳನ್ನು ಹುಟ್ಟುಹಾಕುವಂತಹುದು. ಆದರೂ ಇವೆರಡೂ ಸಮಿತಿಗಳು ಕಲೆತವು. ಸಂತೋಷದ ಸಂಗತಿಯೆಂದರೆ, ಸಂವಿಧಾನ ರಚನಾ ಸಭೆಯ ನೆರವಿಗೆ ರಾಜ್ಯಗಳ ಪ್ರತಿನಿಧಿಗಳು ಒದಗಿದರು. ಹಾಗಾಗಿ ಕೇವಲ ಎರಡೇ ತಾಸಿನಲ್ಲಿ ಉಭಯಸಮ್ಮತ ಪರಿಹಾರವೊಂದನ್ನು ಹುಡುಕಲು ಸಾಧ್ಯವಾಯಿತು. ಇಂತಹ ಎದ್ದು ಕಾಣುವಂತಹ ಯಾವುದೇ ತೊಂದರೆಗಳು ಉದ್ಭವಿಸಿದ ಸಂದರ್ಭದಲ್ಲಿ ನಾವು ಮುಕ್ತ ಮನಸ್ಸಿನಿಂದ, ಸದ್ಭಾವನೆಯಿಂದ ಸಮಸ್ಯೆಗಳ ಪರಿಹಾರ ಹುಡುಕಲು ತೊಡಗಿದರೆ, ಪರಿಹಾರಗಳು ತಂತಾವೆ ನಮ್ಮತ್ತ ಧಾವಿಸುತ್ತವೆ ಎಂಬುದನ್ನು ಇದು ನಿರೂಪಿಸುತ್ತದೆ. ಸ್ಥಾನಗಳ ಹಂಚಿಕೆ ಸಮರ್ಪಕವೆಂದು ನಾನು ಹೇಳುತ್ತಿಲ್ಲ. ಈ ಬಗ್ಗೆ ಸರ್ವಸಮ್ಮತ ಅಂಗೀಕಾರ ದೊರೆತಾಗ ಕೆಲವೊಂದು ಆಕ್ಷೇಪಣೆಗಳು ಎದ್ದಿದ್ದುವು.

ಅಲ್ಲಲ್ಲಿ ರಾಜ್ಯಗಳ ವರ್ಗೀಕರಣದ ಬಗ್ಗೆ ಟೀಕೆ ಟಿಪ್ಪಣಿಗಳು ಕೇಳಿ ಬಂದುವು. ಕಡೆಯದಾಗಿ ನಾವು ಈ ವಿಷಯವನ್ನು ಒಂದು ಉಪಸಮಿತಿಗೆ ವಹಿಸಿಕೊಟ್ಟೆವು. ಈ ಉಪಸಮಿತಿ, ನಮ್ಮ ಮತ್ತು ರಾಜ್ಯಗಳ ಸಂಧಾನ ಸಮಿತಿಗಳಿಂದ ಆಯ್ದ ಜಂಟಿ ಸಮಿತಿ. ಈ ಸಮಿತಿ ಸಣ್ಣಪುಟ್ಟ ಬದಲಾವಣೆಗಳನ್ನು ತನಗೆ ಸೂಕ್ತವೆನಿಸಿದಂತೆ ಮಾಡಬಹುದು. ಈ ಸಮೂಹ ವರ್ಗೀಕರಣದಿಂದಾಗಿ, ಕೆಲವೊಂದು ರಾಜ್ಯಗಳು ತಮಗೆ ಪ್ರಾತಿನಿಧ್ಯದಲ್ಲಿ ಆಸಕ್ತಿ ಇದ್ದರೂ ಸಹ ಅವು ಯಾವುವೂ ಇಲ್ಲಿಲ್ಲ, ಇದರರ್ಥ. ರಾಜ್ಯಗಳು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಇಲ್ಲಿಗೆ ಕಳುಹಿಸಿಕೊಡಲು ಇಚ್ಛೆಯುಳ್ಳವಾಗಿದ್ದರೂ, ಸಂಬಂಧಪಟ್ಟ ಗುಂಪುಗಳು ಇನ್ನೂ ಕಾರ್ಯಾಚರಣೆಯಲ್ಲಿ ತೊಡಗಿಲ್ಲ. ಆದುದರಿಂದ ವೈಯಕ್ತಿಕವಾಗಿ ಅವರು ಬರದಂತೆ ತಡೆಯಲಾಗುತ್ತಿದೆ. ಕಚ್ (ಒಂದು ಪ್ರಮುಖ ರಾಜ್ಯ) ನಮ್ಮೊಳಗೆ ಸೇರಲು ಕಾತರ ವ್ಯಕ್ತಪಡಿಸಿದ್ದು ನನಗೆ ನಿನ್ನೆಯಷ್ಟೆ ತಿಳಿದು ಬಂತು. ಸರಿಯೋ ತಪ್ಪೋ ಕತಿಯಾವರ್ ಮತ್ತು ಇತರ ರಾಜ್ಯಗಳ ಒಂದು ಭಾಗವಾಗಿದ್ದು, ಇಡೀ ಗುಂಪು ನಿರ್ಧರಿಸಿದ ಹೊರತು ಕಚ್, ಸಭೆಗೆ ಸೇರುವುದೋ ಬೇಡವೋ ಅಥವಾ ಪ್ರತ್ಯೇಕವಾಗಿ ಸೇರಬೇಕೋ ಎಂಬ ದ್ವಂದ್ವದಲ್ಲಿ ಸಿಲುಕಿತ್ತು. ಈ ವಿಷಯವನ್ನು ಉಪಸಮಿತಿ ಪರಿಶೀಲಿಸಬೇಕು. ಆದರೆ ಈ ಸಮಸ್ಯೆಯ ಬಗ್ಗೆ ಸಭೆಗೆ ತಿಳಿಸುವುದೇನೆಂದರೆ, ಇದು ನಮ್ಮ ಹಿಡಿತಕ್ಕೆ ಸಿಕ್ಕ ಕೂಡಲೇ ಮಿಕ್ಕಂತೆ ಗುಂಪುಗಳು ಹಕ್ಕುಗಳನ್ನು ಕುರಿತು ಸರ್ವಸಾಮಾನ್ಯ ವಿಷಯಗಳ ಬಗ್ಗೆ ಚಿಂತಿಸುವುದನ್ನು ಬಿಟ್ಟೆವು. ಕೂಡಲೇ ಒಂದು ನಿರ್ಧಾರಕ್ಕೆ ಬಂದೆವು. ಅದು ನಮ್ಮ ಮುಂದಿನ ಕೆಲಸಕ್ಕೆ ಶುಭ ಸೂಚನೆಯಾಯಿತು. ರಾಜ್ಯಗಳ ಜನತೆಗೆ ಸಂಬಂಧಪಟ್ಟ ಕೆಲಸವಾಗಲಿ. ಭಾರತದ ಉಳಿದ ಪ್ರದೇಶಗಳಿಗೆ ಸಂಬಂಧಿಸುವುದಾಗಲಿ ಅಥವಾ ಯಾವುದೇ ವಿಷಯಕ್ಕೂ ಇದು ಒಳ್ಳೆಯ ಪ್ರಾರಂಭವಾಗುತ್ತದೆ.

ನಾವಿಲ್ಲಿ, ಸಭೆ ಸೇರುವವರು ಅತಿ ದೊಡ್ಡ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ; ನಾವು ಕೈಗೊಂಡಿರುವ ಕೆಲಸ ಕ್ಲಿಷ್ಟವೆಂಬ ಕಾರಣಕ್ಕಾಗಿ ಮಾತ್ರವಲ್ಲ ಅಥವಾ ಅಸಂಖ್ಯ ಜನರನ್ನು ಪ್ರತಿನಿಧಿಸಬೇಕಾಗುತ್ತದೆಂಬ ಭಾವನೆಯಿಂದಲೂ ಅಲ್ಲ. ನಾವು ಭವಿಷ್ಯದ ಕಟ್ಟೋಣಕ್ಕೆ ನಿಂತವರು. ನಮ್ಮ ಭವ್ಯಸೌಧ ಭದ್ರಬುನಾದಿಯ ಮೇಲೆ ನಿಲ್ಲುವುದೆಂಬ ಖಾತರಿ ನಮಗಿರಬೇಕು. ಭಾರತದ ಅಸ್ತಿತ್ವವನ್ನು ಬುಡ ಮೇಲು ಮಾಡುವ ದುಷ್ಟಶಕ್ತಿಗಳು ಕೆಲಸ ಮಾಡುತ್ತಿರುವ ವೇಳೆಯಲ್ಲಿ ನಾವು ಈ ಕೆಲಸಕ್ಕೆ ಕೈ ಇಟ್ಟಿದ್ದೇವೆ. ಆ ಶಕ್ತಿಗಳನ್ನು ನಮ್ಮನ್ನು ಹಿಗ್ಗಾಮುಗ್ಗಾ ಎಳೆಯುತ್ತಿವೆ. ಇದೊಂದು ದುರದೃಷ್ಟಕರ ಸಂಗತಿ; ಇದು ಅಪರಿಹಾರ್ಯವೂ ಆಗಿದೆ. ಇಂತಹ ಸನ್ನಿವೇಶದಲ್ಲಿ, ಪೂರ್ವಾಗ್ರಹ, ಭಾವಾವೇಶ, ಎಲ್ಲವೂ ವಾತಾವರಣವನ್ನು ಹದಗೆಡಿಸುತ್ತವೆ. ನಮ್ಮೆಲ್ಲರ ಮನಸ್ಸು ಕಲುಷಿತಗೊಳ್ಳುತ್ತದೆ. ವರ್ತಮಾನದ ತೊಂದರೆಗಳೇನೇ ಇರಲಿ, ಅವು ನಮ್ಮ ಭವಿಷ್ಯದ ಕಲ್ಪನೆಯನ್ನು ಮಸುಕುಗೊಳಿಸಬಾರದು. ನಮ್ಮ ದೃಷ್ಟಿಪಲ್ಲಟಗೊಳ್ಳಬಾರದು. ಇಂತಹ ಅಪಾಯಕಾರಿ ಪ್ರವೃತ್ತಿಯನ್ನು ನಾವು ತಪ್ಪಿಸಬೇಕು. ನಮ್ಮ ನಿರ್ಮಾಣಕಾರ್ಯ ಇವತ್ತಿಗಾಗಲಿ, ಅಥವಾ ನಾಳೆಗಾಗಲಿ ಉಳಿಯಲೆಂದಲ್ಲ. ಚಿರಕಾಲ ಉಳಿಯುವ ಕಟ್ಟಡದ ನಿರ್ಮಾಣದಲ್ಲಿ ತೊಡಗಿದ್ದೇವೆ. ನಾನು ಸಭೆಯ ಕ್ಷಮೆ ಬೇಡಿ ಒಂದು ಎಚ್ಚರಿಕೆಯ ಮಾತನ್ನು ಹೇಳುತ್ತಿದ್ದೇನೆ ಮತ್ತು ಅದನ್ನು ಪುನರುಚ್ಚರಿಸುತ್ತಿದ್ದೇನೆ. ನಮ್ಮ ಆದೇಶ ನಮ್ಮ ಪೂರ್ವಾಗ್ರಹ ಇವು ಯಾವುವು, ನಮ್ಮ ಮುಂದಿರುವ ಸಮಸ್ಯೆಗಳನ್ನು ನಿವಾರಿಸಲು ನಾವು ಮರೆಯುವಂತೆ ಮಾಡಬಾರದು. ನಮ್ಮ ನೈಜ, ಅಂತಿಮ ಸಮಸ್ಯೆಗಳೇನೆಂಬುದನ್ನು ನಾವು ಕಂಡುಕೊಳ್ಳಬೇಕು. ಪ್ರಸ್ತುತ ಸಮಸ್ಯೆಗಳೇನೆಂಬುದನ್ನು ಮರೆಯಬಾರದು. ಇವು ಕೇವಲ ಇಂದಿನ ಸಮಸ್ಯೆಗಳಲ್ಲ. ಮುಂದೆಯೂ ತಲೆದೋರುತ್ತಲೆ ಇರುತ್ತವೆ. ಪ್ರಸ್ತುತ ಸಮಸ್ಯೆಗಳನ್ನು ನಾವು ಈ ಹಂತದಲ್ಲೆ ಬಗೆಹರಿಸಬೇಕು. ಆ ನಿಟ್ಟಿನಲ್ಲಿ ದುರದೃಷ್ಟವಶಾತ್, ಇಷ್ಟೂ ದಿನ ನಮ್ಮನ್ನು ಬಾಧಿಸುತ್ತಿದ್ದ ತೊಂದರೆಗಳು, ನಮ್ಮ ಪರಿಹಾರೋಪಾಯಗಳ ಮೇಲೆ ಪರಿಣಾಮ ಬೀರಬಹುದು. ಏನೇ ಆಗಲಿ ನಾವು ಮುನ್ನಡೆಯಲೇಬೇಕು; ತ್ವರಿತವಾಗಿ ನಿರ್ಧಾರಗಳನ್ನು ಕೈಗೊಳ್ಳಲೇಬೇಕು. ಅಂತಿಮ ನಿರ್ಧಾರವನ್ನೂ ಈಗಲೇ ತೆಗೆದುಕೊಂಡು ಅವುಗಳ ಅನುಷ್ಠಾನದಲ್ಲಿ ತೊಡಗಲು ಇದು ಸಕಾಲ ನಾವು

ವಾಸ್ತವವಾದಿಗಳಾಗಬೇಕು. ವಾಸ್ತವವಾದವನ್ನೂ ಆದರ್ಶವಾದವನ್ನೂ ಹೊತ್ತು, ಈ ಕರ್ತವ್ಯದತ್ತ ನಮ್ಮ ಸಂಧಾನ ಸಮಿತಿ ಮುಖಮಾಡಿದೆ.

ರಾಜ್ಯಗಳ ಜನತೆಯ ಸ್ವಾತಂತ್ರ್ಯ ಹೋರಾಟದೊಡನೆ. ಸಮಿತಿಯ ಕೆಲ ಸದಸ್ಯರು ನಿಕಟ ಸಂಪರ್ಕ ಹೊಂದಿರುವುದನ್ನು ಈ ಸದನ ತಿಳಿದಿದೆ. ಅಂತಹ ಹೋರಾಟದಲ್ಲಿ ನಾನು ಹೆಚ್ಚು ಹೆಚ್ಚು ತೊಡಗುತ್ತಿದ್ದಂತೆ ಅಖಿಲ ಭಾರತ ಸಂರಚನೆಯಿಂದ ಅದನ್ನು ಬೇರ್ಪಡಿಸಲಾಗದೆಂಬುದು ನನ್ನ ಅನುಭವ. ಅದನ್ನು ಪ್ರತ್ಯೇಕವಾಗಿ ವಿವೇಚಿಸಲು ಸಾಧ್ಯವಿಲ್ಲ. ಅದು, ಅಖಿಲ ಭಾರತ ಸಂರಚನೆಯ (All India Structure) ಅವಿಭಾಜ್ಯ ಅಂಗ; ಭಾರತದ ಅವಿಭಾಜ್ಯ ಅಂಗಗಳಾಗಿ ಬೇರೆ ಬೇರೆ ರಾಜ್ಯಗಳಿದ್ದಂತೆ. ಅವುಗಳನ್ನು ನೀವು ಬೇರ್ಪಡಿಸಲಾಗದು. ರಾಜ್ಯಗಳ ಜನರನ್ನು ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಸುವ ಆತಂಕದೊಡನೆ, ನನ್ನಲ್ಲಿರುವ ವೈಯಕ್ತಿಕ ಮತ್ತಿತರ ಶಕ್ತಿ ಹೆಣೆದುಕೊಂಡು, ಸಂಧಾನ ಸಮಿತಿಯ ಮುಂದೆ ನನ್ನ ವ್ಯಕ್ತಿಗತ ಅಭಿಪ್ರಾಯಗಳನ್ನು ನಿಯಂತ್ರಣದಲ್ಲಿಡಬೇಕಾಯಿತು. ಏಕೆಂದರೆ, ನಾನು ಅವರೊಡನೆ ನಡೆಸಿದ ಇಡೀ ಮಾತುಕತೆಯುದ್ದಕ್ಕೂ, ಸಂವಿಧಾನ ರಚನಾ ಸಭೆಯನ್ನು ಪ್ರತಿನಿಧಿಸುತ್ತಿದ್ದೇನೆಂಬುದನ್ನು ನೆನಪಿಲ್ಲಿಡಬೇಕಿತ್ತು. ಜೊತೆಗೆ ನಾವಲ್ಲಿ ಹೋದದ್ದು ಚೌಕಾಸಿ ಮಾಡಲಿಕ್ಕಲ್ಲವೆಂಬುದನ್ನೂ ಮರೆಯಬಾರದಿತ್ತು. ಎಲ್ಲಕ್ಕಿಂತಲೂ ಮಿಗಿಲಾಗಿ ಪರಸ್ಪರ ಕಾವೇರಿಸುವ ಚರ್ಚೆಯಲ್ಲಿ ತೊಡಗಬಾರದು; ಅವರು ಸಂದೇಹಗ್ರಸ್ತರಾಗಿದ್ದರೂ ಅವರನ್ನು ಇಲ್ಲಿಗೆ ಕರೆತಂದು ನಮ್ಮ ಸಂಧಾನವನ್ನು ಸಫಲಗೊಳಿಸುವುದು ಮುಖ್ಯವಾಗಿತ್ತು. ಅವರಿಲ್ಲಿಗೆ ಆಗಮಿಸಿ ಇಲ್ಲಿಯ ವಾತಾವರಣದಿಂದ ಪ್ರಭಾವಿತರಾಗಲೆಂಬುದು ನಮ್ಮ ಆಶಯವಾಗಿತ್ತು. ನನಗೆ ಫಲತಾಂಶ, ವ್ಯಕ್ತಿ, ಸಮೂಹ ಅಥವಾ ಆಶ್ವಾಸನೆಗಳಿಗಿಂತ ಹೆಚ್ಚು ಮುಖ್ಯವಾದದ್ದು, ನಮ್ಮ ಶ್ರದ್ಧಾ ಪೂರ್ವಕ ಕರ್ತವ್ಯ. ನಾವು ಒಬ್ಬರಿಂದೊಬ್ಬರು ಅಪೇಕ್ಷಿಸುವ ಭರವಸೆಯಾದರೂ ಏನು? ಸ್ವಾತಂತ್ರ್ಯವೊಂದಲ್ಲದೆ, ಬೇರಾವ ಭರವಸೆಯನ್ನು ಈ ಸಭೆಯಾಗಲಿ ಭಾರತದ ಪ್ರತಿಯೋರ್ವ ಪ್ರಜೆಗೆ ಕೊಡಬಲ್ಲುದು. ಆ ಭರವಸೆಯೂ, ನಂತರದಲ್ಲಿ ಭಾರತೀಯರ ಶಕ್ತಿ ಮತ್ತು ವಿವೇಕವನ್ನು ಅಂತಿಮವಾಗಿ ಅವಲಂಬಿಸಿರುವಂತಹುದು. ಜನರು, ಒಗ್ಗೂಡಿ ಋಜುಮಾರ್ಗದಲ್ಲಿ ನಡೆಯಲು ಸಶಕ್ತರಾಗಿ, ವಿವೇಕಿಗಳಾಗಿರದಿದ್ದರೆ, ನಮ್ಮ ಸಂರಚನೆ ಛಿದ್ರಗೊಳ್ಳಬಹುದು. ನಾವು ಯಾರಿಗೂ ಭರವಸೆ ಕೊಡಲಾಗದು.

ಇಷ್ಟು ವರುಷಗಳಿಂದ ಯಾವ ಆಶ್ವಾಸನೆ ಹೊತ್ತು ಭಾರತದ ಸ್ವಾತಂತ್ರ್ಯವನ್ನು ಅರಸುತ್ತ ಬಂದಿದ್ದೇವೆ? ನಮ್ಮ ಕೆಲವೊಂದು ಕನಸುಗಳು ನನಸಾಗುವ ದಿನಗಳಿಗಾಗಿ ಕಾಯುತ್ತಿದ್ದೇವೆ. ಅದು ಅವು ಕೈಗೂಡಬಹುದು. ಅದು ನಾವು ಬಯಸಿದ ರೀತಿಯಲ್ಲಿ ಇಲ್ಲದಿರಬಹುದು. ಏನೇ ಆಗಲಿ ಅವು ಸಾಕಾರಗೊಳ್ಳುತ್ತವೆ. ಆ ದೃಢ ಸಂಕಲ್ಪ ಮತ್ತು ದೃಢವಿಶ್ವಾಸದಿಂದ ನಾವು ಇಷ್ಟು ಕಾಲ ಮುನ್ನಡೆದಿದ್ದಾಯಿತು. ನಮಗೆ ಯಾವುದೇ ಖಾತರಿ ಇಲ್ಲ. ನಮಗೆ ನಮ್ಮ ಮೇಲೇ ಭರವಸೆ ಇಲ್ಲ. ನಮ್ಮ ಭವಿಷ್ಯದ ಮೇಲೂ ಇಲ್ಲ. ನಮಗೆ ಸಿಕ್ಕ ಒಂದಿಷ್ಟು ಖಾತರಿ ಎಂದರೆ ನಮ್ಮ ಕಷ್ಟ ಕೋಟಲೆಗಳು, ನಮ್ಮ ಕಣ್ಣೀರು. ಅದು ಯಥೇಚ್ಛವಾಗಿ ಸಿಕ್ಕಿದೆ. ಮುಂದೆಯೂ ಇದೇ ನಮಗೆ ಸಿಗಬಹುದಾದ ಭರವಸೆಯೇನೋ ಇರಲಿ, ಎದುರಿಸೋಣ. ಈ ಸದನ, ಅಂತೆಯೇ ಭಾರತದ ಜನತೆ, ಎದುರಿಸುತ್ತಾರೆ. ಆದುದರಿಂದ, ಮಿಕ್ಕವರಿಗೆ ಖಾತರಿ ನೀಡಲು ನಾವು ಯಾರು? ಆದರೆ ಸಾಧ್ಯವಾದಷ್ಟೂ ತಪ್ಪು ಕಲ್ಪನೆಯನ್ನು ನಿವಾರಿಸಲು ನಾವು ಬಯಸುತ್ತೇವೆ. ನಾವು ಪ್ರತಿಯೊಬ್ಬ ಭಾರತೀಯನನ್ನೂ ಸಮಾನತೆಯಿಂದ ಸಹೋದರ ಭಾವದಿಂದ ಕಾಣುವೆವು ಎಂಬುದು ಆತನ ಅನುಭವಕ್ಕೆ ಬರಬೇಕು. ಜೊತೆಗೆ ಇದನ್ನೂ ಆತ ತಿಳಿದಿಟ್ಟಿರಬೇಕು. ಮುಂದಿನ ದಿನಗಳಲ್ಲಿ ವೈಭವೋಪೇತ ಚಿನ್ನದ ಕಿರೀಟ ಲೆಕ್ಕಕ್ಕೆ ಬಾರದು; ಸ್ವಾತಂತ್ರ್ಯವೊಂದೆ ಗಣನೀಯ. ಅದು ಮುಕ್ತ ರಾಷ್ಟ್ರವೊಂದರಲ್ಲಿ ಆತ ಪಡೆಯುವ ಕಿರೀಟ. ಪ್ರಾಯಶಃ ಮುಂದೆ ಅವನಿಗೆ ಮಿಕ್ಕೆಲ್ಲ ಬಿರುದು ಬಾವಲಿ, ಪ್ರಶಸ್ತಿ, ಖಿಲ್ಲತ್ತುಗಳಿಗಿಂತ ಮಿಗಿಲಾಗಿ, ಆತ ಆಳೇ ಆಗಿರಲಿ, ಅರಸನೇ ಆಗಿರಲಿ ಸ್ವತಂತ್ರ ಭಾರತದ ಪ್ರಜೆಯಾಗಿ ಸ್ವಾತಂತ್ರ್ಯದ ಅತ್ಯುನ್ನತ ಸನ್ಮಾನಕ್ಕೆ ಭಾಜನನಾಗುತ್ತಾನೆ. ಆ ಗುರಿ ತಲುಪಿಯೇ ತೀರುತ್ತೇನೆ. ಮಿಕ್ಕಾವ ಭರವಸೆಯನ್ನೂ ನಾವು ಯಾರಿಗೂ ಕೊಡಲಾರೆವು. ಸ್ವಾತಂತ್ರ್ಯವನ್ನು ದೊರಕಿಸಿಕೊಡುವ

ಆಶ್ವಾಸನೆ ಈಡೇರಿಸುವಲ್ಲಿ ಸಕ್ರಿಯ ಪಾತ್ರ ವಹಿಸುವಂತೆ ನಾವು ಅವರನ್ನು ಆಹ್ವಾನಿಸುತ್ತೇವೆ. ಮಿಕ್ಕವರು ಯಾರು ಬರಲಿದ್ದಾರೋ ಅವರನ್ನೂ ಸ್ವಾಗತಿಸೋಣ. ಬಾರದಿದ್ದವರ ಬಗ್ಗೆ ಏನನ್ನೂ ಹೇಳುವುದೂ ಬೇಡ. ಆದರೆ ನಾನು ಈಗಾಗಲೇ ತಿಳಿಸಿದಂತೆ, ಅನಿವಾರ್ಯವಾಗಿ, ಇಲ್ಲಿಗೆ ಬಂದವರ ಮತ್ತು ಬಾರದವರ ನಡುವೆ ಕಂದಕ ಹಿರಿದಾಗುತ್ತದೆ. ಅವರು ಬೇರೆ ಬೇರೆ ದಾರಿಗಳಲ್ಲಿ ಮುಂದಡಿ ಇಡುತ್ತಾರೆ. ಅದು ದುರದೃಷ್ಟಕರ. ಆದರೆ ನನಗೆ ಮನವರಿಕೆಯಾಗಿದೆ; ಅವರ ದಾರಿ ಬೇರೆಯಾದರೂ, ಆ ಎಲ್ಲ ವಿಭಿನ್ನ ದಾರಿಗಳೂ ಮುಂದೊಮ್ಮೆ ಸಂಗಮಿಸುತ್ತವೆ. ಆದಷ್ಟೂ ಕ್ಷಿಪ್ರವಾಗಿ ಕೂಡುತ್ತವೆ. ತಡವಾಗಿಸಲ್ಲ. ಏನೇ ಆಗಲಿ, ಯಾವುದರಲ್ಲೂ ಬಲಾತ್ಕಾರವಿಲ್ಲ. ಬರಲು ಬಯಸುವವರು ಬಂದಾರು; ಬರುವ ಆಸಕ್ತಿ ಇಲ್ಲದವರು ಬರಲಾರರು. ಆದರೆ ಇಲ್ಲಿ ಇಷ್ಟನ್ನು ಮಾತ್ರ ಹೇಳುವುದಿದೆ. ಅದೇಂದರೆ ಸದನಕ್ಕೆ ಬರುವ ಮತ್ತು ಬಾರದವರ ವಿಷಯದ ಬಗ್ಗೆ ಮಾತನಾಡುವಾಗ, ಸನ್ಮಾನ್ಯ ಗೋವಿಂದ ಮೆನನ್ ಅವರು ಆಡಿದ ಮಾತನ್ನು ನೆನಪಿಗೆ ತರುತ್ತಿದ್ದೇನೆ. ಜೊತೆಗೆ ಒಂದಿಷ್ಟು ಆಶಾಭಾವನೆಯಿಂದಲೂ, ಒಂದಷ್ಟು ಅಧಿಕಾರವಾಣಿಯಿಂದಲೂ ಹೇಳಬಲ್ಲೆನಾದರೆ, ರಾಜ್ಯದ ಜನಪ್ರತಿನಿಧಿಗಳು ಇಲ್ಲಿಗೆ ಆಗಮಿಸುವ ಇಚ್ಛೆಯುಳ್ಳವರು. ಇತರರು ಅವರನ್ನು, ಬಾರದಂತೆ ತಡೆಯುತ್ತಿದ್ದರೆ ಅದು ಬರಲಿಚ್ಛಿಸುವವರ ತಪ್ಪಲ್ಲ. ಆದರೆ ಬರುವ ದಾರಿಯಲ್ಲಿ ಅಡ್ಡಗಟ್ಟೆಗಳು ತಡೆಗೋಡೆಗಳು ಇಡಲ್ಪಟ್ಟಿವೆ. ಆದರೆ ಈ ಸಮಸ್ಯೆಗಳು ಮುಂದೆ ಉದ್ಭವಿಸಲಾರವು ಎಂದು ಭಾವಿಸುತ್ತೇನೆ. ಬರುವ ತಿಂಗಳು ಅಥವಾ ಇನ್ನೆರಡು ತಿಂಗಳಲ್ಲಿ ಎಲ್ಲ ರಾಜ್ಯಗಳು ಇಲ್ಲಿ ಪ್ರಾತಿನಿಧ್ಯ ಪಡೆದಾವು. ಎಲ್ಲರೂ ಒಗ್ಗೂಡಿ, ಸಂವಿಧಾನ ರಚನೆಯಲ್ಲಿ ತೊಡಗುತ್ತೇವೆ.

ವರದಿಯನ್ನು ದಾಖಲಿಸುವಂತೆ, ನಿರ್ಣಯವನ್ನು ಮಂಡಿಸುತ್ತಿದ್ದೇವೆ. ಈ ವಿಷಯದ ಬಗ್ಗೆಯೂ ಕೆಲವೊಂದು ವಾದಗಳು ನಡೆದಿವೆ. ಶುಷ್ಕ ಆಶ್ವಾಸನೆಗಳು, ರಂಗುರಂಗಿನ ಪದಗಳು, ಮಾತುಗಳಿಗಷ್ಟೇ ಜನರು ಪ್ರಾಮುಖ್ಯ ನೀಡುತ್ತಾರೆ. ಈಗ ನಾನು ಹೇಳಿರುವಷ್ಟು ಸಾಕಲ್ಲವೆ? ಸಾಲದಿದ್ದರೆ ಮತ್ತೊಮ್ಮೆ ಅದೇ ಮಾತುಗಳನ್ನು ಹೇಳುತ್ತೇನೆ. ಅದೂ ಸಾಲದಿದ್ದರೆ ನಾವು ಆಡಿರುವುದೆಲ್ಲವನ್ನೂ ಒಳಗೊಂಡಿರುವ ಆ ಪದಶಃ ವರದಿ ಲಭ್ಯವಿದೆ. ಇನ್ನು ಅದಕ್ಕೆ ಪೂರಕವಾಗಿ ಆಡುವುದೇನಿಲ್ಲ. ಅದನ್ನು ನಾವು ಸಮರ್ಥಿಸುತ್ತೇವೆ. ಹಿಂತೆಗೆಯುವುದಿಲ್ಲ. ಆದರೆ ನಾವು ಅಳವಡಿಸುವ ಪ್ರಕ್ರಿಯೆ ಸರಿಯಾಗಿರಬೇಕು. ಸಂಧಾನ ಸಮಿತಿಯನ್ನು ರಚಿಸಿದಾಗ, ವರದಿ ಸಲ್ಲಿಸುವಂತೆ ತಾವು ಹೇಳಿದಿರಿ; ಸಲ್ಲಿಸಿದ್ದೇವೆ. ನಾವು ಮಾಡಬೇಕೆಂದಿದ್ದ ಕಾರ್ಯವೊಂದಿತ್ತು ಮಾಡಲೆತ್ನಿಸಿದೆವು. ಮಾಡಿದ್ದಾಯಿತು. ವರದಿ ಅನುಷ್ಠಾನಕ್ಕೆ ಬರುವ ಮುನ್ನ, ಇದರ ಅನುಸಮರ್ಥನೆ ಸದನದಲ್ಲಿ ಆಗಬೇಕೆನ್ನುವುದೇ ನಿಬಂಧನೆಯಾಗಿದ್ದರೆ, ಇಲ್ಲಿಗೆ ಬಂದಿರುವ ರಾಜ್ಯದ ಪ್ರತಿನಿಧಿಗಳು ಸಭಾಂಗಣದೊಳಗೇ ಕಾಲಿಡುತ್ತಿರಲಿಲ್ಲ. ಬಾಗಿಲ ಮೆಟ್ಟಿಲ ಬಳಿಯೋ, ಇನ್ನೆಲ್ಲಿಯೋ, ಅನುಸಮರ್ಥನೆಗೋ ಬೇರೆ ಏತರ ನಿರೀಕ್ಷೆಯಲ್ಲೋ, ಕಾಯತ್ತ ಕುಳಿತಿರುತ್ತಿದ್ದರು.

ಅದು ಸರಿಯಾದ ದಾರಿಯಲ್ಲ. ಒಂದು ಗೌರವಯುತವಾದ ಒಪ್ಪಂದಕ್ಕೆ ಬರಬೇಕೆನ್ನುವುದು ನಮ್ಮೆಲ್ಲರ ಆಶಯವಾಗಿತ್ತು. ಒಳಗೆ ಬರಲು ಎಲ್ಲ ಪ್ರತಿನಿಧಿಗಳ ಹಾದಿಯೂ ಸುಗಮವಾಗುವಂತೆ ಕಾರ್ಯನಿರ್ವಹಿಸಬೇಕಿತ್ತು. ವಾಸ್ತವವಾಗಿ ಈಗಾಗಲೇ ರಚನೆಯಾಗಿರುವ ಸಲಹಾ ಸಮಿತಿ, ಮೂಲಭೂತ ಹಕ್ಕುಗಳ ಸಮಿತಿ, ಕೆಲವು ಅಧಿಕಾರ ಸಮಿತಿ ಮತ್ತಿತರ ಸಮಿತಿಗಳಲ್ಲಿ ಜನರು ಪಾಲ್ಗೊಳ್ಳಬೇಕೆಂಬುದು ನಮ್ಮ ಇರಾದೆಯಾಗಿತ್ತು. ವಿಳಂಬ ನಮ್ಮ ತಪ್ಪಲ್ಲ. ಸಂಧಾನ ಸಮಿತಿಯ ಮೊದಲ ಜಂಟಿ ಸಭೆಯಲ್ಲೆ, ಆದಷ್ಟೂ ತ್ವರಿತವಾಗಿ, ಸದನದಲ್ಲಿ ಪಾಲ್ಗೊಳ್ಳುವಂತೆ ನಾವು ಕರೆಕೊಟ್ಟಿದ್ದೆವು. ಸಂವಿಧಾನ ರಚನಾ ಸಭೆಯ ಈ ಎಲ್ಲ ಸಮಿತಿಗಳಲ್ಲಿ ಸೇರಲು ತಮ್ಮ ಪ್ರತಿನಿಧಿಗಳನ್ನು ಕಳುಹಿಸಿಕೊಡುವಂತೆ ನಾವು ಕೇಳಿದ್ದೆವು. ಹೆಜ್ಜೆ ಹೆಜ್ಜೆಗೂ ನಮ್ಮಿಂದ ಆಶ್ವಾಸನೆಗಳನ್ನು ನಿರೀಕ್ಷಿಸುತ್ತಲೆ ಬಂದಿದ್ದು ವಿಳಂಬಕ್ಕೆ ಕಾರಣವಾಯಿತು. ನಿಮ್ಮ ಆದೇಶವನ್ನು ನಾವು ಅರ್ಥಮಾಡಿಕೊಂಡದ್ದು ಈ ರೀತಿ – ಪ್ರತಿಯೊಂದಕ್ಕೂ ಅನುಸಮರ್ಥನೆಗೆ ಕಾಯದಂತೆ ಮುಂದುವರಿಯಬೇಕು; ಅದರಂತೆ ನಡೆದಿದ್ದೇವೆ. ಹಲಕೆಲವು ರಾಜ್ಯಗಳ ಪ್ರತಿನಿಧಿಗಳು ಇಲ್ಲಿಗೆ ಆಗಮಿಸಿರುವುದು ಸಂತಸದ ಬೆಳವಣಿಗೆ. ಮತ್ತಷ್ಟು ಪ್ರತಿನಿಧಿಗಳು

ಬರುವರೆಂದು ನಂಬುತ್ತೇವೆ. ಈ ಸಮಿತಿಯ ವರದಿಗೆ ಅನುಸಮರ್ಥನೆ ಅಗತ್ಯವಿಲ್ಲವೆಂದು ಅಂದುಕೊಂಡಿದ್ದೇವೆ. ವರದಿ ನಿಮ್ಮ ಮುಂದಿದೆ. ನಾವು ಕೈಗೊಂಡಿರುವ ಕ್ರಮ ಏನೇ ಆಗಿರಲಿ, ಅದರ ಬಗ್ಗೆ ತಮ್ಮ ಅಸಮ್ಮತಿ ಇದ್ದರೆ ತಿಳಿಸಬಹುದು. ಒಪ್ಪುವುದಾದರೆ ತಮ್ಮ ನಿರ್ದೇಶನವನ್ನು ನೀಡಬಹುದು.

ನಾನು ಮಂಡಿಸಿರುವ ನಿಲುವಳಿ ತಮ್ಮ ಅಂಗೀಕಾರಕ್ಕೆ ಕಾಯುತ್ತಿದೆ. ಸ್ಥಾನಗಳ ಹಂಚಿಕೆ ವಿವರಕ್ಕೆ ನಾನು ಹೋಗುತ್ತಿಲ್ಲ. ರಾಜ್ಯಗಳ ಪ್ರತಿನಿಧಿಗಳ ಆಯ್ಕೆಗೂ ಅದರ ರೀತಿನೀತಿಗೂ ನಾನು ಹೋಗುತ್ತಿಲ್ಲ. ಅದೊಂದು ಹೊಂದಾಣಿಕೆಯ ವಿಷಯವಾಗಿತ್ತು. ರಾಜ್ಯಪ್ರತಿನಿಧಿಗಳನ್ನು ಆಯಾ ಪ್ರದೇಶಗಳಿಗೆ ಬಿಟ್ಟಿದ್ದು ಎಂಬುದು ನನ್ನ ಮತ್ತು ನನ್ನ ಸಹೋದ್ಯೋಗಿಗಳ ಇಚ್ಛೆಯಾಗಿತ್ತು. ಏಕೆಂದರೆ ಅದುವೆ ಸರಿಯಾದ ಮಾರ್ಗ ಭಾಗಶಃ ಆ ಪ್ರತಿನಿಧಿಗಳು ಸಭೆಯಲ್ಲಿರುವ ಇತರ ಸದಸ್ಯರೊಡನೆ ಸಮನ್ವಯಗೊಳ್ಳಲೆಂಬ ಕಾರಣಕ್ಕಾಗಿಯೂ ಕೂಡ, ನಾವು ಆ ರೀತಿ ಭಾವಿಸಿದ್ದೆವು. ರಾಜ್ಯ ಸರ್ಕಾರಗಳು ಈ ಸಭೆಗೆ ವಾಸ್ತವಿಕ ಸ್ವರೂಪ ತರಲೋಸುಗ ತಾವೂ ಭಾಗಿಯಾಗಲೆಂಬುದು ನನ್ನ ಇನ್ನೊಂದು ಬಯಕೆ. ಸರ್ಕಾರವೇ ಸಾರ್ವಜನಿಕರ ಪ್ರತಿನಿಧಿಯಾಗಿ ಈ ಸಭೆಯಲ್ಲಿ ಭಾಗವಹಿಸುವುದೇ ಸೂಕ್ತ ಕ್ರಮ. ಆದರೆ ವಸ್ತುಸ್ಥಿತಿಯನ್ನು ನಾವು ಹೇಗಿದೆಯೋ ಹಾಗೆಯೇ ಸ್ವೀಕರಿಸಬೇಕಾಗುತ್ತದೆ. ಸಾಧಾರಣವಾಗಿ, ಪ್ರಜಾಪ್ರಭುತ್ವ ನೀತಿಗನುಗುಣವಾಗಿ ರಾಜ್ಯ ಸರ್ಕಾರಗಳು. ಕೆಲವೆಡೆ, ಜನತೆಯನ್ನು ಭಾಗಶಃ ಪ್ರತಿನಿಧಿಸುತ್ತವೆ. ಅದು ಹೇಗೆ ಇರಲಿ, ರಾಜ್ಯ ಸರ್ಕಾರಗಳೇ ಯಥಾಸ್ಥಿತಿಯಲ್ಲಿ ಪ್ರತಿನಿಧಿಸಲ್ಪಡಬೇಕಾದುದು ವಿಹಿತ. ವಾಸ್ತವವಾಗಿ ಅಧಿಕ ಸಂಖ್ಯೆಯಲ್ಲಿ ಜನತೆ ಆರಿಸಿದ ಪ್ರತಿನಿಧಿಗಳೇ ಇರಬೇಕೆಂಬುದು ನಮ್ಮ ಇಚ್ಛೆಯಾಗಿತ್ತು. ಅಂತಿಮವಾಗಿ ವಿಧಾನಸಭೆಗಳು ಅಸ್ತಿತ್ವದಲ್ಲಿರುವೆಡೆ ಶೇಕಡ ೫೦ಕ್ಕಿಂತ ಕಡಿಮೆ ಇಲ್ಲದಂತೆ, ಚುನಾಯಿತ ಪ್ರತಿನಿಧಿಗಳು ಆರಿಸಿದ ವ್ಯಕ್ತಿಗಳು, ಮತ್ತು ಇತರೆಡೆ ಬೇರೆ ವಿಧಾನಗಳಿಂದ ಆರಿಸಲ್ಪಟ್ಟವರು ಸಭೆಗೆ ಪ್ರತಿನಿಧಿಗಳಾಗಿ ಸೇರತಕ್ಕದ್ದೆಂದು ಸುದೀರ್ಘ ಚರ್ಚೆಯ ನಂತರ ನಿರ್ಧರಿಸಲಾಯಿತು. ಈ ಅನುಪಾತದ ವಿಷಯದಲ್ಲಿ ನಾವು ಹೊಂದಾಣಿಕೆ ಮಾಡಿಕೊಂಡೆವು. ಆದರೆ ಈ ಅನುಪಾತ ಹೆಚ್ಚಿರಬೇಕೆಂಬುದು ನಮ್ಮ ಬಯಕೆಯಾಗಿತ್ತು. ಕೆಲವು ರಾಜ್ಯಗಳು, ಇದೇ ಹೆಚ್ಚು ಎಂಬಂತೆ ವರ್ತಿಸಿದ್ದುಂಟು. ಹೊಂದಾಣಿಕೆ, ಸರ್ವಪಕ್ಷ ಸಮ್ಮತವಾದುದೆಂದು ತಿಳಿಸಲು ಬಯಸುತ್ತೇನೆ. ಈ ಸಭೆಯ ಮಟ್ಟಿಗೆ ಹೇಳುವುದಾದರೆ ಈ ನಿರ್ಣಯ ಸಮರ್ಪಕವಾದ ಫಲಿತಾಂಶ ತಂದುಕೊಡುತ್ತದೆ ಎಂದುಕೊಂಡಿದ್ದೇನೆ. ನಾನು ಸದನದ ಅನುಮೋದನೆಗೆ ನಿಲುವಳಿಯನ್ನು ಮಂಡಿಸುತ್ತಿದ್ದೇನೆ.

**ಸನ್ಮಾನ್ಯ ಅಧ್ಯಕ್ಷರು** : ನಿರ್ಣಯ ಹೀಗಿದೆ.

"ಸಂವಿಧಾನ ರಚನಾ ಸಭೆ, ರಾಜ್ಯ ಸಮಿತಿಯ ವರದಿಯನ್ನು ಪರಿಶೀಲಿಸಿ ದಾಖಲಿಸುವಂತೆ ನಿರ್ಣಯಿಸುತ್ತದೆ."

"ಈಗಾಗಲೇ ಆಯ್ಕೆಗೊಂಡಿರುವ ಸದಸ್ಯರನ್ನು ಸಭೆ ಸ್ವಾಗತಿಸುತ್ತದೆ ಮತ್ತು ತಮ್ಮ ಪ್ರತಿನಿಧಿಗಳನ್ನು ಇನ್ನೂ ಆಯ್ಕೆ ಮಾಡದ ರಾಜ್ಯಗಳು ಕೂಡಲೆ ಅಂಗೀಕೃತ ಪ್ರಕ್ರಿಯಾನುಸಾರ, ಪ್ರತಿನಿಧಿಗಳನ್ನು ಆಯ್ಕೆ ಮಾಡುವ ವಿಶ್ವಾಸ ಹೊಂದಿದೆ."

ಇದರ ಬಗ್ಗೆ, ಯಾರಾದರೂ ಸದಸ್ಯರು ಮಾತನಾಡುವುದಿದ್ದರೆ ಮುಂದೆ ಬರಬಹುದು.

(ಈ ಹಂತದಲ್ಲಿ ಕೈಲಾಸನಾಥ ಕಟ್ಟು ಅವರು ವೇದಿಕೆಯತ್ತ ನಡೆದರು)

**ಮಿ। ಸೋಮನಾಥ ಲಾಹಿರಿ** (ಬಂಗಾಳ : ಸಾಮಾನ್ಯ) : ಒಂದು ಮಾಹಿತಿಯ ಅಂಶಕ್ಕಾಗಿ ಪ್ರಶ್ನೆ. ಇಲ್ಲಿಗೆ ಆಗಮಿಸಿರುವ ರಾಜ್ಯ ಪ್ರತಿನಿಧಿಗಳಲ್ಲಿ ಎಷ್ಟು ಮಂದಿ ಚುನಾಯಿತರು, ಇನ್ನೆಷ್ಟು ಮಂದಿ ಆಯ್ಕೆಗೊಂಡವರು?

ಸನ್ಮಾನ್ಯ ಅಧ್ಯಕ್ಷರು: ಕಾರ್ಯದರ್ಶಿಗಳು ತಮಗೆ ಮಾಹಿತಿ ನೀಡುವರು. ಈ ನಡುವೆ ಡಾ. ಕೈಲಾಸನಾಥ ಕಟ್ಟು ಅವರು ಮಾತನಾಡುವರು.

**ಗೌರವಾನ್ವಿತ ಡಾ. ಕೈಲಾಸನಾಥ ಕಟ್ಟು** (ಉತ್ತರ ಪ್ರದೇಶ) : ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ನಿಲುವಳಿಯ ಬಗ್ಗೆ

ಕೆಲನಿಮಿಷಗಳು, ನಿಮ್ಮನ್ನು ಉದ್ದೇಶಿಸಿ ಮಾತನಾಡಲು ಒಂದೇ ಕಾರಣ. ಮಧ್ಯ ಭಾರತದ ರಾಜ್ಯವೊಂದರೊಡನೆ ನನ್ನ ಸಂಬಂಧವಿದೆ. ದತ್ತಕದಿಂದ ಸಂಯುಕ್ತ ಪ್ರಾಂತ್ಯದಲ್ಲಿ ನನ್ನ ವಾಸ್ತವ್ಯ. ಆದುದರಿಂದ ನಿಮ್ಮ ಪ್ರಯತ್ನಗಳಲ್ಲಿ ನನಗೆ ತೀವ್ರ ಆಸಕ್ತಿ ಇದೆ. ಸಂಧಾನ ಸಮಿತಿಯ ಸಾಧನೆಯಿಂದ ದೊರೆತ ಸಾಫಲ್ಯಕ್ಕಾಗಿ ನಾನು ಅಭಿನಂದನೆ ಸಲ್ಲಿಸುತ್ತಿದ್ದೇನೆ.

ನಮ್ಮ ರಾಜ್ಯಗಳಲ್ಲಿ ಅಪಾರ ವೈವಿಧ್ಯವನ್ನು ಕಾಣಬಹುದಾಗಿದೆ. ಅಂತಹ ನೂರಾರು ರಾಜ್ಯಗಳಿವೆ. ಕೆಲವು ರಾಜ್ಯಗಳು ಅವುಗಳ ಜನಾಂಗದಷ್ಟೆ ಪುರಾತನ ಇತಿಹಾಸ ಹೊಂದಿವೆ. ಇನ್ನು ಕೆಲವು, ಇತ್ತೀಚಿನವು. ಅವಕ್ಕೆ ಕೇವಲ ಒಂದು ಶತಮಾನದ ಇತಿಹಾಸವಿದೆ. ಒಂದಷ್ಟು ಸಂಸ್ಕೃತಿ, ಒಂದಿಷ್ಟು ನೈತಿಕ ಸದ್ವರ್ತನೆಯನ್ನು ರೂಢಿಸಿಕೊಂಡಿವೆ. ಇದರ ಬಗ್ಗೆ ಹೆಚ್ಚಿನ ವಿವರಕ್ಕೆ ಹೋಗುವುದಿಲ್ಲ. ಪಂಡಿತ್ ಜವಾಹರ್‌ಲಾಲ್ ನೆಹರು ಅವರು, ಭಾರತ ಒಕ್ಕೂಟದ ಗುಣಾತಿಶಯಗಳನ್ನು ಸಮರ್ಥವಾಗಿ ನಿಮ್ಮ ಮುಂದಿಟ್ಟಿದ್ದಾರೆ. ಇದರಲ್ಲಿ ರಾಜ್ಯಗಳ ಮತ್ತು ಅವುಗಳ ಪ್ರಜೆಗಳ ಒಳಿತಿಗಾಗಿ ಒಕ್ಕೂಟಕ್ಕೆ ಸೇರುವುದು ವಿಹಿತ ಎಂಬುದರಲ್ಲಿ ನನಗೆ ಸಂದೇಹವಿಲ್ಲ. ಭಾರತದ ಇತಿಹಾಸ ನಮಗೊಂದು ಪಾಠ ಕಲಿಸುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಈ ಮಹಾನ್ ರಾಷ್ಟ್ರದಲ್ಲಿ ಇಂತಹುದೊಂದು ಒಕ್ಕೂಟ ಅನಿವಾರ್ಯ. ಕೆಲವು ಪ್ರಾಂತ್ಯಗಳು, ಮತ್ತೆ ಕೆಲವು ರಾಜ್ಯಗಳು ತಮ್ಮನ್ನು ಸರ್ವತಂತ್ರ ಸ್ವತಂತ್ರ ರಾಜ್ಯಗಳೆಂದು ಭಾವಿಸಿವೆ. ಅಂತೆಯೇ ಸರಹದ್ದಿನ ಪ್ರದೇಶಗಳಿಗೂ ಆ ಭಾವನೆ ಇದೆ. ಅವಕ್ಕೆ ಇತಿಹಾಸ, ಪಲ್ಲಟಗೊಳ್ಳುತ್ತಿರುವುದರ ಅರಿವೇ ಇಲ್ಲ. ಇಂದು ನಾವು ಹೇಗೇ ಇರಲಿ, ಏನೇ ಮಾಡಲಿ, ಏನೇ ಹೇಳಲಿ, ಮುಂದಿನ ಐವತ್ತು ವರುಷಗಳಲ್ಲಿ ನಡೆಯಲಿರುವ ಘಟನೆಗಳು ಒಂದು ಏಕೀಕೃತ ಸರ್ಕಾರವನ್ನು ಎಂದರೆ ಕೇಂದ್ರದ ಏಕೈಕ ಸರ್ಕಾರವನ್ನು ತರುವಂತೆ ಜನರನ್ನು ಒತ್ತಾಯಪಡಿಸುವುದರಲ್ಲಿ ನನಗೆ ಏಳ್ಳಷ್ಟೂ ಸಂಶಯವಿಲ್ಲ. ಆದುದರಿಂದ ಎಲ್ಲ ರಾಜ್ಯಗಳ ಎಲ್ಲ ಅರಸರ ಒಳಿತಿಗಾಗಿ ಅವರೆಲ್ಲರೂ ಒಂದಾಗಿ ಮುಖ್ಯ ವಾಹಿನಿಯಲ್ಲಿ ತೊಡಗಬೇಕು. ನಮ್ಮ ಪ್ರಭುಗಳು ತಮಗಿದೆಯೆಂಬ ಬಲವನ್ನು ನೆಚ್ಚದಿರಲಿ.

ಭ್ರಮೆಯನ್ನು ಬಿಡಲಿ. ಬದಲಿಗೆ ತಮ್ಮ ಪ್ರಜೆಗಳ ಪ್ರೀತಿಯಲ್ಲಿ, ವಿಶ್ವಾಸದಲ್ಲಿ, ಒಳಿತನ್ನು ಕಂಡುಕೊಳ್ಳಲಿ. ಅದರಿಂದಲೆ ಅವರ ಘನತೆ, ಅವರ ಅಸ್ತಿತ್ವದ ಉಳಿವು. ನಂಬಿದರೆ ಉಳಿದಾರು. ಇಲ್ಲವಾದರೆ ಅವರ ರಾಜ್ಯಗಳು ನಾಮಾವಶೇಷವಾದಾವು. ಅದಕ್ಕಾಗಿ ಆ ರಾಜ್ಯಗಳ ಪ್ರಜೆಗಳಿಗಾಗಿ, ಭಾರತದ ಇತರ ಪ್ರದೇಶದ ಜನರಿಗಾಗಲಿ ಖೇದವಿಲ್ಲ. ಇಷ್ಟು ಹೇಳಿ, ನಿರ್ಣಯವನ್ನು ಸಭೆಯ ಅನುಮೋದನೆಗೆ ಬಿಡುತ್ತೇವೆ. ಸದನದ ಎಲ್ಲ ಸದಸ್ಯರ ಸಮಕ್ಷಮದಲ್ಲಿ ನಿವೇದಿಸಿದಂತೆ ಇಷ್ಟರಲ್ಲೆ, ಎಲ್ಲ ರಾಜ್ಯಗಳೂ ಒಗ್ಗೂಡಿ ಸಭೆಯನ್ನು ಸೇರುವಂತೆ ಕರೆಕೊಡುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು** : ನಿರ್ಣಯಕ್ಕೆ ತಿದ್ದುಪಡಿಯ ನೋಟೀಸನ್ನು ಯಾವಾಗ ನೀಡಬೇಕೆಂದು ಮಿ| ಲಾಹಿರಿ ತಿಳಿಯಬಯಸುತ್ತಾರೆ. ಈ ನಿರ್ಣಯದ ನೋಟೀಸನ್ನು ಕಳೆದ ರಾತ್ರಿಯಷ್ಟೇ ತಾವು ಸ್ವೀಕರಿಸಿದುದಾಗಿ ಅವರ ಆಕ್ಷೇಪ. ಅವರಿಗೆ ನೋಟೀಸ್ ನೀಡಲು ಕಾಲ ಮೀರಿದೆ ಎಂದು ತಿಳಿಸಲು ವಿಷಾದಿಸುತ್ತೇನೆ. ಈಗ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

ನಿರ್ಣಯ ಹೀಗಿದೆ:

"ಸಂವಿಧಾನ ರಚನಾ ಸಭೆ ನಿರ್ಣಯದ ಪರಿಶೀಲನೆ ದಾಖಲಿಸುವಂತೆ ಪ್ರಸ್ತಾವಿಸುತ್ತದೆ."

"ಈಗಾಗಲೇ ಸಭೆಗೆ ಆಯ್ಕೆಗೊಂಡಿರುವವರನ್ನು ಸಭೆ ಸ್ವಾಗತಿಸುತ್ತದೆ. ಮತ್ತು ತಮ್ಮ ಪ್ರತಿನಿಧಿಗಳನ್ನು ಇನ್ನೂ ಆಯ್ಕೆ ಮಾಡದ, ರಾಜ್ಯಗಳು ಕೂಡಲೇ ಅಂಗೀಕೃತ ಪ್ರಕ್ರಿಯಾನುಸಾರ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ವಿಶ್ವಾಸ ಹೊಂದಿದೆ."

ನಿರ್ಣಯ ಅಂಗೀಕೃತವಾಯಿತು.

**ಸನ್ಮಾನ್ಯ ಅಧ್ಯಕ್ಷರು :** ಮಾನ್ಯ ಲಾಹಿರಿ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಲು ಬಯಸುತ್ತೇನೆ. ಆಯ್ಕೆಗೊಂಡ ಹದಿನಾರು ಸದಸ್ಯರು ಸಭೆಯಲ್ಲಿದ್ದೂ ರಾಜ್ಯವನ್ನು ಪ್ರತಿನಿಧಿಸುತ್ತಿದ್ದಾರೆ. ಅವರಲ್ಲಿ ಐವರು ನಾಮ ನಿರ್ದೇಶಿತರು. ಮತ್ತು ೧೧ ಮಂದಿ ಚುನಾಯಿತರು.

## ಸಂಚಾಲಕ ಸಮಿತಿಯ ಹೆಚ್ಚುವರಿ ಸದಸ್ಯರ ಚುನಾವಣೆ

**ಶ್ರೀಮತಿ ಜಿ. ದುರ್ಗಾಬಾಯಿ** (ಮದರಾಸು : ಸಾಮಾನ್ಯ) : ಮಾನ್ಯರೆ, ನನ್ನ ಹೆಸರಿನಲ್ಲಿರುವ ನಿಲುವಳಿಯನ್ನು ಮಂಡಿಸಲು ನಾನು ಹೆಮ್ಮೆಪಡುತ್ತೇನೆ. ಅದಕ್ಕೆ ಮುನ್ನ ಇಂದಿನ ಸಮಾವೇಶದಲ್ಲಿ ಭಾರತೀಯ ರಾಜ್ಯಗಳ ಪ್ರತಿನಿಧಿಗಳ ಉಪಸ್ಥಿತಿ ನನಗೆ ಅತೀವ ಸಂತಸ ತರುತ್ತಿದೆಯೆಂದು ತಿಳಿಸಲು ಬಯಸುತ್ತೇವೆ. ನಮ್ಮ ಕಾರ್ಯದಲ್ಲಿ ಸಹಕಾರ ನೀಡಿದುದಕ್ಕಾಗಿ ನಮ್ಮೊಡನೆ ಸೇರಿರುವ ಎಲ್ಲ ರಾಜ್ಯಗಳಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ. ತಮ್ಮ ಅನುಮತಿ ಬೇಡಿ ನನ್ನ ನಿರ್ಣಯವನ್ನು ಮಂಡಿಸುತ್ತೇನೆ.

"ಸಂವಿಧಾನ ರಚನಾ ಸಭೆಯ ೪೦ನೇ ನಿಯಮದ ೨ನೇ ಉಪನಿಯಮದ ಅನುಸಾರ ಸಂಚಾಲಕ ಸಮಿತಿಗೆ ಭಾರತೀಯ ರಾಜ್ಯಗಳಿಂದ ಈರ್ವರು ಪ್ರತಿನಿಧಿಗಳನ್ನು ಏಕೈಕ ವರ್ಗಾವಣೆಯ ಮತದ ವಿಧಾನದಿಂದ ಅನುಮತಾಧಾರಿತ ಪ್ರಾತಿನಿಧ್ಯದ ತತ್ತ್ವದ ಮೇಲೆ ಹೆಚ್ಚುವರಿಯಾಗಿ ಚುನಾಯಿಸಲು ಈ ಸಭೆ ಕ್ರಮ ಕೈಗೊಳ್ಳುವಂತೆ ನಿರ್ಣಯಿಸಲಾಗಿದೆ."

ಮಾನ್ಯರೆ, ಸಂಚಾಲಕ ಸಮಿತಿಗೆ ಸದಸ್ಯರನ್ನು ಆಯ್ಕೆ ಮಾಡಲು ಸಂವಿಧಾನ ರಚನಾ ಸಭೆಯ ೪೦ನೇ ನಿಯಮದ ೨ನೇ ಉಪನಿಯಮ ಕೆಳಕಂಡಂತೆ ಪ್ರಕ್ರಿಯೆಯನ್ನು ವಿಶದಪಡಿಸುತ್ತದೆ. ಸಭೆಯು ಕಾಲಕಾಲಕ್ಕೆ ತನಗೆ ಸೂಕ್ತವೆನಿಸುವಂತೆ ೮ ಸದಸ್ಯರನ್ನು ಚುನಾಯಿಸಬಹುದು ಅವರಲ್ಲಿ ೮ ಮಂದಿ, ಭಾರತೀಯ ರಾಜ್ಯಗಳ ಪ್ರತಿನಿಧಿಗಳಿಗಾಗಿ ಮೀಸಲಿಟ್ಟ ಸ್ಥಾನಗಳಿಗೆ ಆಯ್ಕೆಗೊಳ್ಳಬೇಕು.

೪೦ನೇ ನಿಯಮದ ಉಪನಿಯಮದಡಿ ಹೀಗೆ ತಿಳಿಸಿದೆ:–

"ಸಭೆಯ ಅವಧಿಗಾಗಿ ಒಂದು ಸಂಚಾಲಕ ಸಮಿತಿಯನ್ನು ರಚಿಸಬೇಕು. ಅದರ ಸದಸ್ಯರ ಸಂಖ್ಯೆ ೧೧ ಇರಬೇಕು (ಅಧ್ಯಕ್ಷರಲ್ಲದೆ) ಸದಸ್ಯರನ್ನು ಏಕೈಕ ವರ್ಗಾವಣೀಯ ಮತದ ವಿಧಾನದಲ್ಲಿ ಅನುಪಾತಾಧಾರಿತ ಪ್ರಾತಿನಿಧ್ಯದ ಆಧಾರದ ಮೇಲೆ, ಸಭೆ, ಚುನಾಯಿಸಬೇಕು."

ಮಾನ್ಯರೆ, ಈ ಸಂದರ್ಭದಲ್ಲಿ ತಮ್ಮ ಅನುಮತಿ ಕೋರಿ ತಿಳಿಸುವುದೇನೆಂದರೆ ಈ ನಿಯಮಗಳನುಸಾರ ಜನವರಿ ೨೦ರ ಪ್ರಾರಂಭದಲ್ಲಿ ೧೧ ಸದಸ್ಯರು ಚುನಾಯಿತರಾದರು. ಸಮಿತಿಯು ಇವರನ್ನೊಳಗೊಂಡು ಕಾರ್ಯನಿರ್ವಹಿಸುತ್ತಿದೆ. ೨ನೇ ಉಪನಿಯಮಾನುಸಾರ ಕಾಲಕಾಲಕ್ಕೆ ೮ ಸದಸ್ಯರನ್ನು ಸಮಿತಿಯ ಹೆಚ್ಚುವರಿ ಸದಸ್ಯರನ್ನಾಗಿ ಆಯ್ಕೆ ಮಾಡಬೇಕು. ಇವರಲ್ಲಿ ನಾಲ್ವರು ಭಾರತೀಯ ರಾಜ್ಯಗಳನ್ನು ಪ್ರತಿನಿಧಿಸುವವರಿಗಾಗಿ ಮೀಸಲಿಟ್ಟ ಸ್ಥಾನಗಳಿಗೆ ಆಯ್ಕೆಗೊಂಡವರು. ಈಗ ಕೇವಲ ಇಬ್ಬರನ್ನು ಆಯ್ಕೆ ಮಾಡಿ, ಮಿಕ್ಕ ೨ ಸ್ಥಾನಗಳನ್ನು ತುಂಬಲು ಚುನಾವಣೆಯನ್ನು ಮುಂದಿನ ದಿನಾಂಕಕ್ಕೆ ನಡೆಸುವುದು ಉಚಿತವೆಂದು ಭಾವಿಸಲಾಗಿದೆ. ಎಲ್ಲ ನಾಲ್ವರೂ ಈಗಲೇ ಚುನಾಯಿತರಾಗಿದ್ದರೆ, ನಾವು ಸಂತಸಪಡುತ್ತಿದ್ದವೇನೋ. ಆದರೆ, ಈಗ ಇಬ್ಬರ ಆಯ್ಕೆ ಸೂಕ್ತವೆಂದು ನಾವು ಭಾವಿಸಿದೆವು. ಮುಂದಿನ ದಿನಾಂಕದಂದು ಇನ್ನಿಬ್ಬರನ್ನು ಚುನಾಯಿಸುವುದು ಸೂಕ್ತವೆನಿಸಿತು. ಆ ದಿನ, ಎಲ್ಲ ರಾಜ್ಯಗಳ ಪ್ರತಿನಿಧಿಗಳೂ ಸಭೆಯಲ್ಲಿ ಪಾಲ್ಗೊಳ್ಳುವ ಸೌಭಾಗ್ಯ ನಮ್ಮದಾಗುತ್ತದೆ. ಹೈದರಾಬಾದ್, ತಿರುವಾಂಕೂರು, ಮೈಸೂರು ಮತ್ತು ಇನ್ನು ಕೆಲವು ರಾಜ್ಯಗಳು ಖಚಿತ ನಿರ್ಧಾರ ಕೈಗೊಂಡು ನಮ್ಮೊಡಗೂಡಿ ಸಭೆಯಲ್ಲಿ ಭಾಗವಹಿಸುತ್ತವೆ ಎಂಬುದು ನಮ್ಮ ನಿಚ್ಚಳ ನಂಬುಗೆಯಾಗಿತ್ತು. ಆದರೆ ಅವರ ಅನುಪಸ್ಥಿತಿ ನನಗೆ ನಿರಾಶೆ ತಂದಿತು; ಆ ಬಗ್ಗೆ ಖೇದಗೊಂಡಿದ್ದೇನೆ. ಆದರೆ, ಅವರೂ ಸಹ ಬರೋಡ, ಬಿಕಾನೇರ್, ರೇವಾ, ಗ್ವಾಲಿಯರ್, ಕೊಚ್ಚಿ, ಉದಯಪುರ್, ಜೋಧ್‌ಪುರ ಮತ್ತಿತರ ರಾಜ್ಯಗಳು ಹಾಕಿಕೊಟ್ಟ ಆದರ್ಶವನ್ನು

ಪಾಲಿಸಿ. ಈ ಮಹಾನ್ ದೇಶಕ್ಕೊಂದು ಸಂವಿಧಾನ ರಚಿಸಲು, ನೆರವಾಗುವಂತೆ ಆ ರಾಜ್ಯಗಳೂ ಕೈಜೋಡಿಸುವ ಕಾಲ ಸನ್ನಿಹಿತ. ಈ ಸಮಿತಿಗೆ ಚುನಾಯಿತರಾಗಲಿರುವ ಸದಸ್ಯರಿಗೆ ನನ್ನ ಹಾರ್ದಿಕ ಸುಸ್ವಾಗತ. ಅವರು ಈ ಸಮಿತಿಯಲ್ಲಿ ಕಾರ್ಯಪ್ರವೃತ್ತರಾಗಿ ತಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ಮಾರ್ಗದರ್ಶನವನ್ನು ನೀಡಲಿದ್ದಾರೆ. ಸಭೆಯ ಅನುಮೋದನೆಗಾಗಿ ಈ ನಿಲುವಳಿಯನ್ನು ಮಂಡಿಸುತ್ತಿದ್ದೇನೆ.

**ಸನ್ಮಾನ್ಯ ಅಧ್ಯಕ್ಷರು** : ನಿರ್ಣಯವನ್ನು ಮಂಡಿಸಲಾಗಿದೆ.

ಈ ಸಭೆಯು ಸಂವಿಧಾನ ರಚನಾ ಸಭೆಯ (೪೦)ನೇ ನಿಯಮದ ೨ನೇ ಉಪನಿಯಮದ ಅಡಿಯಲ್ಲಿ, ಏಕೈಕ ವರ್ಗಾವಣೀಯ ಮತದ ನಿಧಾನದಿಂದ ಅನುಪಾತಾಧಾರಿತ ಪ್ರಾತಿನಿಧ್ಯದ ತತ್ವದ ಮೇಲೆ, ಚಾಲನೆ ಸಮಿತಿಗೆ ಈರ್ವರು ಹೆಚ್ಚುವರಿ ಸದಸ್ಯರನ್ನು ಚುನಾಯಿಸಲು ಕ್ರಮಕೈಗೊಳ್ಳುವುದಾಗಿ ನಿರ್ಣಯಿಸಿದೆ."

**ಮಾನ್ಯ ಎಚ್.ವಿ. ಕಾಮತ್** (ಸಿ.ಪಿ. ಬೇರಾರ್ : ಸಾಮಾನ್ಯ) ; ಮಾನ್ಯರೆ, ೪೦ನೇ ನಿಯಮದ ೨ನೇ ಉಪನಿಯಮಾನುಸಾರ ನಾಲ್ಕು ಸ್ಥಾನಗಳನ್ನೂ, ಭಾರತೀಯ ರಾಜ್ಯಗಳ ಪ್ರತಿನಿಧಿಗಳಿಗಾಗಿ ಮೀಸಲಿಟ್ಟಿದೆ. ಇಂದು ಕೇವಲ ೧೬ ಪ್ರತಿನಿಧಿಗಳು ಹಾಜರಿದ್ದು, ಇನ್ನೂ ೭೭೩ ಗೈರುಹಾಜರೆಂದು ಆವು ಅಪ್ಪಣೆ ಕೊಡಿಸಿದ್ದೀರಿ. ಗೈರುಹಾಜರಾದ ಸದಸ್ಯರಿಗೆ ನ್ಯಾಯ ದೊರಕುವಂತೆ, ಇಂದು ಕೇವಲ ಒಂದು ಸ್ಥಾನವನ್ನು ಮಾತ್ರ ತುಂಬಿ ಮಿಕ್ಕ ಮೂರು ಸ್ಥಾನಗಳನ್ನು ನಂತರ ತುಂಬಬಹುದೆಂದು ನನ್ನ ಸಲಹೆ.

ಸನ್ಮಾನ್ಯ ಅಧ್ಯಕ್ಷರು: ಇಂದು ಎರಡು ಸ್ಥಾನಗಳಿಗೆ ಬದಲಾಗಿ ಒಂದು ಸ್ಥಾನಕ್ಕೆ ಚುನಾವಣೆ ನಡೆಸುವಂತೆ ಮಾನ್ಯ ಕಾಮತ್ ತಿದ್ದುಪಡಿ ಸೂಚಿಸಿದ್ದಾರೆ.

**ಗೌರವಾನ್ವಿತ ಪಂಡಿತ್ ಜವಹರ್‌ಲಾಲ್ ನೆಹರು** : ಮಾನ್ಯರೆ, ಸಂಚಾಲಕ ಸಮಿತಿ ದಿನದಿನವೂ ಕಾರ್ಯ ನಿರ್ವಹಿಸಬೇಕಾಗುತ್ತದೆ. ಅನುಪಸ್ಥಿತರಿಗಾಗಿ ಸ್ಥಾನಗಳನ್ನು ಖಾಲಿಬಿಟ್ಟರೆ ಅದು ಅವರಿಗೆ, ಸದನಕ್ಕೆ ಸಂಚಾಲಕ ಸಮಿತಿಗೆ ಯಾವುದಕ್ಕೂ ಒಳ್ಳೆಯದಲ್ಲ. ಸಂಚಾಲಕ ಸಮಿತಿ ಅತ್ಯುನ್ನತ ತತ್ವದ ಮೇಲೆ ಕೆಲಸ ಮಾಡುತ್ತಿಲ್ಲ. ಆದರೆ ಅವು ಬಹುಮುಖ್ಯವಾದ ಕೆಲಸ. ಸದನದ ಕಾರ್ಯಕಲಾಪಗಳ ಮೇಲೆ ಅದು ಪರಿಣಾಮ ಬೀರುತ್ತದೆ. ನನ್ನ ಅಭಿಪ್ರಾಯದಂತೆ, ಬಾರದಿರುವವರಿಗಾಗಿ ಸ್ಥಾನಗಳನ್ನು ಕಾಯ್ದಿರಿಸಿರುವುದು ನ್ಯಾಯವಲ್ಲ. ನಾವು ಕಾಯುತ್ತಲೆ ಹೋಗುವುದು ಸರಿಯಲ್ಲ. ನಾನು, ಅವರಿಗೆ ಘಾಸಿಯಾಗುವುದೇನನ್ನೂ ಮಾಡಲು ಬಯಸುವುದಿಲ್ಲವಾದ ಕಾರಣ, ಅವರಿಗೆ ಸಂಬಂಧಿಸಿದ ಮುಖ್ಯ ವಿಷಯವೇನಾದರೂ ಇದ್ದರೆ ನಂತರ ಅದನ್ನು ಮತ್ತೆ ಪ್ರಸ್ತಾವಿಸಬಹುದು. ಈಗ ನಾವು ಅವರನ್ನು ಬರಮಾಡಿಕೊಳ್ಳುವ ತೊಂದರೆ ತೆಗೆದುಕೊಂಡಿದ್ದೇವೆ. ಹಾಗೆಯೇ ಮಾಡಬೇಕಿದೆ. ನಂತರ ಯಾವುದೇ ಮುಖ್ಯ ವಿಷಯವಿದ್ದರೆ, ಅದರ ಪುನಃ ಪರಿಶೀಲನೆ ಸದನಕ್ಕೆ ಬಿಟ್ಟಿದ್ದು. ಪ್ರಸ್ತುತದಲ್ಲಿ ಸಭೆಯ ಕಾರ್ಯ ಕಲಾಪಗಳಿಗೆ ಭಾಗವಹಿಸಲು ಬಂದಿರುವವರಿಗೆ ಪೂರ್ಣ ಅವಕಾಶ ಕಲ್ಪಿಸಿಕೊಡಬೇಕು.

ಮಾನ್ಯ ಎಚ್.ವಿ. ಕಾಮತ್ ಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸುವ ಆಶ್ವಾಸನೆಯನ್ನು ಪಂಡಿತ್ ಜವಹರ್‌ಲಾಲ್ ನೆಹರು ಅವರು ನೀಡಿರುವುದರಿಂದ, ನಾನು ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು** : ನಾನೀಗ ನಿರ್ಣಯವನ್ನು ಮತಕ್ಕೆ ಹಾಕುತ್ತೇನೆ.

ನಿರ್ಣಯ ಅಂಗೀಕೃತವಾಯಿತು.

**ಸನ್ಮಾನ್ಯ ಅಧ್ಯಕ್ಷರು** : ನಾಳೆ ಮಧ್ಯಾಹ್ನ ೨ ಘಂಟೆಯವರೆಗೆ ನಾಮಪತ್ರವನ್ನು ಸ್ವೀಕರಿಸಲಾಗುವುದು ಮತ್ತು ಚುನಾವಣೆ ನಡೆಯಬೇಕಿದ್ದರೆ. ೪ ರಿಂದ ೫ ಗಂಟೆಯವರೆಗೆ ೨೪ ನಂಬರಿನ ಕೋಣೆಯಲ್ಲಿ ನಡೆಯಲಿದೆ.

## ಕೇಂದ್ರೀಯ ವಿಷಯಗಳ ಸಮಿತಿಯ ವರದಿ

**ಸನ್ಮಾನ್ಯ ಅಧ್ಯಕ್ಷರು :** ೧೯೪೭ರ ಜನವರಿ ೨೫ನೇ ದಿನಾಂಕ ಸಂವಿಧಾನ ರಚನಾ ಸಭೆಯ ನಿಲುವಳಿಯಿಂದ ನೇಮಕಗೊಂಡ ಸಮಿತಿಯ ವರದಿಯನ್ನು ಪ್ರಸ್ತುತಪಡಿಸಲಾಗುವುದು. ಕೇಂದ್ರೀಯ ವಿಷಯಗಳ ವ್ಯಾಪ್ತಿಯನ್ನು ಪರಾಮರ್ಶಿಸುವುದು ಸಮಿತಿಯ ಉದ್ದೇಶ.

**ಮಾನ್ಯ ಎಚ್.ವಿ.ಕಾಮತ್ :** ಸರ್, ಇದು ಕೇವಲ ವರದಿಯ ಮಂಡನೆಯ ಅಥವಾ ನಿಲುವಳಿಯೆ? ಈ ಬಗ್ಗೆ ನೋಟೀಸು ಜಾರಿಯಾಗಿಲ್ಲ.

**ಸನ್ಮಾನ್ಯ ಅಧ್ಯಕ್ಷರು :** ಗೌರವಾನ್ವಿತ ಸದಸ್ಯರು, ಕಾದು ನೋಡಿದರೆ, ಅದೇನೆಂಬುದು ತಿಳಿಯುತ್ತದೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** (ಮದ್ರಾಸು : ಸಾಮಾನ್ಯ) : ಮಾನ್ಯರೆ, ನನ್ನದೇನಿದ್ದರೂ, ಕೇಂದ್ರೀಯ ವಿಷಯಗಳನ್ನು ಕುರಿತ ಸಮಿತಿಯ ವರದಿಯ ನೇರ ಭಾಷಣ ಇಂದು ವರದಿಯನ್ನು ಕುರಿತಂತೆ ಸದನದ ಮುಂದೆ ನಿರ್ಣಯವನ್ನು ಮಂಡಿಸುವ ಉದ್ದೇಶವಲ್ಲ. ಸಮಿತಿಯು ನೇಮಕಗೊಂಡದ್ದು ೨೫ನೇ ದಿನಾಂಕ ಜನವರಿಯಂದು; ಮೇ ೧೬ರ ಕ್ಯಾಬಿನೆಟ್ ಮಿಷನ್ ಹೇಳಿಕೆಯಂತೆ, ಕೇಂದ್ರಕ್ಕೆ ವಹಿಸಿಕೊಟ್ಟ ವಿಷಯಗಳ ಒಳಾಂಶ ಹಾಗೂ ವ್ಯಾಪ್ತಿಯನ್ನು ಪರಿಶೀಲಿಸುವ ಉದ್ದೇಶದಿಂದ ಸಮಿತಿಯು ರಚಿತವಾಯಿತು. ಆ ವಿಷಯಗಳಲ್ಲಿ ಪರಸ್ಪರ ಸಂಬಂಧವಿರುವ, ಒಳಾಂಶಗಳ ಪಟ್ಟಿ ತಯಾರಿಸುವುದು ಸಮಿತಿಯ ಹೊಣೆ. ಸಮಿತಿಯು ಹನ್ನೆರಡು ಸದಸ್ಯರನ್ನು ಒಳಗೊಂಡು ಕಾರ್ಯೋನ್ಮುಖವಾಯಿತು. ಅಧ್ಯಕ್ಷರಾದ ತಮಗೆ ಇನ್ನೂ ಹತ್ತು ಸದಸ್ಯರನ್ನು ನಾಮನಿರ್ದೇಶನ ಮಾಡುವ ಅಧಿಕಾರವನ್ನು ವಹಿಸಿಕೊಡಲಾಗಿತ್ತು. ಇದರ ಉದ್ದೇಶ ಮುಸ್ಲಿಂಲೀಗ್ ಸಭೆಗೆ ಬರುವಂತಾದರೆ, ಅದರ ಪ್ರತಿನಿಧಿಗಳಿಗೆ ಕೆಲಸ್ಥಾನಗಳನ್ನು ಮೀಸಲಿಡುವುದು. ನಂತರ ನಾವು ನಿರ್ದೇಶನ ಮುಖೇನ ತುಂಬುವುದು. ಮಿಕ್ಕವನ್ನು ಭಾರತೀಯ ರಾಜ್ಯಗಳಿಗೆ ಪ್ರತಿನಿಧಿಗಳಿಗೆ ಮೀಸಲಿಡುವುದು. ಈಗಿರುವಂತೆ, ಮುಸ್ಲಿಂಲೀಗ್ ಇದುವರೆಗೆ ಬಂದಿಲ್ಲ. ಈಗಷ್ಟೆ ಕೆಲ ಕ್ಷಣಗಳ ಹಿಂದೆ ಪಂಡಿತ್ ಜವಾಹರ್‌ಲಾಲ್ ನೆಹರು ಅವರು ತಿಳಿಸಿದಂತೆ ಭಾರತೀಯ ರಾಜ್ಯಗಳ ಪ್ರಾತಿನಿಧ್ಯ ಸಂಪೂರ್ಣವಾಗಿರಲು, ಸತತ ಪ್ರಯತ್ನ ಮಾಡಲಾಯಿತು. ಆದರೆ ಅದಾಗಲಿಲ್ಲ. ನಮ್ಮ ವ್ಯವಹಾರಗಳ, ನಂತರದ ಘಟ್ಟಗಳಲ್ಲಿ ಹೇಗೂ, ಭಾರತೀಯ ರಾಜ್ಯಗಳ ಈರ್ವರು ಗಣ್ಯರ ಸಹಕಾರ ದೊರೆತಿದೆ.

ಮಾನ್ಯರೆ, ವರದಿ ಕುರಿತಂತೆ ಭಾಷಣ ಮಾಡುವ ನೀರಸ ಕರ್ತವ್ಯವನ್ನು ನಾನು ಪೂರೈಸುತ್ತಿದ್ದೇನೆಂದು ಆಗಲೆ ಹೇಳಿದೆನಷ್ಟೆ. ನನ್ನ ಗೌರವಾನ್ವಿತ ಗೆಳೆಯರಾದ ಮಾನ್ಯ ಕಾಮತರು ಬಯಸಿದ ರೀತಿಯಲ್ಲಿ ಪೂರೈಸಲಾಗುತ್ತಿಲ್ಲ. ಇದರ ಪ್ರತಿಗಳು ಸದಸ್ಯರಲ್ಲಿ ಹಂಚಿಕೆಯಾಗಿವೆ ಎಂದು ಅಂದುಕೊಂಡಿದ್ದೇವೆ. ಆದುದರಿಂದ ವರದಿಯ ವಾಚನದ ಅಗತ್ಯವಿಲ್ಲ. ಮಾನ್ಯ ಕಾಮತರು ಸೂಚಿಸಿದ ಸಂದರ್ಭವನ್ನು ಹೊರತುಪಡಿಸಿ, ಈ ತೆರನಾದ ಪರ್ಯಾಲೋಚನೆ ಸಭೆಯಲ್ಲಿ ಕೇವಲ ವರದಿಯನ್ನು ಪ್ರಸ್ತುತ ಪಡಿಸುವಾಗ ಅದರೊಳಗಣ ಅಂಶಗಳನ್ನು ಕುರಿತು ಭಾಷಣ ಮಾಡುವ ಪರಿಪಾಠವಿಲ್ಲ. ಉದಾ: ವರದಿಯನ್ನು ಪರಿಶೀಲಿಸಬೇಕೆಂದು ನಿರ್ಣಯ ಮಂಡಿಸುವ ಸಂದರ್ಭ ಆ ನಿರ್ಣಯವನ್ನು ಇಂದು ಮಂಡಿಸುತ್ತಿಲ್ಲ. ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡುವವರ ಉದ್ದೇಶವೂ ಅದಲ್ಲ. ಈ ಅಧಿವೇಶನದಲ್ಲಿ ಅಂತಹ ನಿಲುವಳಿಯನ್ನು ಮಂಡಿಸಬೇಕೆಂಬುದೂ ಅವರ ಉದ್ದೇಶವಲ್ಲ. ಈ ನಿರ್ಣಯ ಕೈಗೊಳ್ಳಲು ಹಲವಾರು ಕಾರಣಗಳುಂಟು. ಮೊದಲನೆಯದಾಗಿ ಇದು ಬಹಳ ಮುಖ್ಯವಾದ ವಿಷಯ. ಇದು ಸಂವಿಧಾನ ರಚನೆಗೆ ಸಂಬಂಧಿಸಿದ ಮುಖ್ಯ ವಿಷಯ. ಆದುದರಿಂದ ಅಂತಹ ಪ್ರಮುಖ ವಿಷಯಗಳನ್ನು ಕುರಿತ ವರದಿಯನ್ನು ಓದಿ, ಎಚ್ಚರಿಕೆಯಿಂದ ಅದರ ಅಧ್ಯಯನ ಮಾಡಬೇಕಾಗುತ್ತದೆ. ಈ ಸದನದ ಸದಸ್ಯರು ವರದಿಯನ್ನು ಪರಿಶೀಲಿಸುವ ಮೊದಲು, ಅದರ ಅಧ್ಯಯನದಲ್ಲಿ ತೊಡಗಬೇಕಾಗುತ್ತದೆ. ಕಾಬಿನೆಟ್ ಸಮಿತಿಯ ಯೋಜನಾನುಸಾರ ಸಮಿತಿ ಕಾರ್ಯನಿರ್ವಹಿಸಬೇಕಾಗುತ್ತೆ ಎಂಬುದನ್ನು ನೆನಪಿನಲ್ಲಿಡಬೇಕು. ಆಯೋಜನೆಗೆ ಕೆಲ ಅಪರೂಪದ ಲಕ್ಷಣಗಳಿವೆ. ಆ ಅಪರೂಪದ ಲಕ್ಷಣ

ಬಂದಿರುವುದು ಮುಸ್ಲಿಂಲೀಗ್ ಪಕ್ಷ ಒಂದುವೇಳೆ, ಸಭೆಗೆ ಸೇರಲಿಚ್ಛಿಸುವುದಾದರೆ, ಆಗ ಅದನ್ನು ತೃಪ್ತಿಪಡಿಸುವ ಆಸೆಯ ಪರಿಣಾಮವಾಗಿ, ಮುಸ್ಲಿಂಲೀಗ್‌ನ ಸೇರ್ಪಡೆಯನ್ನು ಸಾರಾಸಗಟು ತಳ್ಳಿ ಸಾಕಿಲ್ಲ. ಅವರಿನ್ನೂ, ಸೇರುವ ಸಾಧ್ಯತೆ ಇದೆ. (ಆ ಸಾಧ್ಯತೆ ಕ್ಷೀಣಿಸುತ್ತಲಿದ್ದರೂ ಸಹ) ಆ ಸಾಧ್ಯತೆ ಏನಾದರೂ, ಕಾರ್ಯರೂಪಕ್ಕೆ ಬಂದರೆ ಕೇಂದ್ರ ಒಕ್ಕೂಟಕ್ಕೆ ವಹಿಸಿದ ವಿಷಯಗಳಲ್ಲಿ ಮುಖ್ಯವಾದ ಈ ವಿಷಯ ಕುರಿತು (ಈ ಸದನದಲ್ಲಿ ಮುಸ್ಲಿಂಲೀಗ್‌ನ ಸಂಪೂರ್ಣ ಸಹಕಾರದೊಡನೆ) ಚರ್ಚಿಸುವುದು ಔಚಿತ್ಯಪೂರ್ಣವೆನಿಸುತ್ತದೆ. ಅವರು ಬರುವರೆ ಇಲ್ಲವೆ ಎಂಬುದು ಮುಂದಿನ ಜೂನ್-ಜುಲೈ ಅಧಿವೇಶನದೊಳಗೆ ಖಚಿತವಾಗಿ ತಿಳಿದುಬರುತ್ತದೆ. ಅದು ಈ ಸದನದಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗದುದಕ್ಕೆ ಮುಖ್ಯಕಾರಣ.

ನಂತರ, ಭಾರತೀಯ ರಾಜ್ಯಗಳು, ಅವುಗಳ ಹಲವಾರು ಸದಸ್ಯರು ಇಂದು ನಮ್ಮೊಡನೆ ಸೇರಿದ್ದಾರೆ. ಇನ್ನು ಹೆಚ್ಚಿನ ಪ್ರತಿನಿಧಿಗಳು ಬರಬೇಕಿದೆ. ಬರದಿರಲು ಕಾರಣ, ತಮ್ಮ ಆಯ್ಕೆಯ ಪ್ರಕ್ರಿಯೆಗೆ ಅವರು ಒಳಪಡಬೇಕಾಗಿದೆ. ಈ ಸಮಿತಿಯ ವರದಿಯ ವ್ಯಾಪ್ತಿಗೆ ಒಳಪಡುವಂತಹ ಬಹು ಮುಖ್ಯವಾದ ವಿಷಯದಲ್ಲಿ ಅವರಿಗೆ ಆಸಕ್ತಿ ಇದೆ. ಇಂತಹ ಮುಖ್ಯ ವಿಷಯವನ್ನು ಕುರಿತು ಚರ್ಚಿಸುವ ಸಂದರ್ಭದಲ್ಲಿ ಭಾರತೀಯ ಪ್ರತಿನಿಧಿಗಳ ಪೂರ್ಣ ಪ್ರಾತಿನಿಧ್ಯವಿರುವುದು ಅಪೇಕ್ಷಣೀಯ. ಮೂರನೆಯದಾಗಿ, ಪ್ರಸ್ತುತ ನಮ್ಮ ಮುಂದಿರುವ ರಾಜಕೀಯ ಸಂವಾದ. ಆ ಸಂವಾದಗಳ ಫಲಶ್ರುತಿಯಾಗಿ ಕೈಗೊಂಡ ನಿರ್ಧಾರಗಳು ಈಗ ನಮಗೆ ಲಭ್ಯವಿಲ್ಲ. ಮುಂದಿನ ಜೂನ್-ಜುಲೈ ಅಧಿವೇಶನದಲ್ಲಿ ಪ್ರಾಯಶಃ, ಅವ್ರ ನಮ್ಮ ಕೈ ಸೇರುತ್ತವೆ. ನಿರ್ಧಾರದ ಸ್ವರೂಪ, ಬಹಳಷ್ಟು ಪ್ರಾಮುಖ್ಯ ಪಡೆಯುತ್ತದೆ. ನನ್ನ ಒಂದು ಅಭಿಪ್ರಾಯದಲ್ಲಿ ತಮ್ಮೆಲ್ಲರ ಸಹಮತವಿದೆ ಎಂದು ಭಾವಿಸುತ್ತೇನೆ. ಆ ನಿರ್ಧಾರ ಯಾವ ರೂಪವನ್ನಾದರೂ ತಾಳಬಹುದೆಂಬ ಭೀತಿ ಇದೆ. ಅದೇನಾದರೂ ಭಾರತವನ್ನು ಎರಡು ಅಥವಾ ಮೂರು ಸ್ವತಂತ್ರ ರಾಜ್ಯಗಳ ಭಾಗಗಳಾಗಿ ವಿಭಜಿಸುವ ನಿರ್ಧಾರವಾಗಿದ್ದರೆ, ಮುಂದೆ ಭಾರತ ಸಂವಿಧಾನ ರಚನೆಗೆ ತೊಡಗುವ, ಸಭೆಯ ಮಹತ್ಕಾರ್ಯದ ಮೇಲೆ, ಅದು ಪರಿಣಾಮ ಬೀರುತ್ತದೆ. ಅಂತಹ ಸಂದರ್ಭದಲ್ಲಿ ಕ್ಯಾಬಿನೆಟ್ ಮಿಷನ್ ಯೋಜನೆಗೆ ಕಟ್ಟುನಿಟ್ಟಾಗಿ ಬದ್ಧವಾಗದೆ ಈ ಸಭೆ ದಿಕ್ಪಲ್ಲಟ ಹೊಂದಬೇಕಾಗುತ್ತದೆ.

ಅದು ಯಾವ ದಿಕ್ಕಿನಲ್ಲಿ ಪಲ್ಲಟಗೊಳ್ಳಬೇಕೆಂಬುದನ್ನು, ಈಗಲೆ ನಾನು ತಿಳಿಸುವ ಅಗತ್ಯವಿಲ್ಲ. ರಾಜಕೀಯ ನಿರ್ಧಾರಗಳನ್ನು, ಸಭೆಯ ಹೊರಳು ದಾರಿ ಅವಲಂಬಿಸಿರುತ್ತದೆ. ಅದಲ್ಲದೆ, ಕೇಂದ್ರಕ್ಕೆ ವಹಿಸಿಕೊಡಬೇಕಾದ ವಿಷಯಗಳ ಸಂಖ್ಯೆ ಅವುಗಳ ವ್ಯಾಪ್ತಿ ಮತ್ತು ಒಳಾಂಶಗಳು. ಕೇಂದ್ರ ಮತ್ತು ಘಟಕಗಳ ನಡುವೆ ಸಮವರ್ತಿ ಅಧಿಕಾರ ವ್ಯಾಪ್ತಿಯ ವ್ಯಾಖ್ಯೆ ಶಾಸಕಾಂಗ ಮತ್ತು ಆಡಳಿತಾಂಗದ ಅಧಿಕಾರದ ಚಲಾವಣೆ ವಿಷಯಗಳ ಕೇಂದ್ರ ಮತ್ತು ಘಟಕಗಳ ನಡುವಣ ಸಂಬಂಧ, ಇವೆಲ್ಲವೂ, ಹೊಸಬಗೆಯ ಆಮೂಲಾಗ್ರ ಪರೀಕ್ಷೆಗೆ ಒಳಪಡುವ ವಿಷಯಗಳು. ನಾನು ಆಲೋಚಿಸುವಂತೆ, ಇಂತಹ ಪರೀಕ್ಷೆ ಕೇಂದ್ರೀಯ ವಿಷಯಗಳ ಸಮಿತಿ ಮತ್ತು ಈ ಅಧಿವೇಶನದಲ್ಲಿ ರಚಿಸಬೇಕೆಂದು ಉದ್ದೇಶಿಸಿರುವ ಎರಡು ಸಮಿತಿಗಳ ನಡುವೆ ಪರಸ್ಪರ ನಿಕಟ ಸಹಯೋಗದೊಡನೆ ನಡೆಯಬೇಕಿದೆ. ಇವುಗಳಲ್ಲಿ ಒಂದು ನಿಲುವು ಕೇಂದ್ರ ಸಂವಿಧಾನದ ನೀತಿ ನಿಯಮವನ್ನು ನಿರ್ಧರಿಸುತ್ತದೆ. ಇನ್ನೊಂದು, ಮಾದರಿ ಪ್ರಾಂತೀಯ ಸಂವಿಧಾನದ ನೀತಿ ನಿಯಮಗಳನ್ನು ನಿರ್ಧರಿಸುತ್ತದೆ. ಇವು ಮೂರು ಸಮಿತಿ, ನಿಕಟ ಸಹಯೋಗದೊಡನೆ ಕಾರ್ಯನಿರ್ವಹಿಸಬೇಕಾಗುತ್ತದೆ. ಅವು ಕಾರ್ಯಕ್ಷೇತ್ರಕ್ಕೆ ಇಳಿಯುವ ಮುನ್ನ, ರಾಜಕೀಯ ನಿರ್ಧಾರಗಳು ಅವರ ಕೈಸೇರಿರಬೇಕು.

ಮಾನ್ಯರೆ, ಈ ಎಲ್ಲ ಸಂಗತಿಗಳನ್ನು ಪರಿಗಣಿಸಿ, ಕೇಂದ್ರೀಯ ವಿಷಯಗಳನ್ನು ಕುರಿತ ಈ ವರದಿಯ ಬಗ್ಗೆ ಚರ್ಚೆಯನ್ನು ಈ ಅಧಿವೇಶನದ ನಂತರ ಮುಂದೊಂದು ದಿನಕ್ಕೆ ಗೊತ್ತುಪಡಿಸಬೇಕೆನಿಸುತ್ತದೆ; ಅರ್ಥಾತ್ ಮುಂದಿನ ಅಧಿವೇಶನಕ್ಕೆ; ಹಾಗಾಗಿ ಇಂದು ವರದಿಯನ್ನು ಪರಿಶೀಲಿಸಬೇಕೆಂಬ ನಿರ್ಣಯವನ್ನು ನಾನು ಮಂಡಿಸುತ್ತಿಲ್ಲ.

ಇದನ್ನು ಕುರಿತ ಇನ್ನೊಂದು ವಿಷಯ ತಿಳಿಸುವುದಿದೆ, ಅದಕ್ಕೆ ಸದನದ ಅನುಮೋದನೆಯನ್ನು ಕೋರುತ್ತೇನೆ. ಅದು ಸಮಿತಿಯಿಂದ ಆಗಿರಬಹುದಾದ ಪ್ರಮಾದ ಕುರಿತದ್ದು; ಈ ಸಮಿತಿಯ ರಚನೆಯಾದಾಗ, ಅದರ ವರದಿಯನ್ನು ಏಪ್ರಿಲ್ ೧೫ರೊಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು. ವಾಸ್ತವವಾಗಿ ಏಪ್ರಿಲ್ ೧೭ರಂದು ಸಮಿತಿಯು ಸಹಿ ಹಾಕಿತು. ಆ ಕಾರಣಕ್ಕಾಗಿ, ಎರಡು ದಿನಗಳ ವಿಳಂಬಕ್ಕಾಗಿ ಸದನದ ಕ್ಷಮೆ ಕೋರುತ್ತೇನೆ.

ನಾನು ತಿಳಿಸಬಹುದಾದ ಮತ್ತೊಂದು ವಿಷಯವಿದೆ. ಕೇಂದ್ರೀಯ ವಿಷಯಗಳನ್ನು ಕುರಿತಂತೆ ಸಮಿತಿಯ ವರದಿ ಅಂತಿಮವೆಂದು ಭಾವಿಸಕೂಡದು; ಈ ವಿಷಯವನ್ನು ಕುರಿತ ಮರುಪರಿಶೀಲನೆಯ ಬಗ್ಗೆ ನಾನು ಈಗಾಗಲೇ ತಮ್ಮಲ್ಲಿ ನಿವೇದಿಸಿದ್ದೇನೆ. ಇತರ ಸಮಿತಿಗಳ ಸಹಯೋಗದೊಡನೆ ಇದೇ ಸಮಿತಿಯು ವಿಷಯವನ್ನು ಕೂಲಂಕಷವಾಗಿ ಪರೀಕ್ಷಿಸಬೇಕಾಗುತ್ತದೆ. ಉದಾಹರಣೆಗೆ ಭಾರತೀಯ ರಾಜ್ಯಗಳನ್ನು ಕುರಿತ ವಿಷಯಗಳಿವೆ. ಈ ಸಮಿತಿಯು ನೇಮಕಗೊಂಡಂದಿನಿಂದ ಇದುವರೆಗೆ ಇದರ ಬಗ್ಗೆ ಆಲೋಚಿಸಿದುದಕ್ಕಿಂತ ಹೆಚ್ಚಿನ ಆಲೋಚನೆ, ಈಗ ಅಗತ್ಯವಿದೆ. ಇದನ್ನು ಕುರಿತು ತಮ್ಮ ಅನಿಸಿಕೆಗಳನ್ನು ತಿಳಿಯಪಡಿಸಲು ಇಚ್ಛಿಸುವ ರಾಜ್ಯಗಳ ಪ್ರತಿನಿಧಿಗಳಿಗೆ, ಇನ್ನೂ ಹೆಚ್ಚಿನ ಪರಿಶೋಧನೆಯು ಅವಶ್ಯಕವೆಂದು ಅನಿಸಬಹುದು. ಇದು, ಅವರು ಅಂತಿಮ ತೀರ್ಮಾನಕ್ಕೆ ಬದ್ಧರಾಗುವ ಮುನ್ನ ನಡೆಯತಕ್ಕದು. ಸಮಿತಿಯ ಕೆಲವು ಸದಸ್ಯರ ಅಭಿಪ್ರಾಯದಂತೆ, ವರದಿಯಲ್ಲಿ ಪಟ್ಟಿಮಾಡಿರುವ ವಿಷಯಗಳ ಬಗ್ಗೆ ಏಳಬಹುದಾದ ಪ್ರಶ್ನೆಗಳನ್ನು ಕುರಿತು ಹೆಚ್ಚಿನ ಪರಾಮರ್ಶೆ, ಪರಿಶೀಲನೆ ಅಗತ್ಯವೆನಿಸಿದೆ. ಎಲ್ಲಕ್ಕಿಂತ ಮುಂಚೆ ನಮ್ಮ ಮುಂದೆ ಎದ್ದಿರುವ ಪ್ರಶ್ನೆ ಎಂದರೆ, ರಾಜಕೀಯ ನಿರ್ಧಾರ. ಅದರಿಂದ ನಮ್ಮ ವರದಿಯನ್ನು ಆಮೂಲಾಗ್ರ ಪರಿಶೋಧಿಸುವುದು ಅನಿವಾರ್ಯವಾಗಬಹುದು. ಆದುದರಿಂದ ಈ ಸಮಿತಿಯು ಅಗತ್ಯಬಿದ್ದಲ್ಲಿ ಮತ್ತೊಂದು ವರದಿಯನ್ನು ಸಲ್ಲಿಸಲೆಂಬುದು ತಮ್ಮಲ್ಲಿ ನನ್ನ ಒಂದು ಕೋರಿಕೆ. ಅದಕ್ಕೆ ಅವಕಾಶ ನೀಡಬೇಕು. ಇಷ್ಟು ಹೇಳಿ ಸದನದ ಮುಂದೆ ವರದಿಯನ್ನು ಇಡುತ್ತಿದ್ದೇನೆ.

**ಸನ್ಮಾನ್ಯ ಅಧ್ಯಕ್ಷರು** : ವರದಿಯನ್ನು ಸಲ್ಲಿಸಿ ಆಗಿದೆ. ಅದರ ಸಹಿಗೆ ಎರಡು ದಿನಗಳು ವಿಳಂಬವಾದುದಕ್ಕೆ ಸದನದ ಕ್ಷಮೆ ಇರುವುದೆಂದು ಭಾವಿಸುತ್ತೇನೆ. ಅಗತ್ಯ ಬಿದ್ದಲ್ಲಿ ಸಮಿತಿ ಮತ್ತೊಂದು ವರದಿಯನ್ನು ಸಲ್ಲಿಸಲು ಅನುಮತಿ ನೀಡುವುದೆಂದೂ ನಾನೂ ಭಾವಿಸುತ್ತೇನೆ.

ಇದಕ್ಕೆ ಸರ್ವಾನುಮತದಿಂದ ಒಪ್ಪಿಗೆ ದೊರೆಯಿತು.

**ಮಾನ್ಯ ಆರ್.ಕೆ. ಸಿಧ್ವಾ** (ಸಿ.ಪಿ ಮತ್ತು ಬೇರಾರ್ : ಸಾಮಾನ್ಯ) : ನಂತರದ ವರದಿಯೂ ಮುಕ್ತ ಚರ್ಚೆಗೆ ಒಳಪಡುತ್ತದೆಯೇ ಎಂಬುದನ್ನು ತಿಳಿಯಬಯಸುತ್ತೇನೆ. ಇಂದು ಪ್ರಸ್ತುತಪಡಿಸಿದ ವರದಿಯ ಒಂದು ಸಾಲನ್ನೂ ಸಹ ನಾವಿನ್ನೂ ಓದಿಲ್ಲ.

ಸನ್ಮಾನ್ಯ ಅಧ್ಯಕ್ಷರು: ನಾವು ಈ ವರದಿಯ ಬಗ್ಗೆ ಚರ್ಚಿಸುತ್ತಿಲ್ಲ. ಗೌರವಾನ್ವಿತ ಸದಸ್ಯರು ಇದನ್ನು ಓದುತ್ತಾರೆ. ಮುಂದಿನ ಅಧಿವೇಶನದಲ್ಲಿ ಅದನ್ನು ಕುರಿತು ಚರ್ಚಿಸಬಹುದು.

ಮತ್ತೆ ನಾಳೆ ಬೆಳಿಗ್ಗೆ ೮.೩೦ಕ್ಕೆ ಸಭೆ ಸೇರುತ್ತೇವೆ. ೧೨.೩೦ರವರೆಗೆ ಸಭೆ ನಡೆಯಲಿದೆ. ನಂತರ ಸದನದ ಕಲಾಪ ಮುಂದೂಡಲ್ಪಡುತ್ತದೆ. ಮೂಲಭೂತ ಹಕ್ಕುಗಳ ಸಮಿತಿಯ ವರದಿಗೆ ಯಾರಾದರೂ ತಿದ್ದುಪಡಿ ಸೂಚಿಸುವುದಾದರೆ ಸಂಜೆ ೫ರ ಒಳಗೆ ಸೂಚಿಸಬಹುದು. ವರದಿಯನ್ನು ನಾಳೆ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು. ನಾಳೆ ೮.೩೦ಕ್ಕೆ ಸದನದ ಸಭೆಯನ್ನು ಮುಂದೂಡಲಾಗಿದೆ.

ನಂತರ ಮಂಗಳವಾರ ಏಪ್ರಿಲ್ ೨೯ (೧೯೪೭)ರ ಬೆಳಗ್ಗೆ ೮.೩೦ಕ್ಕೆ ಸಭೆ ಮುಂದೂಡಿತು.

*[ಹಿಂದುಸ್ತಾನಿ ಭಾಷಣದ ಆಂಗ್ಲ ಭಾಷಾಂತರ]

## ಅನುಬಂಧ 'ಎ'

## ಭಾರತ ಸಂವಿಧಾನ ರಚನಾ ಸಭೆ

ರಾಜ್ಯಗಳ ಸಂಧಾನದ ಸಮಿತಿಯೊಡನೆ ಮಾತುಕತೆ ನಡೆಸಲು ನೇಮಕಗೊಂಡ ಸಮಿತಿಯ ವರದಿ.

೧೯೪೬ರ ಡಿಸೆಂಬರ್ ೨೧ರಂದು ಅಂಗೀಕೃತವಾದ, ಸಂವಿಧಾನ ಸಭೆಯ ನಿರ್ಣಯದಂತೆ, ಕೆಳಕಂಡಂತೆ ಸಮಿತಿಯ ಸದಸ್ಯರು ನೇಮಕಗೊಂಡರು:

೧. ಗೌರವಾನ್ವಿತ ಪಂಡಿತ್ ಜವಾಹರ್‌ಲಾಲ್ ನೆಹರು

೨. ಗೌರವಾನ್ವಿತ ಮೌಲಾನಾ ಅಬುಲ್ ಕಲಾಂ ಆಜ಼ಾದ್

೩. ಗೌರವಾನ್ವಿತ ಸರ್ದಾರ್ ವಲ್ಲಭಬಾಯಿ ಪಟೇಲ್

೪. ಡಾ. ಬಿ. ಪಟ್ಟಾಭಿಸೀತಾರಾಮಯ್ಯ

೫. ಮಿ| ಶಂಕರ್‌ರಾವ್ ದೇವ್

೬. ಗೌರವಾನ್ವಿತ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್

ಶ್ರೀಯುತರನ್ನೊಳಗೊಂಡ ಸಮಿತಿಯು ಪ್ರಭು ಪೀಠದಿಂದ ರಚಿತವಾದ ಸಂಧಾನ ಸಮಿತಿಯ ಸದಸ್ಯರೊಡನೆ ಮಾತುಕತೆ ನಡೆಸಲು ನಿಯುಕ್ತವಾಯಿತು. ಹಾಗೂ ಭಾರತೀಯ ರಾಜ್ಯಗಳ ಇತರ ಸದಸ್ಯರೊಡನೆ ಕೆಳಕಂಡ ಉದ್ದೇಶಕ್ಕಾಗಿ ಸಮಾಲೋಚಿಸುವಂತೆ ನಿಯೋಜಿಸಲಾಗಿತ್ತು.

(ಎ) ೯೩ಕ್ಕೆ ಮೀರದಂತೆ ಸಭೆಯಲ್ಲಿ ಸದಸ್ಯರ ಸ್ಥಾನಗಳನ್ನು ಗೊತ್ತುಪಡಿಸುವುದು ಇವರ ೧೯೪೬ರ ಮೇ ೧೬ರ ಕ್ಯಾಬಿನೆಟ್ ಮಿಷನ್ ಹೇಳಿಕೆಯಂತೆ, ಭಾರತೀಯ ರಾಜ್ಯಗಳಿಗೆ ಮೀಸಲಿಟ್ಟರು.

(ಬಿ) ಸಭೆಗೆ, ಪ್ರತಿನಿಧಿಗಳನ್ನು ಆಯ್ಕೆ ಮಾಡುವ ವಿಧಾನವನ್ನು ಗೊತ್ತುಪಡಿಸುವುದು.

ನಂತರ ಅಂತಹ ಸಂಧಾನದ ಫಲಿತಾಂಶ ಕುರಿತ ವರದಿಯನ್ನು ಸಲ್ಲಿಸುವುದು. ೧೯೪೭ರ ಜನವರಿ ೨೧ಕ್ಕೆ ಮತ್ತೊಂದು ನಿರ್ಣಯ ಅಂಗೀಕೃತವಾಯಿತು. ಅದರಂತೆ ಭೂತಾನ್ ಮತ್ತು ಸಿಕ್ಕಿಂ ರಾಜ್ಯಗಳ ವಿಶೇಷ ಸಮಸ್ಯೆಗಳನ್ನು ಕುರಿತಂತೆ ನಮಗೆ ಸೂಕ್ತವೆನಿಸಿದ ವ್ಯಕ್ತಿಗಳೊಡನೆ ಮಾತುಕತೆ ನಡೆಸಿ, ಅದರ ಫಲಿತಾಂಶವನ್ನು ಸಭೆಗೆ ವರದಿ ಮಾಡುವುದು. ಈ ವರದಿ, ಕೇವಲ ಡಿಸೆಂಬರ್ ೨೧ರ ನಿಲುವಳಿಯ ಮೇರೆಗೆ ನಡೆಸಿದ ಮಾತುಕತೆಗಳ ವರದಿ.

೧೯೪೭ರ ಫೆಬ್ರವರಿ ೮ ಮತ್ತು ೯ರಂದು, ರಾಜ್ಯ ಸಂಧಾನ ಸಮಿತಿಯೊಡನೆ ಜಂಟಿ ಸಭೆಯ ಮೊದಲ ಸರಣಿ ನಡೆಯಿತು. ಉಭಯ ಸಮಿತಿಗಳು ಚರ್ಚಿಸಲಿರುವ ವಿಷಯಗಳ ವ್ಯಾಪ್ತಿ ಕುರಿತು ಮಾತುಕತೆ ನಡೆಯಿತು. ಸಂವಿಧಾನ ರಚನಾ ಸಭೆಗೆ ಸೇರುವ ಬಗ್ಗೆ, ರಾಜ್ಯಗಳು ಇನ್ನೂ ಯಾವುದೇ ಖಚಿತ ನಿರ್ಧಾರವನ್ನು ಕೈಗೊಂಡಿಲ್ಲವೆಂದು ರಾಜ್ಯಗಳ ಸಂಧಾನ ಸಮಿತಿ ತಿಳಿಸಿತು. ಪ್ರಭುಗಳ ಸರ್ವಸಭೆ ೧೯೪೯ರ ಜನವರಿ ೨೯ರಂದು ಅಂಗೀಕರಿಸಿದ ನಿರ್ಣಯದಲ್ಲಿ [ಅನುಚ್ಛೇದ ಎ] ತಿಳಿಸಲಾದ ಹಲವಾರು ಅಂಶಗಳ ಬಗ್ಗೆ ಖಾತರಿ ದೊರೆಯುವವರೆಗೆ ಈ ಬಗ್ಗೆ ನಿರ್ಣಯ ಕೈಗೊಳ್ಳಲು ತಮಗೆ ಸಾಧ್ಯವಾಗದೆಂದು ತಿಳಿಸಿದರು. ಇನ್ನೊಂದೆಡೆ ರಾಜ್ಯಗಳ ಪ್ರತಿನಿಧಿಗಳೂ ಸೇರಿರುವಂತೆ ಸಂಪೂರ್ಣ ರಚನೆಯಾದ ಸಂವಿಧಾನ ಸಭೆಯಲ್ಲಿ ಬಹುತೇಕ ಅಂಶಗಳನ್ನು ಕುರಿತು ಚರ್ಚಿಸಬಹುದೆಂದು ನಾವು ಸೂಚಿಸಿದೆವು. ಅವೆಲ್ಲ ವಿಷಯಗಳೂ ನಮ್ಮ ಸಮಿತಿಯ ನಿರ್ಧಾರಕ್ಕೆ ನಿಲುಕದವು. ಏಕೆಂದರೆ ನಮ್ಮದು ಸೀಮಿತ ಕಾರ್ಯಕ್ಷೇತ್ರ. ೧೯೪೬ರ ಡಿಸೆಂಬರ್ ೨೧ರಂದು ಸಂವಿಧಾನ ರಚನಾ ಸಭೆಯು ಅಂಗೀಕರಿಸಿದ ನಿಲುವಳಿಗೆ ಬದ್ಧವಾದವು. ನಮಗೆ ನೀಡಿದ ಆದೇಶಕ್ಕಿಂತ ಮೀರಿ ಬೇರಾವುದೇ ವಿಷಯಗಳನ್ನು ಚರ್ಚಿಸಲು ಸಮಿತಿಯ ವತಿಯಿಂದ ಸಿದ್ಧರಿರಲಿಲ್ಲ. ಆದರೆ ಸ್ನೇಹಯುತ ವಾತಾವರಣದಲ್ಲಿ ಅನೌಪಚಾರಿಕವಾಗಿ ವೈಯಕ್ತಿಕ ಚರ್ಚೆಗಳಿಗೆ ನಮ್ಮ ಆಕ್ಷೇಪವಿರಲಿಲ್ಲ. ರಾಜರನ್ನು ಬಾಧಿಸುತ್ತಿದ್ದ ಕೆಲಸಮಸ್ಯೆಗಳನ್ನು ಬಗೆಹರಿಸಲು, ಕೆಲತಪ್ಪು ಕಲ್ಪನೆಗಳನ್ನು ನಿವಾರಿಸಲು, ಸಿದ್ಧರಿರುವುದಾಗಿ

ತಿಳಿಸಿದೆವು. ಪಂಡಿತ್ ಜವಾಹರ್‌ಲಾಲ್ ನೆಹರು ಅವರು ಅತಿಮುಖ್ಯವಾಗಿ ಇತ್ಯರ್ಥಗೊಂಡ ಕೆಲ ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಅವೆಂದರೆ ಕ್ಯಾಬಿನೆಟ್ ಮಿಷನ್ ಹೇಳಿಕೆಯನ್ನು ಸಂಪೂರ್ಣವಾಗಿ ಅಂಗೀಕರಿಸುವುದು, ಮೊದಲನೆ ಸ್ಪಷ್ಟವಾದ ಅಂಶ. ಆ ಹೇಳಿಕೆಯ ಕಾನೂನು ಸಮ್ಮತತೆಯಲ್ಲದೆ ಬೇರೊಂದು ಅಂಶವೂ ನನಗೆ ಸ್ಪಷ್ಟವಾಗಿದೆ. ಅದೆಂದರೆ ಯೋಜನೆ ಸ್ವಯಂ ಪ್ರೇರಿತವಾದುದು. ಇಲ್ಲಿ ಘಟನೆಗಳ ಒತ್ತಡ, ಬಲಾತ್ಕಾರದ ಹೊರತು ಬೇರಾವ ಬಲವಂತವೂ ಇಲ್ಲ. ನಮ್ಮ ಮಟ್ಟಿಗೆ ಅದು ಸ್ವಯಂಪ್ರೇರಿತ ಯೋಜನೆಯೆಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಜನರು ನಮ್ಮೊಡನೆ ಪ್ರತ್ಯೇಕ ವ್ಯಕ್ತಿಗಳಾಗಿ ಸೇರಬಹುದು. ಅಥವಾ ಗುಂಪುಗಳಾಗಿ ಪ್ರಭುಗಳಾಗಿ ಅಥವಾ ಬೇರಾವ ರೀತಿಯಲ್ಲಾದರೂ ಸೇರಬಹುದು. ಯಾರನ್ನು ಅವರ ಇಚ್ಛೆಗೆ ವಿರುದ್ಧ ಸೇರಲೆಂದು ಬಲಾತ್ಕಾರಿಸುತ್ತಿಲ್ಲ. ಅದು ಸಾದ್ಯಂತ ಸಂಧಾನದ ಮೂಲಕವೇ ಪರಿಹರಿಸಬೇಕಾದ ವಿಷಯ.

ಘಟನೆಗಳ ಸಿಂಹಾವಲೋಕನಕ್ಕೆ ಬರುವುದಾದರೆ ಮೂಲಭೂತ ಯೋಜನೆಯನ್ನು ಒಪ್ಪಿಕೊಳ್ಳುವುದಲ್ಲದೆ ನಿನ್ನೆ ಕೆಲ ವಿಷಯಗಳನ್ನು ಪ್ರಸ್ತಾಪಿಸಲಾಯಿತು. ಅದರಲ್ಲೊಂದು ರಾಜಪ್ರಭುತ್ವ ಕುರಿತ ಪ್ರಶ್ನೆ. ಈ ಪ್ರಶ್ನೆ ಸಂವಿಧಾನ ರಚನಾ ಸಭೆಯಲ್ಲಿ ಏಳಲೇ ಇಲ್ಲ. ಅಥವಾ ಆ ಹೇಳಿಕೆಯಲ್ಲೂ ಇದು ವ್ಯಕ್ತವಾಗಿಲ್ಲ. ಆದರೆ ಹೊರಗಿನಂತೆ ಸಂವಿಧಾನ ರಚನಾ ಸಭೆಯಲ್ಲೂ ನಮ್ಮ ಪರವಾಗಿ ಅನೇಕ ಸಲ ತಿಳಿಸಲಾಗಿದೆ. ನಮಗೆ ಇದರ ಬಗ್ಗೆ ಆಕ್ಷೇಪಣೆ ಇಲ್ಲವೆಂದು ವ್ಯಕ್ತಪಡಿಸಲಾಗಿದೆ. ರಾಜಾಡಳಿತ ಸರ್ಕಾರದ ಅಸ್ತಿತ್ವಕ್ಕೆ ನಾವು ಅಡ್ಡಬರುವುದಿಲ್ಲ ಎಂಬ ಮಾತನ್ನು ಸ್ಪಷ್ಟಪಡಿಸಲಾಗಿದೆ.

ಸರಹದ್ದಿನ ಪುನಾರಚನೆ ಮತ್ತು ಹೊಂದಾಣಿಕೆ, ನಿನ್ನೆ ಚರ್ಚೆಗೆ ಬಂದ ಮತ್ತೊಂದು ವಿಷಯ. ಈ ಬಗ್ಗೆ ಒಂದಿಷ್ಟು ಆತಂಕ, ಗೊಂದಲಗಳು ವ್ಯಕ್ತವಾಗಿವೆ. ರಾಜ್ಯಗಳ ಬದಲಾವಣೆ ಕುರಿತಂತೆ, ನಿಲುವಳಿಯನ್ನು ರಚಿಸಿದವರ, ಯಾ ಪ್ರಸ್ತಾವಿಸಿದವರ ಇಂಗಿತ ಏನಿತ್ತೆಂಬುದು, ಸಂವಿಧಾನ ರಚನಾ ಸಭೆಯಲ್ಲಿ ಅಂಗೀಕೃತವಾದ ನಿಲುವಳಿಯಲ್ಲಿ ಬಿಂಬಿಸಲ್ಪಟ್ಟಿಲ್ಲ. ಆ ನಿಲುವಳಿ ರಾಜ್ಯಗಳಿಗೆ ಸಂಬಂಧಿಸಿದುದಲ್ಲ. ಅದೊಂದು ಸಾಂದರ್ಭಿಕ ಸೂಚನೆಯಷ್ಟೆ. ಕೆಲವೆಡೆ ಬದಲಾವಣೆಗಳನ್ನು ಮಾಡಬೇಕಾದ ಅನಿವಾರ್ಯತೆ ಏರ್ಪಟ್ಟಾಗ ಸಂವಿಧಾನದಲ್ಲಿ ಅಥವಾ ಘಟಕಗಳ ಪುನರ್ವಿಂಗಡಣೆ ಪ್ರಕ್ರಿಯೆಯಲ್ಲಿ ಅವಕಾಶ ಒದಗಿಸಲಾಗುವುದೆಂಬ ಸೂಚನೆ ಇದೆ. ಆದರೆ ಗಡಿ ಬದಲಾವಣೆ ಕುರಿತಂತೆ ಉಲ್ಲೇಖವಿಲ್ಲ. ಆರ್ಥಿಕ ಕಾರಣಗಳಿಗಾಗಿಯೂ, ಸರ್ಕಾರಿ ಉದ್ದೇಶಗಳಿಗಾಗಿಯೂ, ರಾಜ್ಯ ಕ್ಷೇತ್ರಗಳ ಸರಹದ್ದು ಬದಲಾಯಿಸುವುದಾದರೆ, ಆ ಮಾತು ಒಪ್ಪುತ್ತೇವೆ. ಅಂತಹ ಯಾವುದೇ ಬದಲಾವಣೆಗೆ ಪಕ್ಷಗಳ ಸಮ್ಮತಿ ಅಗತ್ಯ. ಬಲವಂತವಾಗಿ ಹೇರಲಿಕ್ಕಾಗದು. ಅಂತಹ ಯಾವುದೇ ವಿಷಯ ನಮ್ಮ ಚಿಂತನೆಯಲ್ಲಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತೇನೆ. ಆದರೆ ಒಂದುವೇಳೆ ಈ ಪ್ರಶ್ನೆ ಎದ್ದರೆ, ಸಂಬಂಧಿಸಿದ ಪಕ್ಷಗಳ ಅಮಮೋದನೆ ಅಗತ್ಯ.

ಈಗಾಗಲೇ ತಿಳಿಸಿದಂತೆ ಯೋಜನೆ ಸ್ವಯಂ ಪ್ರೇರಿತ ಅದು ಸಂವಿಧಾನ ರಚನಾ ಸಭೆಯೊಳಗೆ ಪ್ರವೇಶದ ವಿಷಯವಾಗಿರಬಹುದು ಅಥವಾ ನಂತರ ಈ ವಿಷಯದಲ್ಲಿ ಯಾವುದೇ ಬಲಾತ್ಕಾರವಿರಕೂಡದೆಂದು, ಸಭೆ ನಿರ್ಧರಿಸಿದ ಬಗ್ಗೆ ಇರಬಹುದು. ಮಿಕ್ಕೆಲ್ಲರಂತೆ, ರಾಜ್ಯಗಳಿಗೆ ಯಾವುದೇ ಹಂತದಲ್ಲಾದರೂ ತಮ್ಮ ಅನಿಸಿಕೆ ವ್ಯಕ್ತಪಡಿಸುವ ಅಭಿವ್ಯಕ್ತಿ ಸ್ವಾತಂತ್ರ್ಯವಿರುತ್ತದೆ. ಹಾಗಾಗಿ, ಬಲಾತ್ಕಾರದ ಅಂಶವನ್ನು ತೊಡೆದು ಹಾಕಬೇಕು.

ವಿಷಯಗಳು ಮತ್ತು ಅಧಿಕಾರಗಳಿಗೆ ಸಂಬಂಧಿಸಿದಂತೆ ಒಂದಿಷ್ಟು ಜಿಜ್ಞಾಸೆ ಇತ್ತು. ಕ್ಯಾಬಿನೆಟ್ ಮಿಷನ್ ಹೇಳಿಕೆಯನ್ನು ನಾವು ಪಾಲಿಸುತ್ತೇವೆ. ಕ್ಯಾಬಿನೆಟ್ ಮಿಷನ್‌ನ ನಿರ್ದಿಷ್ಟ ಹೇಳಿಕೆ ಹೀಗಿದೆ-ಕೇಂದ್ರಕ್ಕೆ ವಹಿಸಿಕೊಟ್ಟ ವಿಷಯಗಳಲ್ಲದೆ ಮಿಕ್ಕೆಲ್ಲವು ರಾಜ್ಯಗಳ ಸುಪರ್ದಿನಲ್ಲಿರುತ್ತವೆ; ಅಂತೆಯೇ ಅಧಿಕಾರಗಳೂ ಕೂಡ. ಇದು ಸ್ಪಷ್ಟ ಮತ್ತು ಇದಕ್ಕೆ ನಮ್ಮ ಒಪ್ಪಿಗೆ ಇದೆ ಸಂಪೂರ್ಣ ಒಪ್ಪಿಗೆ. ನಿನ್ನೆ ಚರ್ಚೆಯ ನಡುವೆ ಸಾಧಾರಣವಾಗಿ

ತಲೆದೋರಿದ ಅಂಶಗಳಿವು. ಪ್ರಾಯಶಃ ಅವುಗಳ ಆಧಾರದ ಮೇಲೆ, ಇಂದು ವಿಷಯಗಳನ್ನು ಪರಿಶೀಲಿಸಬಹುದು.

ಪ್ರಭುಪೀಠದಿಂದ (Chamber of Princes) ನಿಯುಕ್ತವಾದ ಸಂಧಾನ ಸಮಿತಿಯಲ್ಲಿ ಪ್ರಾತಿನಿಧ್ಯ ಪಡೆಯದ ರಾಜ್ಯಗಳೊಡನೆ ಚರ್ಚಿಸಲು, ಸಂವಿಧಾನ ರಚನಾ ಸಭೆ ಸಿದ್ಧವಿಲ್ಲವೆಂಬ ನಿಲುವನ್ನೂ ತಾಳಲಾಗದೆಂಬುದನ್ನು ಮುಂದುವರಿದ ಚರ್ಚೆಯಲ್ಲಿ ನಾವು ಅವರಿಗೆ ವಿವರಿಸಿದೆವು. ಅಥವಾ ರಾಜ್ಯಗಳ ಇತರ ಪ್ರತಿನಿಧಿಗಳೊಡನೆ ಚರ್ಚಿಸಲಾರೆವೆಂಬ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿಲ್ಲ. ಅದು ಬಲಾತ್ಕಾರದ ಪ್ರಶ್ನೆಯಾಗುತ್ತದೆ. ಅವರ ಯೋಜನೆಯ ಪರಿಕಲ್ಪನೆಗೆ ವ್ಯತಿರಿಕ್ತವಾಗುತ್ತದೆ.

ಮೇಲ್ಕಂಡ ವಿಚಾರ ವಿನಿಮಯದ ಪರಿಣಾಮವಾಗಿ ಒಂದು ಸಾಮಾನ್ಯ ಒಪ್ಪಂದಕ್ಕೆ ಬರಲಾಯಿತು. ಸಂವಿಧಾನ ರಚನಾ ಸಭೆ ಎರಡು ವಿಷಯಗಳನ್ನು ಸಮಾಲೋಚಿಸುವಂತೆ ಬಿಟ್ಟಿದ್ದು, ಅದನ್ನು ರಾಜ್ಯಗಳ ಸಂಧಾನ ಸಮಿತಿಯು ಪರಿಶೀಲಿಸತೊಡಗಿತು. ಪ್ರಾರಂಭಿಕ ಮಾತುಕತೆಯ ನಂತರ, ೯೩ ಸ್ಥಾನಗಳ ಹಂಚಿಕೆಯ ವಿಷಯವನ್ನು ಸಂವಿಧಾನ ರಚನಾ ಸಭೆಯ ಮತ್ತು ಪ್ರಭುಪೀಠದ ಸಚಿವಾಲಯಗಳಿಗೆ ಬಿಡುವುದೆಂದಾಯಿತು. ೧೯೪೭ರ ಮಾರ್ಚ್ ತಿಂಗಳ ಒಂದನೇ ತಾರೀಖು ಅವುಗಳ ಶಿಫಾರಸುಗಳನ್ನು ಮಂಡಿಸಬೇಕೆಂದು ನಿರ್ಧರಿಸಲಾಯಿತು.

ಈ ನಡುವೆ, ಸಂವಿಧಾನ ರಚನಾ ಸಭೆಯಲ್ಲಿ ಪ್ರಾತಿನಿಧ್ಯಕ್ಕಾಗಿ ನೇರ ಸಂಧಾನಕ್ಕೆ ಇಚ್ಛಿಸುವುದಾಗಿ, ಬರೋಡ ದಿವಾನರು ತಮ್ಮ ಆಶಯವನ್ನು ಮುಂದಿಟ್ಟಿದ್ದರು. ಅದರಂತೆ, ಸರ್.ಬಿ.ಎಲ್.ಮಿಟ್ಟರ್ ಅವರನ್ನು ಫೆಬ್ರುವರಿ ೯ರಂದು ಭೇಟಿಯಾದೆವು. ನಮ್ಮ ಮಾತುಕತೆಯ ಸಂದರ್ಭದಲ್ಲಿ ಇಂತಹ ನಿರ್ಧಾರ, ತಮ್ಮ ಅರಸರು ಮತ್ತು ಪ್ರಜೆಗಳು ಸಂಯುಕ್ತವಾಗಿ ತೆಗೆದುಕೊಂಡುದಾಗಿ ತಿಳಿಸಿದರು. ಸಂವಿಧಾನ ರಚನಾ ಸಭೆಯ ಕಾರ್ಯಚಟುವಟಿಕೆಗಳಲ್ಲಿ ಸಂಪೂರ್ಣ ಸಹಕಾರ ನೀಡುವ ಭರವಸೆ ಇತ್ತರು. ಪ್ರತಿನಿಧಿಗಳ ಆಯ್ಕೆಗೆ ತಾವು ಸಿದ್ಧವೆಂದು ತಿಳಿಸಿದರು. ತನ್ಮೂಲಕ ಆದಷ್ಟು ಬೇಗನೆ ಆ ಪ್ರತಿನಿಧಿಗಳು ಸಭೆಯ ಕಾರ್ಯಕಲಾಪಗಳಲ್ಲಿ ಸಕ್ರಿಯ ಪಾತ್ರವಹಿಸಬಹುದೆಂಬ ಆಶಾಭಾವ ವ್ಯಕ್ತಪಡಿಸಿದರು. ನಮ್ಮಿರ್ವರಲ್ಲಿ ಆದ ಒಪ್ಪಂದದಂತೆ ಬರೋಡ ತನ್ನ ರಾಜ್ಯದಿಂದ ಮೂವರು ಪ್ರತಿನಿಧಿಗಳನ್ನು ಸಭೆಗೆ ಕಳುಹಿಸಿಕೊಡಬೇಕು. ಅವರು 'ಧರಾ ಸಭಾ'ದಲ್ಲಿ (State Legislature) ಏಕೈಕ ವರ್ಗಾವಣೀಯ ಮತವಿಧಾನದಿಂದ ಅನುಪಾತಾಧಾರಿತ ಪ್ರಾತಿನಿಧ್ಯದ ತತ್ತ್ವದ ಮೇಲೆ ಚುನಾಯಿಸಿ ಕಳುಹಿಸಿಕೊಡಬೇಕು. ಚುನಾವಣೆಯಲ್ಲಿ ವಿಧಾನಸಭೆಗೆ ಆಯ್ಕೆಗೊಂಡವರು ಮತ್ತು ನಾಮನಿರ್ದೇಶಿತರಾದ ಅಧಿಕಾರೇತರ ಸದಸ್ಯರು ಭಾಗವಹಿಸಬೇಕು.

ಎರಡೂ ಸಮಿತಿಗಳ ಮುಂದಿನ ಜಂಟಿ ಸಭೆ ೧೯೪೭ರ ಮಾರ್ಚ್ ೧ನೇ ತಾರೀಖು ನಡೆಯಿತು. ಅದರಲ್ಲಿ ಫೆಬ್ರುವರಿ ೨೦ರ ಎಚ್.ಎಂ.ಜಿ. ಘೋಷಣೆಯನ್ನು, (ಒಂದು ತುರ್ತು ಕರ್ತವ್ಯವನ್ನು) ಹೆಚ್ಚುವರಿಯಾಗಿ ಸೇರಿಸಿರುವುದಾಗಿ ತಿಳಿಸಿದೆವು. ಅದು ರಾಜ್ಯಗಳಿಗೆ ಅತಿ ಪ್ರಯೋಜನಕಾರಿಯಾಗಲಿದೆ, ಅದರಲ್ಲೂ ಬ್ರಿಟಿಷ್ ಭಾರತದ ಪ್ರತಿನಿಧಿಗಳಿಗೆ ಸಿಗುವ ಸೌಲಭ್ಯಕ್ಕಿಂತ ಕಡಿಮೆ ಇಲ್ಲದೆ ಸಂವಿಧಾನ ರಚನಾ ಸಭೆಯಲ್ಲಿ ದೊರೆಯುತ್ತದೆ. ರಾಜ್ಯಪ್ರತಿನಿಧಿಗಳು ಏಪ್ರಿಲ್ ಅಧಿವೇಶನದಲ್ಲಿ ಸೇರಿದರೆ ಈ ಸೌಲಭ್ಯದ ಖಾತರಿ ದೊರೆಯುತ್ತದೆ ಎಂದು ತಿಳಿಸಿದೆವು. ರಾಜ್ಯಪ್ರತಿನಿಧಿಗಳು, ಇಲ್ಲಿಗೆ ಬರಲು ಅಡ್ಡಿಯುಂಟು ಮಾಡುವ ಯಾವುದೇ ಅಂಶವೂ ಮೇ ೧೬ರ ರಾಜ್ಯಪತ್ರದಲ್ಲಿಲ್ಲವೆಂಬುದನ್ನು ಅವರ ಗಮನಕ್ಕೆ ತಂದೆವು. ಸಂವಿಧಾನ ರಚನಾ ಸಭೆ ನಿಯೋಜಿಸಿರುವ ಕೆಲಸಮಿತಿಗಳಲ್ಲಿ ಅದರಲ್ಲೂ ಮೂಲಭೂತಹಕ್ಕುಗಳ ಸಲಹಾ ಸಮಿತಿ, ಒಕ್ಕೂಟದ ಅಧಿಕಾರ ಸಮಿತಿ, ಮುಂತಾದುವುಗಳಲ್ಲಿ, ರಾಜ್ಯ ಪ್ರತಿನಿಧಿಗಳು ಸೇರಿ ಕಾರ್ಯನಿರ್ವಹಿಸಿದರೆ ಉಭಯತ್ರ ಅನುಕೂಲವೆಂದೂ ಸಹ ನಾವು ಸಲಹೆ ಮಾಡಿದೆವು. ಆದರೆ ಅರಸರ ಸರ್ವಸಭೆಯ ಆದೇಶದ ಗೈರಿನಲ್ಲಿ ಇಂತಹ ಕ್ರಮಕೈಗೊಳ್ಳಲು ತಾವು ಶಕ್ತರಲ್ಲವೆಂದು ರಾಜ್ಯ ಸಂಧಾನ ಸಮಿತಿ ಹೇಳಿದರೂ, ಸಾಧ್ಯವಾದಷ್ಟು ಬೇಗನೆ ಅವರೆಲ್ಲರ ಸಲಹೆ ಪಡೆಯುವ ಭರವಸೆ ನೀಡಿತು.

ನಂತರ ನಮ್ಮ ಮಾತುಕತೆ ೯೩ ಸ್ಥಾನಗಳ ಹಂಚಿಕೆಯತ್ತ ಹರಿಯಿತು. ಎರಡೂ ಸಚಿವಾಲಯಗಳು ಪ್ರಸ್ತಾವಿಸಿದ ಹಂಚಿಕೆಯನ್ನು [ಅನುಚ್ಛೇದ ಬಿ] ಸಮಿತಿಗಳನ್ನು ಅನುಮೋದಿಸಿದುವು. ಸಣ್ಣಪುಟ್ಟ ಬದಲಾವಣೆಗಳು ಅಗತ್ಯರೆಂದು ಸಂಬಂಧಿಸಿದ ಪಕ್ಷಗಳಿಗೆ ಅನಿಸಿದಲ್ಲಿ, ಅದಕ್ಕೆ ಅಧಿಕಾರವನ್ನು ನೀಡಿದೆವು.

ನಂತರ ಪ್ರತಿನಿಧಿಗಳ ಆಯ್ಕೆಯ ವಿಧಾನವನ್ನು ಕುರಿತು ಚರ್ಚಿಸಿದೆವು. ಹಲವಾರು ಸಲಹೆ ಸೂಚನೆಗಳು ಬಂದುವು. ಈ ಉದ್ದೇಶಕ್ಕಾಗಿ ರಚಿಸಲ್ಪಟ್ಟ ಜಂಟಿ ಉಪಸಮಿತಿಗಳ ಸಭೆಗಳಲ್ಲಿ ಇವುಗಳನ್ನು ಚರ್ಚಿಸಲಾಯಿತು. ತತ್ಪರಿಣಾಮವಾಗಿ ಆ ಉಪಸಮಿತಿಗಳ ವರದಿಯನ್ನು ಪರಿಶೀಲಿಸಿ ಮುಂದಿನ ಸೂತ್ರವನ್ನು ಎರಡೂ ಸಮಿತಿಗಳು ಅಂಗೀಕರಿಸಿದುವು. ಅದರಂತೆ ರಾಜ್ಯಗಳ ಒಟ್ಟು ಪ್ರತಿನಿಧಿಗಳ ಪೈಕಿ ಶೇಕಡ ೫೦ರಷ್ಟಕ್ಕೇ ಕಡಿಮೆ ಇಲ್ಲದಂತೆ ವಿಧಾನಸಭೆಗೆ ಚುನಾಯಿತ ಸದಸ್ಯರ ಪೈಕಿ ಆಯ್ಕೆಗೊಳ್ಳಬೇಕು. ಅಥವಾ ಅಂತಹ ವಿಧಾನಸಭೆಗಳು ಇಲ್ಲದಾಗ ಇತರ ಚುನಾಯಿತ ಸಂಸ್ಥೆಗಳು ಯಾ ಮಂಡಳಿಗಳಿಂದ ಅರಿಸಲ್ಪಡಬೇಕು. ಶೇಕಡ ೫೦ಕ್ಕೆ ಮೀರುವಂತೆ ಪ್ರತಿನಿಧಿಗಳ ಸಂಖ್ಯೆಗನುಗುಣವಾಗಿ ರಾಜ್ಯಗಳು ತಮ್ಮ ಪಾಲಿನ ಚುನಾಯಿತ ಪ್ರತಿನಿಧಿಗಳ ಹಿಸ್ಸೆಯನ್ನು ಹೆಚ್ಚಿಸಬೇಕು.

ಏಪ್ರಿಲ್ ೨ರಂದು ಈ ಸೂತ್ರಕ್ಕೆ ಪ್ರಭುಗಳ ಸರ್ವಸಭೆಯ ಅನುಮೋದನೆ ದೊರೆತಿದೆ. ಪ್ರಭುಗಳ ಸಮ್ಮೇಳನದ ನಿಲುವಳಿಯ ಪ್ರತಿಯೊಂದನ್ನು ಇದರೊಡನೆ ಲಗತ್ತಿಸಲಾಗಿದೆ. (ಅನುಚ್ಛೇದ ಸಿ)

ಎರಡು ರಾಜ್ಯಗಳು ಎಂದರೆ ಹೈದರಾಬಾದ್ ಮತ್ತು ಕಾಶ್ಮೀರ್ ರಾಜ್ಯಗಳಿಗೆ ಸಂಬಂಧಿಸಿದಂತೆ, ಯಾ ರಾಜ್ಯಗಳ ಜನತೆಯನ್ನು ಪ್ರತಿನಿಧಿಸುವ ಮುಖ್ಯ ಪಕ್ಷಗಳು ತಮ್ಮ ವಿಧಾನಸಭೆಗಳ ಚುನಾವಣೆಗಳನ್ನು ಬಹಿಷ್ಕರಿಸಿವೆ. ಆದ್ದರಿಂದ ಉದ್ದೇಶಿತ ಜನತಾ ಪ್ರಾತಿನಿಧ್ಯವುಳ್ಳ ವಿಧಾನಸಭೆಗಳೆಂದು ಅವುಗಳನ್ನು ಪರಿಗಣಿಸಲು ಸಾಧ್ಯವಾಗಲಿಲ್ಲ. ಇವೆರಡೂ ರಾಜ್ಯಗಳಿಗೆ ಸಂಬಂಧಿಸಿದಂತೆ, ಸಂವಿಧಾನ ರಚನಾ ಸಭೆಗೆ ಪ್ರತಿನಿಧಿಗಳನ್ನು ಚುನಾಯಿಸಲು ಬೇರಾವ ವಿಧಾನವನ್ನಾದರೂ ರೂಪಿಸುವಂತೆ ನಾವು ಸಲಹೆ ಮಾಡಿದೆವು. ಸಂಬಂಧಿಸಿದ ರಾಜ್ಯಕ್ಕೆ ವರ್ತಮಾನ ತಲುಪಿಸುವುದಾಗಿ ಕುಲಾಧಿಪತಿಗಳು ತಿಳಿಸಿದರು.

೬ನೇ ಕಂಡಿಕೆಯಲ್ಲಿ ಉಲ್ಲೇಖಿಸಿದ ಕೆಲಪರಿಷ್ಕರಣವನ್ನು ಪರಿಶೀಲಿಸಲು ಮತ್ತು ಕಾಲಕಾಲಕ್ಕೆ ಚರ್ಚೆಗೆ ಬರುವ ಇತರ ವಿಷಯಗಳನ್ನು ಪರಿಶೀಲಿಸಿ, ಅಗತ್ಯವಿದ್ದರೆ ಸಂಧಾನ ಸಮಿತಿಗೆ ವರದಿ ಮಾಡಲು ಮುಂದೆ ಕಂಡಂತೆ ಸದಸ್ಯರನ್ನು ರಚಿಸಲಾಯಿತು.

೧. ಡಾ. ಪಟ್ಟಾಭಿಸೀತಾರಾಮಯ್ಯ, ೨. ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ೩) ಶ್ರೀ ವಿ.ಟಿ. ಕೃಷ್ಣಮಾಚಾರಿ ೪) ಸರ್ ಸುಲ್ತಾನ್ ಅಹ್ಮದ್, ೫) ಶ್ರೀ ಬಿ.ಎನ್. ರಾವ್ ೬) ಮೀರ್ ಮಕ್ಬೂಲ್ ಅಹ್ಮದ್, ೭) ಮಾನ್ಯ ಎಚ್.ವಿ.ಆರ್. ಅಯ್ಯಂಗಾರ್

ನಮಗೆ ತಿಳಿಸಿದಂತೆ ಬರೋಡ, ಜೈಪುರ್, ಜೋಧ್‌ಪುರ್ ರೇವಾ, ಕೊಚ್ಚಿನ್ ಮತ್ತು ಬಿಕಾನೇರ್ ರಾಜ್ಯಗಳು ಈಗಾಗಲೇ ತಮ್ಮ ಪ್ರತಿನಿಧಿಗಳನ್ನು ಒಪ್ಪಂದದ ಮೇರೆಗೆ ಆಯ್ಕೆ ಮಾಡಿವೆ ಮುಂದಿನ, ಸಭಾಧಿವೇಶನದಲ್ಲಿ ತಮ್ಮ ತಮ್ಮ ಸ್ಥಾನಗಳನ್ನಲಂಕರಿಸಲು ಈ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿದೆ. ಸಂವಿಧಾನ ರಚನಾ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಪಾಟಿಯಾಲ, ಉದಯಪುರ್, ಗ್ವಾಲಿಯರ್ ಮತ್ತು ಭಾವನಗರ್ ರಾಜ್ಯಗಳು ಸಿದ್ಧವಿವೆ ಎಂದು ಘೋಷಿಸಿವೆ.

ಜವಾಹರಲಾಲ್ ನೆಹರು, ಎ.ಕೆ. ಆಜ಼ಾದ್, ವಲ್ಲಭಬಾಯಿ ಪಟೇಲ್, ಎನ್. ಗೋಪಾಲಸ್ವಾಮಿ, ಶಂಕರರಾವ್ ದೇವ್, ಬಿ. ಪಟ್ಟಾಭಿಸೀತಾರಾಮಯ್ಯ

ನವದೆಹಲಿ ೨೪ನೇ ಏಪ್ರಿಲ್ ೧೯೪೭ [ಎ. ಅನುಚ್ಛೇದಕ್ಕೆ ಅಡಕ ೧]

೨೯.೧.೪೭ರಂದು ನಡೆದ ಪ್ರಭುಗಳ ಸಭೆಯಲ್ಲಿ ಅಂಗೀಕೃತವಾದ ನಿರ್ಣಯದ ಪಠ್ಯ.

೧. ಅಂಗೀಕೃತ ಯೋಜನೆಯಂತೆ ಉದ್ದೇಶಿತ ಭಾರತ ಒಕ್ಕೂಟದ ರಚನೆಯಲ್ಲಿ ಮತ್ತು ಪದನಿಮಿತ್ತ

ಅಂಗೀಕೃತ ಸಂವಿಧಾನದ ರಚನೆಗಾಗಿ, ರಾಜ್ಯಗಳು ಸಂಪೂರ್ಣ ಸಹಕಾರಕ್ಕೆ ಸಮ್ಮತಿ ನೀಡಲು ಸಿದ್ಧವಾಗಿರುವುದನ್ನು ಈ ಸಭೆ ಒತ್ತಿ ಹೇಳುತ್ತದೆ. ಮತ್ತು ಮುಂದೆ ಕಂಡಂತೆ ಘೋಷಿಸುತ್ತದೆ.

ಎ) ಇತರ ವಿಷಯಗಳ ನಡುವೆ, ಕ್ಯಾಬಿನೆಟ್ ಮಿಷನ್‌ನ ಯೋಜನೆಗೆ ರಾಜ್ಯಗಳ ಒಪ್ಪಿಗೆಯನ್ನು ಸೂಚಿಸಲು ಮುಂದಿನ ಮೂಲಭೂತ ಪ್ರಸ್ತಾವ ಆಧಾರವಾಗಿರುತ್ತದೆ.

ಬಿ) ಸಂಧಾನದ ಆಧಾರವಲ್ಲದೆ ಮತ್ತಾವುದರ ಆಧಾರದ ಮೇಲೂ ಅಂಗೀಕೃತ ಯೋಜನಾನುಸಾರ, ರಾಜ್ಯಗಳು ಭಾರತದ ಒಕ್ಕೂಟಕ್ಕೆ ಸೇರುವಂತಿಲ್ಲ. ಅಂತಿಮ ನಿರ್ಧಾರ ಆಯಾ ರಾಜ್ಯಕ್ಕೆ ಸೇರಿದುದು. ರಾಜ್ಯಗಳ ವಿಷಯಕ್ಕೆ ಬಂದಾಗ, ಭಾರತ ಒಕ್ಕೂಟಕ್ಕೆ ಸೇರಲು ನಿರ್ಧರಿಸುವ ಆಯಾ ರಾಜ್ಯಗಳು, ಅವುಗಳ ಸಮೂಹಗಳು, ರಾಜ್ಯ ಕ್ಷೇತ್ರಗಳು ಇವಿಷ್ಟನ್ನು ಮಾತ್ರ ಒಕ್ಕೂಟ ಒಳಗೊಂಡಿರುತ್ತದೆ. ಸಂವಿಧಾನ ರಚನಾ ಪ್ರಕ್ರಿಯೆಯಲ್ಲಿ ಆ ಪ್ರತಿನಿಧಿಗಳು ಭಾಗವಹಿಸುತ್ತಿರುವ ನಡುವೆ, ಅವರ ಅಂತಿಮ ನಿರ್ಧಾರದ ಬಗ್ಗೆ ಖಾತರಿ ನೀಡಲಾಗದು. ಸಂವಿಧಾನ ರಚನೆ ಪೂರ್ಣಗೊಂಡು ಒಂದು ಸ್ಪಷ್ಟ ಚಿತ್ರ ಮೂಡಿದಾಗ, ಅದನ್ನು ಪರಿಶೀಲಿಸಿದ ನಂತರವೆ ಅಂತಿಮ ನಿರ್ಧಾರ ತೆಗೆದುಕೊಳ್ಳಬಹುದು.

ಸಿ) ಭಾರತ ಒಕ್ಕೂಟಕ್ಕೆ ಅವು ವಹಿಸಿಕೊಟ್ಟುದನ್ನು ಹೊರತುಪಡಿಸಿ ಉಳಿದ ವಿಷಯಗಳನ್ನು ಅಧಿಕಾರವನ್ನು ರಾಜ್ಯಗಳು ತಮ್ಮಲ್ಲೇ ಉಳಿಸಿಕೊಳ್ಳುತ್ತವೆ. ಮಧ್ಯಂತರ ಅವಧಿ ಸಮಾಪ್ತಿಗೊಳ್ಳುತ್ತಿದ್ದಂತೆ, ಪರಮಾಧಿಕಾರವೂ ಕೊನೆಗೊಳ್ಳುತ್ತದೆ. ಅದು ನಮ್ಮ ಭಾರತ ಸರ್ಕಾರಕ್ಕೆ ವರ್ಗಾವಣೆಯಾಗುವುದಿಲ್ಲ; ಅಥವಾ ಸರ್ಕಾರ ಅದರ ವಾರಸು ಆಗಲಾರದು. ಪರಮಾಧಿಕಾರಕ್ಕೆ ರಾಜ್ಯಗಳು ವಹಿಸಿಕೊಟ್ಟ ಅಧಿಕಾರಗಳು ಮತ್ತೆ ರಾಜ್ಯಗಳಿಗೆ ವಾಪಸಾಗುತ್ತವೆ. ರಾಜ್ಯಗಳು, ಒಕ್ಕೂಟಕ್ಕೆ ವಹಿಸಿಕೊಟ್ಟ ವಿಷಯಗಳನ್ನು ಕುರಿತಂತೆ ಆಯಾ ರಾಜ್ಯಗಳಿಗೆ ಸಂಬಂಧಿಸಿದ ಪ್ರಕಾರ್ಯಗಳನ್ನು ಉದ್ದೇಶಿತ ಭಾರತ ಒಕ್ಕೂಟವೆ ನಿರ್ವಹಿಸುತ್ತದೆ. ಪ್ರತಿಯೊಂದು ರಾಜ್ಯವೂ ತನ್ನ ಸಾರ್ವಭೌಮತ್ವವನ್ನು ಉಳಿಸಿಕೊಳ್ಳುತ್ತದೆ. ತಮ್ಮಿಂದ ಒಕ್ಕೂಟಕ್ಕೆ ಪ್ರತ್ಯಾಯೋಜಿತವಾದ ಹಕ್ಕುಗಳನ್ನು, ಅಧಿಕಾರವನ್ನು ಹೊರತುಪಡಿಸಿ, ಮಿಕ್ಕೆಲ್ಲ ಹಕ್ಕು ಅಧಿಕಾರವನ್ನು ರಾಜ್ಯಗಳೇ ಉಳಿಸಿಕೊಳ್ಳುತ್ತವೆ. ಒಂದು ನಿರ್ದಿಷ್ಟ ಒಪ್ಪಂದವಿಲ್ಲದೆ, ಯಾವುದೇ ಅಧಿಕಾರವನ್ನು ಒಕ್ಕೂಟಕ್ಕೆ ವಹಿಸಿಕೊಡುವುದಾಗಲಿ ಅಥವಾ ಒಕ್ಕೂಟದ ವಾರಸುದಾರನಾಗಿ ಪಡೆಯುವುದಾಗಲಿ, ಸೂಚ್ಯವಾಗಿರಲಿ, ಈ ಯಾವೊಂದು ಪ್ರಶ್ನೆಗೂ ಆಸ್ಪದವಿಲ್ಲ.

ಡಿ) ಯಾವುದೇ ರಾಜ್ಯದ ಒಪ್ಪಿಗೆ ಇಲ್ಲದೆ, ಅದರ ಸಂವಿಧಾನ, ಪ್ರಾದೇಶಿಕ ಘನತೆ, ಆಯಾ ರಾಜ್ಯಗಳ ಪದ್ಧತಿ, ಭಾಷೆ ಮತ್ತು ಬಳಕೆಗೆ ಅನುಗುಣವಾದ ಅರಸೊತ್ತಿಗೆ ಇವು ಯಾವುದರಲ್ಲೂ ಒಕ್ಕೂಟದ ಅಥವಾ ಅದರ ಘಟಕದ ಹಸ್ತಕ್ಷೇಪವಿರುವುದಿಲ್ಲ ಅಥವಾ ಆ ಯಾವುದೇ ದೇಶಗಳ ಈಗಿನ ಸರಹದ್ದುಗಳನ್ನು ಅನುಮತಿ, ಅನುಮೋದನೆಯಿಲ್ಲದೆ ಬದಲಾಯಿಸಲಾಗದು.

ಎಫ್) ರಾಜ್ಯಗಳಿಗೆ ಸಂಬಂಧಪಟ್ಟಂತೆ ಕ್ಯಾಬಿನೆಟ್ ಮಿಷನ್ ಯೋಜನಾನುಸಾರ ಸಂವಿಧಾನ ರಚನಾಸಭೆ, ಒಕ್ಕೂಟದ ಸಂವಿಧಾನವಷ್ಟೆ, ಇತ್ಯರ್ಥಗೊಳಿಸಬಹುದು. ಪ್ರತ್ಯೇಕ ರಾಜ್ಯಗಳ ಅಥವಾ ಅವುಗಳ ಸಮೂಹಗಳ ಆಂತರಿಕ ಆಡಳಿತ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಬಗೆಹರಿಸಲು ಸಂವಿಧಾನ ರಚನಾ ಸಭೆಗೆ ಅಧಿಕಾರವಿಲ್ಲ.

೨. ಸಂಸತ್ ಸಭೆಯಲ್ಲಿ ಮಹಾಪ್ರಭುಗಳು ಒಂದು ವಿಷಯವನ್ನು ಸ್ಪಷ್ಟಪಡಿಸಿದ್ದಾರೆ. ಸಭೆಯೊಡನೆ ಒಂದಾಗುವುದೆ ಬೇಡವೆ ಎಂಬುದನ್ನು ನಿರ್ಧರಿಸುವ ಸ್ವಾತಂತ್ರ್ಯ ರಾಜ್ಯಗಳಿಗಿರಬೇಕು. ರಾಜ್ಯಗಳ ಒಡಂಬಡಿಕೆಗಳು ಮತ್ತು ಸಾರ್ವಭೌಮತ್ವ ಕುರಿತಂತೆ ೧೯೪೬ರ ಮೇ ೧೨ರಂದು ಕ್ಯಾಬಿನೆಟ್ ಮಿಷನ್ ನೀಡಿರುವ ಜ್ಞಾಪನ ಪತ್ರದ ರೀತ್ಯಾ ಒಂದೆಡೆ ರಾಜ್ಯಗಳ ನಡುವೆ ಪರಸ್ಪರ ರಾಜಕೀಯ ವ್ಯವಸ್ಥೆಗಳು, ಇನ್ನೊಂದೆಡೆ ಬ್ರಿಟಿಷ್ ಪ್ರಭುತ್ವ ಮತ್ತು ಬ್ರಿಟಿಷ್ ಇಂಡಿಯಾದ ಆಡಳಿತ ವ್ಯವಸ್ಥೆಗಳು ಮಧ್ಯಂತರ ಅವಧಿಯ ನಂತರ ಕೊನೆಗೊಳ್ಳುತ್ತವೆ. ನಿರ್ವಾತ ಪರಿಹಾರಕ್ಕೆ ತುಂಬಲು, ಬ್ರಿಟಿಷ್ ಇಂಡಿಯಾದ ಉತ್ತರಾಧಿಕಾರಿ ಸರ್ಕಾರದೊಡನೆ, ರಾಜ್ಯಗಳು

ಸಂಯುಕ್ತ ಸರ್ಕಾರದ ಬಾಂಧವ್ಯದ ಹೊಂದಿರಬೇಕು. ಇಲ್ಲವಾದಲ್ಲಿ ಅದರೊಡನೆ ಒಂದು ನಿರ್ದಿಷ್ಟ ರಾಜಕೀಯ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ.

ಎ) ೧೯೪೬ರ ಮೇ ೧೬ರ ಕ್ಯಾಬಿನೆಟ್ ಮಿಷನ್ ಹೇಳಿಕೆಯ ೨೧ನೇ ಕಂಡಿಕೆಯ ಅನುಸಾರ, ವೈಸ್‌ರಾಯ್ ಅವರ ಕೋರಿಕೆಯಂತೆ ಪ್ರಭುಪೀಠದ ಸ್ಥಾಯಿ ಸಮಿತಿ ರಚಿಸಿದ ರಾಜ್ಯ ಸಂಧಾನ ಸಮಿತಿಯೊಂದೆ, ರಾಜ್ಯಗಳು ವಹಿಸುವ, ನೂತನ ಸಂವಿಧಾನಿಕ ಸಂರಚನೆಯಲ್ಲಿ ರಾಜ್ಯಗಳ ಸ್ಥಾನಮಾನಗಳನ್ನು ಕುರಿತ ಪ್ರಶ್ನೆಗಳ ಬಗ್ಗೆ ಪ್ರಾರಂಭಿಕ ಸಂಧಾನ ನಡೆಸುವ ಕ್ಯಾಬಿನೆಟ್ ಮಿಷನ್‌ನ ಯೋಜನೆಯ ಅಡಿಯಲ್ಲಿ ಕಾರ್ಯನಿರ್ವಹಿಸುವ ಏಕೈಕ ಸಕ್ಷಮ ಸಮಿತಿ.

ಬಿ) ಸಂವಿಧಾನ ರಚನಾ ಸಭೆಗೆ ರಾಜ್ಯಗಳ ಸ್ಥಾನಗಳ ಹಿಸ್ಸೆಯನ್ನು ತಮ್ಮೊಳಗೆ ಹಂಚಿಕೊಳ್ಳುವ ವಿಷಯ ರಾಜ್ಯಗಳಿಗೇ ಬಿಟ್ಟಿದ್ದು, ಆದರೆ ಸಂಬಂಧಿಸಿದ ರಾಜ್ಯಗಳು ಅಂತಿಮ ನಿರ್ಧಾರ ತೆಗೆದುಕೊಳ್ಳುವ ಮೊದಲು ಪ್ರತಿನಿಧಿಗಳನ್ನು ಆಯ್ಕೆ ಮಾಡುವ ವಿಧಾನವನ್ನು ರಾಜ್ಯ ಸಂಧಾನ ಸಮಿತಿ ಮತ್ತು ತತ್ಸಮಾನವಾದ, ಸಂವಿಧಾನ ರಚನಾ ಸಭೆಯಲ್ಲಿರುವ ಬ್ರಿಟಿಷ್ ಇಂಡಿಯಾ ಸಮಿತಿಯೊಡನೆ ಸಮಾಲೋಚಿಸತಕ್ಕದು.

(೩) ಈ ಸಭೆ–

ಎ) ಕ್ಯಾಬಿನೆಟ್ ಮಿಷನ್ ಯೋಜನೆಯ ಬಗ್ಗೆ ರಾಜ್ಯಗಳ ಧೋರಣೆಗೆ ಸಂಬಂಧಿಸಿದಂತೆ ಮಂತ್ರಿಗಳ ಸಮಿತಿ ಮತ್ತು ಸಂವಿಧಾನಿಕ ಸಲಹಾ ಸಮಿತಿಯೊಡನೆ ಸಮಾಲೋಚಿಸಿ ೧೯೪೬ರ ಜೂನ್ ೧೦ ರಂದು ಪ್ರಭುಪೀಠದ ಸ್ಥಾಯಿಸಮಿತಿ ನೀಡಿದ ಪತ್ರಿಕಾ ಹೇಳಿಕೆಯನ್ನು ಅನುಮೋದಿಸುತ್ತದೆ.

ಬಿ) ೧೯೪೬ರ ಏಪ್ರಿಲ್ ೨ರಂದು ರಾಜ್ಯಗಳ ನಿಯೋಗ ಕ್ಯಾಬಿನೆಟ್ ಮಿಷನ್‌ಗೆ ರವಾನಿಸಿದ ಅಧಿಕೃತ ಹೇಳಿಕೆಯನ್ನು ಬೆಂಬಲಿಸುತ್ತದೆ. ಈ ನಡುವೆ ಆ ಹೇಳಿಕೆ ಅಂಗೀಕೃತ ಯೋಜನೆಯ ರೀತ್ಯಾ, ಭಾರತ ದೇಶದಲ್ಲಿ ಸಂಪೂರ್ಣ ಸ್ವಯಂ ಆಡಳಿತದ ಸರ್ಕಾರ ಅಥವಾ ಸ್ವಾತಂತ್ರ್ಯವಿರಬೇಕೆಂಬ ಸಾಮಾನ್ಯ ಬಯಕೆಯನ್ನು ರಾಜ್ಯಗಳು ಹೊತ್ತಿರುವಂತೆ ಸ್ಪಷ್ಟಪಡಿಸಿತು.

ಸಿ) ಈ ನಿರ್ಣಯದ ಅನುಸಾರ ಮತ್ತು ಪ್ರಭುಗಳ ಸ್ಥಾಯಿಸಮಿತಿ ಹಾಗೂ ಮಂತ್ರಿಗಳ ಸಮಿತಿಯ ಅನುಮೋದನೆ ಪಡೆದ ರಾಜ್ಯ ಸಂವೈಧಾನಿಕ ಸಲಹಾ ಸಮಿತಿಯ ಸೂಚನೆಗಳು ಮತ್ತು ನಿಲುವಳಿಗಳ ರೀತ್ಯಾ, ರಾಜ್ಯ ಸಂಧಾನ ಸಮಿತಿ, ತತ್ಸಮಾನವಾದ, ಸಂವಿಧಾನ ರಚನಾಸಭೆಯ ಬ್ರಿಟಿಷ್ ಇಂಡಿಯಾ ಭಾಗದೊಡನೆ ಮಾತುಕತೆ ನಡೆಸಲು ಈ ಸಭೆ ಅಧಿಕಾರ ನೀಡಲು ನಿರ್ಣಯಿಸಿದೆ. ಈ ವಿಷಯವಾಗಿ ಮಹಾಪ್ರಭುಗಳ ಸರ್ಕಾರ ಆಲೋಚಿಸಿ ಸಂಸತ್ ಸದನದಲ್ಲಿ ಘೋಷಿಸಿದೆ. ಅದರಂತೆ ಎ) ಕ್ಯಾಬಿನೆಟ್ ಮಿಷನ್‌ನ ಹೇಳಿಕೆಯ ೧೯ (೬)ನೇ ಕಂಡಿಕೆಯ ಅಡಿಯಲ್ಲಿ ಸಂವಿಧಾನ ರಚನಾ ಸಭೆಯಲ್ಲಿ ಪುನಃ ಸಮಾವೇಶಗೊಂಡಾಗ ರಾಜ್ಯಗಳು ಭಾಗವಹಿಸುವ ಬಗ್ಗೆ ನಿಬಂಧನೆಗಳನ್ನು ಕುರಿತು ಮಾತುಕತೆ ನಡೆಸುವುದು ಮತ್ತು ಬಿ) ಈ ಸಂಧಾನಗಳ ಫಲಿತಾಂಶಗಳು ಮೇಲೆ ತಿಳಿಸಿದ ರಾಜ್ಯಗಳ ಸಮಿತಿಗಳ ಅನುಮೋದನೆ ಹಾಗೂ ರಾಜ್ಯಗಳ ಅನುಸಮರ್ಥನೆ ಪಡೆದರೆ, ಅಖಿಲ ಭಾರತ ಒಕ್ಕೂಟದಲ್ಲಿ ತಮ್ಮ ಸ್ಥಾನವೇನೆಂಬುದನ್ನು ಚರ್ಚಿಸುವುದು ಸಂಧಾನ ಸಮಿತಿಯ ಕರ್ತವ್ಯ.

[ಅನುಚ್ಛೇದ ಎಗೆ, ೨ನೇ ಅಡಕ]

ರಾಜ್ಯಗಳಲ್ಲಿ ಪರಸ್ಪರ ಉದ್ದೇಶಿತ ಸ್ಥಾನ ಹಂಚಿಕೆ ಬಗ್ಗೆ ಟಿಪ್ಪಣಿ.

೧. ಅನುಚ್ಛೇದದಲ್ಲಿ ಪ್ರಸ್ತಾಪಿಸಿರುವ ಸ್ಥಾನಗಳ ನಿಗದಿಯನ್ನು/ಹಂಚಿಕೆಯನ್ನು ಸಂವಿಧಾನ ರಚನಾ ಸಭೆಯ ಸಚಿವಾಲಯ ಹಾಗೂ ಪ್ರಭುಪೀಠದ ಸಚಿವಾಲಯದಿಂದ ಸಿದ್ಧಗೊಳಿಸಲಾಗಿದೆ. ಇದು ಸಮಿತಿಗಳ ಚರ್ಚೆಗೆ ಆಧಾರವಾಗಬೇಕೆಂಬುದು ಉದ್ದೇಶ.

೨. ಬ್ರಿಟಿಷ್ ಇಂಡಿಯಾದಲ್ಲಿರುವ ಪದ್ಧತಿಯಂತೆ/ದಶಲಕ್ಷ ಜನಸಂಖ್ಯೆಗೆ ಒಂದು ಸ್ಥಾನದಂತೆ

ಹಂಚಲಾಗುವುದು. ಮುಕ್ಕಾಲು ಅಂಶವನ್ನು ಒಂದು ಸ್ಥಾನವೆಂತಲೂ, ಕಡಿಮೆ ಭಿನ್ನಾಂಶವನ್ನು ನಗಣ್ಯವೆಂದು ಪರಿಗಣಿಸಬೇಕು.

೩. ಪರಸ್ಪರ ಒಪ್ಪಂದ ಮೇಲೆ ರಾಜ್ಯಗಳು ಬಯಸಿದಲ್ಲಿ ತಮಗೆ ಗೊತ್ತು ಪಡಿಸಿದ ಬಿಡಿಯಾದ ಇಲ್ಲವೆ ಗುಂಪಾದ ಸ್ಥಾನಗಳನ್ನು ಇತರ ರಾಜ್ಯಗಳೊಡನೆ ಕೂಡಿಸಬಹುದು (ಸಂಕಲಿಸಬಹುದು) ಇಲ್ಲವೆ, ಹಂಚಿಕೊಳ್ಳಬಹುದು ಪರಂತು:

೪. ರಾಜ್ಯಗಳ ಮತ್ತು/ಅಥವಾ ಸಮೂಹಗಳ ಸಮಗ್ರ ಪ್ರಾತಿನಿಧ್ಯಕ್ಕೆ ಈ ವ್ಯವಸ್ಥೆ ಬಾಧಕವಾಗಬಾರದು.

೫. ಭೌಗೋಳಿಕ ಸನಿಹತೆ, ಆರ್ಥಿಕ ಸ್ಥಿತಿಗತಿಗಳು, ಜನಾಂಗೀಯ ಸಾಂಸ್ಕೃತಿಕ ಮತ್ತು ಭಾಷಿಕ ಬಲವನ್ನು ಗಮನದಲ್ಲಿಡಬೇಕು.

೨.೪.೪೭ರಂದು ಬಾಂಬೆಯಲ್ಲಿ ನಡೆದ ರಾಜರುಗಳ ಸಭೆಯಲ್ಲಿ ಅಂಗೀಕೃತವಾದ ನಿರ್ಣಯದ ಪಠ್ಯ.

೧. ಈ ಸಮ್ಮೇಳನ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಪಣತೊಟ್ಟಿರುವ ರಾಜ್ಯಗಳಿಗೆ ಬೆಂಬಲ ನೀಡುವುದಾಗಿ ಪುನರುಚ್ಚರಿಸುತ್ತದೆ. ಸರ್ವಸಮ್ಮತ ಸಂವಿಧಾನವೊಂದರ ರಚನೆಯಲ್ಲಿ ತಮ್ಮ ಸಂಪೂರ್ಣ ಸಹಕಾರವನ್ನು ನೀಡುವ ಇಚ್ಛೆಯನ್ನು ಪುನರುಚ್ಚರಿಸುತ್ತದೆ. ಒಂದು ಒಪ್ಪಂದದ ಆಧಾರದ ಮೇಲೆ ಅಧಿಕಾರ ಹಸ್ತಾಂತರಕ್ಕೆ ತಮ್ಮ ಎಲ್ಲ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುವುದಾಗಿ ಸ್ಪಷ್ಟೋಕ್ತಿ ನೀಡುತ್ತದೆ. ೧೯೪೭ರ ಜನವರಿ ೨೯ರಂದು ರಾಜ್ಯಗಳ ಅರಸರು ಮತ್ತು ಪ್ರತಿನಿಧಿಗಳು ಸಮ್ಮೇಳನದಲ್ಲಿ ಅಂಗೀಕರಿಸಿದ ನಿರ್ಣಯವನ್ನು ಪುನರ್‌ಧೃಢೀಕರಿಸುತ್ತದೆ.

೨. ರಾಜ್ಯಗಳ ಸ್ಥಾನಗಳ ಹಿಸ್ಸೆ, ಸಂವಿಧಾನ ರಚನಾ ಸಭೆಗೆ ಪ್ರತಿನಿಧಿಗಳ ಆಯ್ಕೆಯ ವಿಧಾನ ಮತ್ತು ಫೆಬ್ರುವರಿ ೮ ಮತ್ತು ೯ ಮತ್ತು ಮಾರ್ಚ್ ೧ ಮತ್ತು ೨ರಂದು ನಡೆದ ಸಭೆಯ ಚರ್ಚೆಗಳ ಫಲಿತಾಂಶವಾಗಿ ರಾಜ್ಯಗಳ ಸಂಧಾನ ಸಮಿತಿ ಮತ್ತು ಸಂವಿಧಾನ ರಚನಾ ಸಭೆ ರಚಿಸಿದ ಸಂವಾದ ಸಮಿತಿಯ ನಡುವೆ ನಡೆದ ಸಾಮಾನ್ಯ ಒಪ್ಪಂದಕ್ಕೆ ಸಮ್ಮೇಳನ ಅನುಸಮರ್ಥನೆ ನೀಡುತ್ತದೆ. ಈ ಒಪ್ಪಂದ, ಸಂವಿಧಾನ ರಚನಾ ಸಭೆಯ ಅಂಗೀಕಾರಕ್ಕೆ ಬದ್ಧವಾಗಿರುತ್ತದೆ.

೩. ಕ್ಯಾಬಿನೆಟ್ ಮಿಷನ್‌ನ ಯೋಜನಗೆ ರಾಜ್ಯಗಳು ಬದ್ಧವಾಗಿರುವುದನ್ನು ಅದು ಪುನರುಚ್ಚರಿಸುತ್ತದೆ. ಅದರ ಅಡಿಯಲ್ಲಿ ಆಸಕ್ತ ರಾಜ್ಯಗಳ ಪ್ರತಿನಿಧಿಗಳು, ಸಂವಿಧಾನ ರಚನಾ ಸಭೆ ಸಮಾವೇಶಗೊಂಡಾಗ ಸೂಕ್ತವಾದ ಕಾಲಘಟ್ಟದಲ್ಲಿ ಸೇರುವುದಾಗಿ ಪುನರುಚ್ಚರಿಸುತ್ತದೆ. ಈ ಸೇರ್ಪಡೆ ಒಕ್ಕೂಟದ ಸಂವಿಧಾನದ ರಚನೆ ಕುರಿತ ಕ್ಯಾಬಿನೆಟ್ ಮಿಷನ್‌ನ ಯೋಜನಾನುಸಾರ ನೆರವೇರುತ್ತದೆ. ಪರಂತು ಅದಕ್ಕೆ ಮುನ್ನ ಎರಡನೇ ನಿಲುವಳಿಯಲ್ಲಿ ನಮೂದಿಸಿದಂತೆ ಮೂಲಭೂತ ಅಂಶಗಳು ಮತ್ತಿತರ ವಿಷಯಗಳನ್ನು ಕುರಿತು ಎರಡೂ ಸಂಧಾನ ಸಮಿತಿಗಳ ನಡುವೆ ನಡೆದ ಸಾಮಾನ್ಯ ಒಪ್ಪಂದವನ್ನು ಸಂವಿಧಾನ ರಚನಾ ಸಭೆ ಅಂಗೀಕರಿಸಬೇಕು.

೪. ಮಧ್ಯಂತರ ಅವಧಿಯು ಪರಿಸಮಾಪ್ತಿಗೊಳ್ಳುತ್ತಿದ್ದಂತೆ, ಪರಮಾಧಿಕಾರ ಕೊನೆಗೊಳ್ಳುತ್ತದೆ ಎಂದು ಕ್ಯಾಬಿನೆಟ್ ಮಿಷನ್ ನೀಡಿದ ಘೋಷಣೆಯನ್ನು ಮಾನ್ಯ ಅಟ್ಲಿಯವರು ೧೯೪೭ರ ಫೆಬ್ರುವರಿ ೨೦ರಂದು ನೀಡಿದ ಹೇಳಿಕೆ ದೃಢೀಕರಿಸಿರುವುದು ಸಂತೋಷದಾಯಕವಾಗಿದೆ. ಇದರರ್ಥ ಪರಮಾಧಿಕಾರಕ್ಕೆ, ರಾಜ್ಯಗಳು ವಹಿಸಿಕೊಟ್ಟ ಎಲ್ಲ ಅಧಿಕಾರಗಳೂ ಅವುಗಳಿಗೆ ಮರಳಿ ಸಿಗುತ್ತವೆ. ಸಂಬಂಧಪಟ್ಟ ಇತರರೊಡನೆ ತಮ್ಮ ಭವಿಷ್ಯದ ಬಾಂಧವ್ಯದ ಬಗ್ಗೆ ಮುಕ್ತ ಮಾತುಕತೆ ನಡೆಸಲು ಆಯಾ ಸ್ವತಂತ್ರ ಘಟಕಗಳಿಗೆ ಅವಕಾಶವಿರುತ್ತದೆ.

೫. ಆಂತರಿಕ ಸುಧಾರಣಾ ವಿಷಯಗಳನ್ನು ಕುರಿತು ಮಾಡಲಾದ ಶಿಫಾರಸುಗಳನ್ನು ಸಮ್ಮೇಳನ ಪುನರ್‌ಧೃಢೀಕರಿಸುತ್ತದೆ. ಅದರ ಬಗ್ಗೆ ವಿಳಂಬಕ್ಕೆ ಅವಕಾಶವಿಲ್ಲದಂತೆ ಕೈಗೊಳ್ಳಬೇಕಾದ ತ್ವರಿತ ಕ್ರಮದ ಪ್ರಾಮುಖ್ಯವನ್ನು ಒತ್ತಿ ಹೇಳುತ್ತದೆ. ಅಗತ್ಯವಿದ್ದರೆ, ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಆಗ್ರಹ ಪಡಿಸುತ್ತದೆ.

೬. ೧೯೪೭ರ ಫೆಬ್ರುವರಿ ೨೦ರಂದು ಮಿ। ಅಟ್ಲಿ ಅವರು ನೀಡಿದ ಹೇಳಿಕೆಯಿಂದಾದ ತುರ್ತಿನ ಕಾರಣ, ಸಮ್ಮೇಳನ, ರಾಜ್ಯಗಳ ಸಂಧಾನ ಸಮಿತಿ ಅಥವಾ ಸ್ಥಾಯಿ ಸಮಿತಿ ನೇಮಿಸುವ ಅಂತಹ ಉಪಸಮಿತಿಗಳ ಮೂಲಕ ಮಾತುಕತೆ ನಡೆಸುವಂತೆ ಕುಲಾಧಿಪತಿಗಳಿಗೂ ಮತ್ತು ಪ್ರಭುಪೀಠದ ಸ್ಥಾಯಿ ಸಮಿತಿಗೂ ಅಧಿಕಾರ ನೀಡುತ್ತದೆ. ಮಾತುಕತೆ ರಾಜ್ಯಗಳ ಮೇಲೆ ಸಾಮಾನ್ಯ ಪರಿಣಾಮ ಬೀರುವ ಪ್ರಶ್ನೆಗಳನ್ನು ಕುರಿತದ್ದು. ಅವು ಹೀಗಿವೆ–

ಎ) ಪರಮಾಧಿಕಾರದ ಸಮಾಪ್ತಿ ಅಧಿಕಾರ ಹಸ್ತಾಂತರದಿಂದ ಉದ್ಭವಿಸುವ ಸಮಸ್ಯೆಗಳು ಮತ್ತು ರಾಜ್ಯಗಳ ಮೇಲೆ ಪರಿಣಾಮ/ಪ್ರಭುತ್ವದ ಪ್ರತಿನಿಧಿಯೊಡನೆ ಮಾತುಕತೆ

ಬಿ) ರಾಜ್ಯಗಳ ಒಡಂಬಡಿಕೆಗಳು ಮತ್ತು ಪರಮಾಧಿಕಾರಕ್ಕೆ ಸಂಬಂಧಿಸಿದಂತೆ ೧೯೪೬ನೇ ಮೇ ೧೨ರಂದು ಕ್ಯಾಬಿನೆಟ್ ಮಿಷನ್ ನೀಡಿದ ಜ್ಞಾಪನ ಪತ್ರದ ೪ನೇ ಕಂಡಿಕೆಯಲ್ಲಿ ಉಲ್ಲೇಖಿತವಾದ ವಿಷಯಗಳನ್ನು ಮಧ್ಯಂತರ ಸರ್ಕಾರ ಹಾಗೂ ಸಕ್ಷಮ ಬ್ರಿಟಿಷ್ ಇಂಡಿಯಾ ಅಧಿಕಾರಿಗಳೊಡನೆ (ಮಾತುಕತೆ ನಡೆಸುವುದು) ಪರಂತು (೧) ಈ ಮಾತುಕತೆಗಳು ೧೯೪೭ರ ಜನವರಿ ೨೯ರಂದು ಪ್ರಭುಗಳ ಸರ್ವಸಮ್ಮೇಳನದಲ್ಲಿ ಅಂಗೀಕೃತವಾದ ನಿರ್ಣಯ ಹಾಗೂ ಪ್ರಭುಗಳ ಸ್ಥಾಯಿ ಸಮಿತಿ ಮತ್ತು ಮಂತ್ರಿಗಳ ಸಮಿತಿಯಿಂದ ಅನುಮೋದಿತವಾದ ರಾಜ್ಯಗಳ ಸಂವಿಧಾನಿಕ ಸಲಹಾ ಸಮಿತಿಯ ನಿಲುವುಗಳಿಗೆ ಅನುಸಾರವಾಗಿ ನಡೆಯಬೇಕು (೨) ಈ ಮಾತುಕತೆಗಳ ಫಲಿತಾಂಶಗಳು ಮೇಲೆ ತಿಳಿಸಿದ ಸಮಿತಿಗಳ ಅನುಮೋದನೆ ಮತ್ತು ರಾಜ್ಯಗಳ ಅನುಸಮರ್ಥನೆಗೆ ಒಳಪಡಬೇಕು.

೭. ಅಧಿಕಾರದ ಹಸ್ತಾಂತರಕ್ಕೆ ಮುನ್ನ ಪ್ರತ್ಯೇಕ ರಾಜ್ಯಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ತ್ವರಿತವಾಗಿ ಮತ್ತು ಸಮಾಧಾನಕರವಾಗಿ, ಮಹಾರಾಜರ ಸರ್ಕಾರ ಇತ್ಯರ್ಥಗೊಳಿಸಲು ಸಾಧ್ಯವಾಗುವಂತೆ ಗೌರವಾನ್ವಿತ ಮಹಾರಾಜರ ಪ್ರತಿನಿಧಿಯೊಡನೆ ಚರ್ಚಿಸಬೇಕೆಂದು ಈ ಸಮ್ಮೇಳನ ಘನತೆವೆತ್ತ ಕುಲಾಧಿಪತಿಗಳನ್ನು ಪ್ರಾರ್ಥಿಸುತ್ತದೆ.

## ಅನುಬಂಧ–ಬಿ
## ಭಾರತದ ಸಂವಿಧಾನ ರಚನಾ ಸಭೆ

ಸಂವಿಧಾನ ರಚನಾ ಸಭೆಗೆ ಒಕ್ಕೂಟದ ಅಧಿಕಾರ ಸಮಿತಿಯ ವರದಿ:

ಕೆಳಗೆ ಸಹಿ ಮಾಡಿರುವ ನಾವು ಎಂದರೆ ಒಕ್ಕೂಟದ ಅಧಿಕಾರ ವ್ಯಾಪ್ತಿಯನ್ನು ಪರೀಕ್ಷಿಸಲು, ಸಂವಿಧಾನ ರಚನಾ ಸಭೆಯ ಜನವರಿ ೨೫ರ ಅಧಿವೇಶನದ ನಿಲುವಳಿಯಿಂದ ನೇಮಕಗೊಂಡ ಸದಸ್ಯರು ಈ ವರದಿಯನ್ನು ಸಲ್ಲಿಸಲು ಹೆಮ್ಮೆ ಪಡುತ್ತೇವೆ. ೧೯೪೭ರ ಏಪ್ರಿಲ್ ೧೦ರಂದು ಶ್ರೀ ವಿ.ಟಿ.ಕೃಷ್ಣಮಾಚಾರಿ ಮತ್ತು ಸರ್ ಬಿ.ಎಲ್.ಮಿಟ್ಟರ್ ಅವರು ಸಮಿತಿಗೆ ನಿರ್ದೇಶಿತರಾದರು. ನಾವು ಮಿಕ್ಕವರು, ಅವರೊಡನೆ ಇಡೀ ಸಮಸ್ಯೆಯನ್ನು ಮತ್ತೊಮ್ಮೆ ಪರಾಮರ್ಶಿಸುವ ಅವಕಾಶ ದೊರೆತಿದೆ.

೨. ಮೇ ೧೬ರ, ಕ್ಯಾಬಿನೆಟ್ ನಿಯೋಗದ ಹೇಳಿಕೆಯಲ್ಲಿರುವ ರಕ್ಷಣೆ, ವಿದೇಶಿ ವ್ಯವಹಾರ ಮತ್ತು ಸಂಪರ್ಕ ವಿಷಯಗಳ ವ್ಯಾಪ್ತಿ ಇಂತಿದೆ.

ಎ) ರಕ್ಷಣೆ ಎಂದರೆ ಒಕ್ಕೂಟದ ರಕ್ಷಣೆ ಮತ್ತು ಅದರ ಎಲ್ಲ ಭಾಗಗಳ ರಕ್ಷಣೆ, ೧೬ನೇ ದಿನಾಂಕದಂದು ಕ್ಯಾಬಿನೆಟ್ ನಿಯೋಗ ನೀಡಿದ ಹೇಳಿಕೆಯನ್ನು ಯಶಸ್ವಿಯಾಗಿ ಅರ್ಥಪೂರ್ಣಗೊಳಿಸಲು ಸಾಧ್ಯವಾಗುವಂತೆ ಸಮರಕ್ಕೆ ತಯಾರಿ ನಡೆಸುವುದೂ ಸಹ ರಕ್ಷಣೆಯಲ್ಲಿ ಅಡಕವಾಗಿರುತ್ತದೆ.

ರಕ್ಷಣೆ ಕೆಳಕಂಡವನ್ನು ಒಳಗೊಂಡಿರುತ್ತದೆ.

(೧) ನೌಕೆ, ಸೇನೆ ಮತ್ತು ವಾಯುಪಡೆಯ ಸಂಯೋಜನೆ, ತರಬೇತಿ, ನಿರ್ವಹಣೆ ಮತ್ತು ನಿಯಂತ್ರಣ.

ಒಕ್ಕೂಟದ ರಕ್ಷಣೆಗಾಗಿ ನೇಮಕಾತಿ ಒಕ್ಕೂಟ ಮತ್ತು ಅದರ ಘಟಕದ ಕಾನೂನು ಅಮಲ್ದಾರಿ ಭಾರತೀಯ ರಾಜ್ಯಗಳಲ್ಲಿ ನಿಯುಕ್ತರಾಗಿರುವ ರಕ್ಷಣಾ ಸಿಬ್ಬಂದಿಯ ಬಲ, ಸಂಯೋಜನೆ ಮತ್ತು ನಿಯಂತ್ರಣ.

(೨) ರಕ್ಷಣಾ ಕೈಗಾರಿಕೆಗಳು

(೩) ನೌಕೆ, ಸೇನೆ ಮತ್ತು ವಾಯುಪಡೆ ಕಾಮಗಾರಿ

(೪) ದಂಡು ಪ್ರದೇಶಗಳಲ್ಲಿ ಸ್ಥಳೀಯ ಸ್ವಯಂ ಸರ್ಕಾರ. ದಂಡು ಅಧಿಕಾರಿಗಳು ಕಾರ್ಯಕ್ಷೇತ್ರದೊಳಗೆ ಸಂವಿಧಾನ ಮತ್ತು ಅಧಿಕಾರ. ಅಂತಹ ಪ್ರದೇಶಗಳಲ್ಲಿ ವಸತಿ ಸೌಲಭ್ಯದ ನಿಯಂತ್ರಣ; ಆ ಪ್ರದೇಶಗಳ ಸೀಮಾ ನಿರ್ಣಯ.

(೫) ಶಸ್ತ್ರಾಸ್ತ್ರಗಳು, ತುಪಾಕಿ, ಮದ್ದು ಮತ್ತು ಸಿಡಿಮದ್ದು

(೬) ಉತ್ಪಾದನಾವಶ್ಯಕ ಅಣುಶಕ್ತಿ ಮತ್ತು ಖನಿಜ ಸಂಪತ್ತುಗಳು.

(೭) ಮುಂದುವರೆದು ಒಕ್ಕೂಟದ ಸರ್ಕಾರ ಪರಿಣಾಮಕಾರಿಯಾಗಿ ತನ್ನ ಹೊಣೆಗಾರಿಕೆಯನ್ನು ರಕ್ಷಣಾ ಕ್ಷೇತ್ರದಲ್ಲಿ ನಿರ್ವಹಿಸಲು ಸಾಧ್ಯವಾಗುವಂತೆ ೧೯೩೫ರ ಭಾರತ ಸರ್ಕಾರದ ಅಧಿನಿಯಮದ ೧೦೨ ಮತ್ತು ೧೨೬ ಕಲಮುಗಳಲ್ಲಿ ಉಲ್ಲೇಖಿತವಾಗಿರುವ ಅಧಿಕಾರಗಳಿಗೆ ತತ್ಸಮಾನದ ಅಧಿಕಾರವನ್ನು ಈ ಕ್ಷೇತ್ರಗಳಿಗೂ ವಹಿಸಿಕೊಡಬೇಕೆಂದು ನಾವು ಶಿಫಾರಸು ಮಾಡುತ್ತೇವೆ.

ಬಿ) ವಿದೇಶಿ ವ್ಯವಹಾರ ಒಕ್ಕೂಟ ಮತ್ತು ಯಾವುದೇ ವಿದೇಶದೊಡನೆ ಸಂಬಂಧವಿರುವ ಎಲ್ಲ ವಿಷಯಗಳನ್ನು ಒಳಗೊಂಡಿರುತ್ತದೆ. ವಿಶೇಷವಾಗಿ ಕೆಳಕಂಡ ವಿಷಯಗಳು ಅಡಕವಾಗಿರುತ್ತವೆ.

(೧) ದೂತಾವಾಸ, ಕಾನ್ಸುಲರ್ (Consular) ಮತ್ತಿತರ ವಾಣಿಜ್ಯ ಪ್ರಾತಿನಿಧ್ಯ

(೨) ಸಂಯುಕ್ತ ರಾಷ್ಟ್ರ ಸಂಸ್ಥೆ

(೩) ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸುವುದು, ಸಂಘ ಸಂಸ್ಥೆಗಳಲ್ಲಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಅಲ್ಲಿ ಕೈಗೊಂಡ ನಿರ್ಧಾರಗಳನ್ನು ಅನುಷ್ಠಾನಕ್ಕೆ ತರುವುದು.

(೪) ಸಮರ ಮತ್ತು ಶಾಂತಿ

(೫) ಇತರ ದೇಶಗಳೊಡನೆ ಒಡಂಬಡಿಕೆ ಒಪ್ಪಂದ ಇತ್ಯಾದಿಯಲ್ಲಿ ಪಾತ್ರವಹಿಸುವುದು.

(೬) ವಿದೇಶಗಳೊಡನೆ ವ್ಯಾಪಾರ ವಾಣಿಜ್ಯ ಸಂಬಂಧ

(೭) ವಿದೇಶಿ ಸಾಲ

(೮) ದೇಶೀಕರಣ ಮತ್ತು ಅನ್ಯ ದೇಶೀಯ

(೯) ಪ್ರತ್ಯರ್ಪಣೆ/ವಶಕ್ಕೆ ಒಪ್ಪಿಸುವುದು

(೧೦) ಪಾಸ್‌ಪೋರ್ಟ್ ಮತ್ತು ವೀಸಾ

(೧೧) ವಿದೇಶಿ ಅಧಿಕಾರ ವ್ಯಾಪ್ತಿ

(೧೨) ನೌಕಾದಳದ ವ್ಯಾಜ್ಯ ಅಧಿಕಾರ ವ್ಯಾಪ್ತಿ

(೧೩) ಹಡಗುಗಳ್ಳತನ, ನಡುಗಡಲಲ್ಲಿ ಘೋರಾಪರಾಧ, ರಾಷ್ಟ್ರಗಳ ಕಾನೂನಿಗೆ ವ್ಯತಿರಿಕ್ತವಾಗಿ ವಿಮಾನದಲ್ಲಿ ಅಪರಾಧಗಳು

(೧೪) ಒಕ್ಕೂಟಕ್ಕೆ ಪ್ರವೇಶಾವಕಾಶ ವಲಸೆ ಮತ್ತು ಉಚ್ಚಾಟನೆ

(೧೫) ಬಂದರಿನಲ್ಲಿ ರೋಗ ನಿರೋಧ

(೧೬) ಸುಂಕದ ಗಡಿಗಳಲ್ಲಿ ಆಯಾತ ನಿರ್ಯಾತ/ಒಕ್ಕೂಟದ ಸರ್ಕಾರ/ಕೇಂದ್ರ ಸರ್ಕಾರ ವ್ಯಾಖ್ಯಾನಿಸಿದಂತೆ]

(೧೭) ಸಾಗರ ಸರಹದ್ದಿನಿಂದಾಚೆ ಮೀನುಗಾರಿಕೆ ಮತ್ತು ಮತ್ಸ್ಯೋದ್ಯಮ

ಸಿ. ನಮ್ಮ ಅಭಿಪ್ರಾಯದಂತೆ ಎರಡು ಸ್ಥಳಗಳ ನಡುವೆ ಏರ್ಪಡುವ ಸಂಪರ್ಕಕ್ಕೆ ವ್ಯಾಪಕ ವ್ಯಾಖ್ಯೆ ಇರುವುದಾದರೂ ಒಕ್ಕೂಟದ ಉದ್ದೇಶಕ್ಕಾಗಿ ಕೆಳಕಂಡವನ್ನು ಒಳಗೊಂಡಿರುತ್ತದೆ.

೧) ವಾಯು ಮಾರ್ಗ

೨) ಹೆದ್ದಾರಿ ಮತ್ತು ಜಲಮಾರ್ಗ – ಇವು ಒಕ್ಕೂಟದ ಹೆದ್ದಾರಿ ಮತ್ತು ಜಲಮಾರ್ಗಗಳೆಂದು ಘೋಷಿಸಲ್ಪಟ್ಟಿವೆ.

೩) ಒಳನಾಡು ಜಲಮಾರ್ಗದಲ್ಲಿ ಹಡಗು ಸಾಗಾಣಿಕೆ ಮತ್ತು ನೌಕಾಯಾನ ಈ ಮಾರ್ಗವನ್ನು ಒಕ್ಕೂಟದ ಜಲಮಾರ್ಗವೆಂದು ಘೋಷಿಸಲಾಗಿದೆ. ಯಾಂತ್ರಿಕ ದೋಣಿ ಸಂಚಾರ, ಪ್ರಯಾಣಿಕರು ಮತ್ತು ಸರಕು ಸಾಗಾಣಿಕೆಗೆ ರಸ್ತೆ ಸಂಚಾರದ ನಿಯಮಗಳು ಅನ್ವಯಿಸುತ್ತವೆ.

೪) ಎ) ಅಂಚೆ ತಂತಿ

ಪರಂತು, ಒಕ್ಕೂಟದ ಸ್ಥಾಪನೆಯಾದ ದಿನಾಂಕ, ಯಾವುದೇ ರಾಜ್ಯದ ಸ್ಥಾನೀಕ ಹಕ್ಕುಗಳು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳಲ್ಪಡುತ್ತವೆ. ಈ ಹಕ್ಕುಗಳು ಮುಂದೆ ಒಕ್ಕೂಟ ಮತ್ತು ಸಂಬಂಧಿಸಿದ ಘಟಕಗಳ ನಡುವಣ ಒಪ್ಪಂದದಿಂದ ಪರಿಷ್ಕೃತಗೊಳ್ಳುವವರೆಗೆ ಅಥವಾ ಅಸ್ತಿತ್ವವನ್ನು ಕಳೆದುಕೊಳ್ಳುವವರೆಗೆ ಉಳಿಯುತ್ತವೆ. ಹೇಗಾದರೂ ಒಕ್ಕೂಟಕ್ಕೆ ಕಾನೂನು ರಚಿಸುವ ಅಧಿಕಾರವಿದ್ದು ಪ್ರಸ್ತುತ ಹಕ್ಕುಗಳು ಕಾನೂನಿನ ನಿಯಂತ್ರಣಕ್ಕೆ ಬದ್ಧವಾಗಿರುತ್ತದೆ.

ಬಿ) ಒಕ್ಕೂಟದ ದೂರವಾಣಿ, ನಿಸ್ತಂತು, ಬಾನುಲಿ ಮತ್ತು ಇತರ ಸಜೀವ ಸಂಪರ್ಕ ಮಾಧ್ಯಮಗಳು, ಇತರ ದೂರವಾಣಿ, ನಿಸ್ತಂತು ಮತ್ತು ಪ್ರಸಾರ ಮಾಧ್ಯಮಗಳ ಮೇಲೆ ನಿಯಂತ್ರಣ.

೫) ಒಕ್ಕೂಟದ/ಕೇಂದ್ರ ರೈಲುಮಾರ್ಗ (ಸಣ್ಣ ರೈಲುಮಾರ್ಗಗಳನ್ನು ಹೊರತುಪಡಿಸಿ) ಎಲ್ಲ ರೈಲು ಮಾರ್ಗಗಳನ್ನು ನಿಯಂತ್ರಿಸುವುದು (ರಕ್ಷಣೆ, ಗರಿಷ್ಠ ಮತ್ತು ಕನಿಷ್ಠ ಪ್ರಯಾಣ ದರ, ರೈಲು ನಿಲ್ದಾಣ ಸೇವಾಶುಲ್ಕಗಳು ಪ್ರಯಾಣಿಕರು ಮತ್ತು ಸರಕು ಸಾಗಾಣಿಕೆ ವಿನಿಮಯ, ರೈಲ್ವೆ ಆಡಳಿತದ ಹೊಣೆಗಾರಿಕೆ ಒಳಗೊಂಡಂತೆ) ಸಣ್ಣ ರೈಲು ಮಾರ್ಗಗಳಲ್ಲಿ ರಕ್ಷಣೆಗೆ ಸಂಬಂಧಿಸಿದಂತೆ ನಿಯಂತ್ರಣ ಮತ್ತು ಸರಕು, ಪ್ರಯಾಣಿಕರ ಸಾಗಾಣಿಕೆಯಲ್ಲಿ ಅವುಗಳ ಆಡಳಿತ ಜವಾಬ್ದಾರಿ ಇವೆಲ್ಲವನ್ನೂ ಒಳಗೊಂಡಿರುತ್ತದೆ.)

೬) ಕಡಲತಡಿ ಸರಕು ರವಾನೆ, ನೌಕಾಯಾನ [ಅಲೆನೀರಿನಲ್ಲಿ ಸರಕು ರವಾನೆ, ನೌಕಾಯಾನವನ್ನು ಒಳಗೊಂಡಂತೆ] ನೌಕಾಡಳಿತ ಅಧಿಕಾರ ವ್ಯಾಪ್ತಿ.

೭) ದೊಡ್ಡ ಬಂದರುಗಳು ಎಂದರೆ, ಅಂತಹ ಬಂದರುಗಳ ಘೋಷಣೆ ಸೀಮಾ ನಿರ್ಣಯ, ಬಂದರು ಪ್ರಾಧಿಕಾರ ರಚನೆ

೮) ವಿಮಾನ ಮತ್ತು ನೌಕಾಯಾನ: ವಿಮಾನ ನಿಲ್ದಾಣ ಸೌಲಭ್ಯಗಳು ನಿಯಂತ್ರಣ ಮತ್ತು ವಾಯುಯಾನ ಆಯೋಜನೆ ಮತ್ತು ವಿಮಾನ ನಿಲ್ದಾಣ ನಿಯಂತ್ರಣ.

೯) ದೀಪ ಗೃಹಗಳು [ದೀಪ ನೌಕೆಗಳನ್ನೊಳಗೊಂಡಂತೆ] ನಿಶಾನೆ ನೌಕಾಯಾನ ಮತ್ತು ವಿಮಾನ ಯಾನಕ್ಕೆ ಸುರಕ್ಷತೆ ಕ್ರಮ

೧೦) ಜಲಮಾರ್ಗ ಮತ್ತು ವಾಯು ಮಾರ್ಗದಲ್ಲಿ ಪ್ರಯಾಣಿಕರ ಸಾಗಾಣಿಕೆ

೧೧) ಒಕ್ಕೂಟದ, ಕೇಂದ್ರದ ತಾಪಮಾನ ಸೇವೆ

೧೨) ಅಂತರ ಒಕ್ಕೂಟ ರೋಗ ನಿರೋಧ

ಬಿ) ಅಗತ್ಯ ಹಣಕಾಸು ಸಂಗ್ರಹಣೆಗೆ ಅಧಿಕಾರ ಎಂಬ ಪದಸಮುಚ್ಚಯ (ಕ್ಯಾಬಿನೆಟ್ ನಿಯೋಗದ ಹೇಳಿಕೆ) ತೆರಿಗೆ, ಸಾಲವನ್ನು ಒಳಗೊಂಡಂತಹ ಅರ್ಥವ್ಯಾಪ್ತಿಯನ್ನು ಹೊಂದಿರುತ್ತದೆ. ಈಗಿನ ಸಂದರ್ಭಗಳಲ್ಲಿ ಒಕ್ಕೂಟಕ್ಕೆ ಕೆಳಕಂಡ ಸಂಪನ್ಮೂಲಗಳನ್ನು ಶಿಫಾರಸು ಮಾಡುತ್ತೇವೆ.

೧) ರಫ್ತು ಸುಂಕ ಸೇರಿದಂತೆ ತೆರಿಗೆ

೨) ಅಬ್ಕಾರಿ ತೆರಿಗೆ

೩) ನಿಗಮ ತೆರಿಗೆ

೪) ವರಮಾನ ತೆರಿಗೆ [ಕೃಷಿಯನ್ನು ಹೊರತುಪಡಿಸಿ]

೫) ಕೃಷಿಯ ಭೂಮಿಯಲ್ಲದ ಆಸ್ತಿಯ ಮೇಲಣ ತೆರಿಗೆ

೬) ಒಕ್ಕೂಟದ ಅಧಿಕಾರದ ಪಟ್ಟಿಯಲ್ಲಿರುವ ಯಾವುದೇ ವಿಷಯಗಳಿಗೆ ಸಂಬಂಧಿಸಿದ ಶುಲ್ಕ [ಕೇಂದ್ರ ನ್ಯಾಯಾಲಯವಲ್ಲದ ಯಾವುದೇ ನ್ಯಾಯಾಲಯದಲ್ಲಿ ವಸೂಲಿಸಿದ ಶುಲ್ಕ ಇದರಲ್ಲಿ ಸೇರಿಲ್ಲ]

ಕೈಗಾರಿಕಾಭಿವೃದ್ಧಿಯ ವಿಷಯದಲ್ಲಿ ಎಲ್ಲ ರಾಜ್ಯಗಳಲ್ಲೂ ಒಂದೇ ರೀತಿಯ ಬೆಳವಣಿಗೆ ಇರದೆ ಬೇರೆ ಬೇರೆಯಾಗಿರುತ್ತದೆ ಎಂಬುದನ್ನು ಬಲ್ಲೆವು. ಬ್ರಿಟಿಷ್ ಇಂಡಿಯಾ ಮತ್ತು ರಾಜ್ಯಗಳ ಕೈಗಾರಿಕೆಗಳ ಬೆಳವಣಿಗೆ ಒಂದೇ ರೀತಿಯಲ್ಲಿ ಇರುವುದಿಲ್ಲ. ಮೇಲೆ ತಿಳಿಸಿದ ತೆರಿಗೆಗಳು, ಭಾರತ ಸರ್ಕಾರ ಮತ್ತು ರಾಜ್ಯಗಳ ನಡುವಣ ಪರಸ್ಪರ ಒಪ್ಪಿಗೆಯಿಂದ, ನಿಯಂತ್ರಣಕ್ಕೆ ಒಳಪಡುತ್ತವೆ. ಒಕ್ಕೂಟದಲ್ಲಿ ಏಕರೂಪಿಯಾದ ತೆರಿಗೆಯನ್ನು ಎಲ್ಲೆಡೆ ಏಕಾಏಕಿಯಾಗಿ ಹೇರಲಾಗದು. ಒಕ್ಕೂಟದ ಸ್ಥಾಪನೆಯ ನಂತರ ೧೫ ವರುಷಗಳಿಗೆ ಮೀರಿದಂತೆ, ಉಭಯತ್ರ ಒಪ್ಪಿಗೆಯಾಗುವಂತೆ ಎಲ್ಲ ಘಟಕಗಳಿಗೂ ಏಕರೂಪಿ ತೆರಿಗೆ ವಿಧಿಸುವುದನ್ನು ತಳ್ಳಿ ಹಾಕಬೇಕೆಂದು (ಯಾ ಅಮಾನತ್ತಿನಲ್ಲಿಡಬೇಕೆಂದು) ನಾವು ಶಿಫಾರಸು ಮಾಡುತ್ತೇವೆ. ತೆರಿಗೆ ವಸೂಲಿ. ಹಂಚಿಕೆ ಎಲ್ಲವೂ ಎರಡೂ ಸರ್ಕಾರಗಳ ನಡುವಣ ಒಪ್ಪಂದಕ್ಕೆ ಬದ್ಧವಾಗಿರಬೇಕು. ಮೇಲಿನ ಶಿಫಾರಸುಗಳು ಸಂವಿಧಾನದಲ್ಲಿ ನಿಗಮಿತಗೊಳ್ಳಬೇಕು.

ಆಂತರಿಕ ಸುಂಕ, ತೆರಿಗೆಗೆ ಸಂಬಂಧಿಸಿದಂತೆ ಮೂಲಭೂತ ಹಕ್ಕುಗಳ ಬಗ್ಗೆ ಮೇಲೆ ಉಪಸಮಿತಿ ಮಾಡಿದ ಶಿಫಾರಸುಗಳ ಜೊತೆಗೆ, ಮೇಲಿನ ಶಿಫಾರಸುಗಳನ್ನು ಹೆಚ್ಚುವರಿಯಾಗಿ ಸೇರಿಸಲಾಗಿದೆ.

೩) ಸೂಚ್ಯವಾದ ಅಥವಾ ಅಂತರ್ಗತವಾದ ಅಥವಾ ಪರಿಣಾಮ ಅಧಿಕಾರಗಳ [Resultant powers] ಪಟ್ಟಿ ಮಾಡಲು ಸಾಧ್ಯವಿಲ್ಲ, ಆದರೂ ಕೆಳಕಂಡವು ಈ ವರ್ಗಗಳ ಒಳಗೆ ಸೇರುತ್ತವೆ ಎಂದು ನಮ್ಮ ಭಾವನೆ.

೧) ಒಕ್ಕೂಟ/ಕೇಂದ್ರ ನ್ಯಾಯಾಂಗ

೨) ಒಕ್ಕೂಟಕ್ಕಾಗಿ ಆಸ್ತಿ ಸ್ವಾಧೀನ

೩) ಸಂಶೋಧನೆ, ವೃತ್ತಿಪರ ಯಾ ತಾಂತ್ರಿಕ ತರಬೇತಿ ಅಥವಾ ವಿಶೇಷ ಅಧ್ಯಯನ ಪ್ರವರ್ತನೆ

೪) ಜನಗಣತಿ

೫) ಒಕ್ಕೂಟದ ಅಧಿಕಾರಕ್ಕೆ ಸಂಬಂಧಿಸಿದ ಕಾನೂನಿಗಳಿಗೆ ವಿರುದ್ಧವಾಗಿ ಅಪರಾಧಗಳು

೬) ಒಕ್ಕೂಟಕ್ಕಾಗಿ ವಿಚಾರಣೆ, ಸರ್ವೇಕ್ಷಣ ಮತ್ತು ಅಂಕಿ ಅಂಶ ಗಣತಿ

೭) ಒಕ್ಕೂಟದ ಸೇವೆಗಳು

೮) ಕೈಗಾರಿಕಾ ವಿವಾದಗಳು [ಒಕ್ಕೂಟ ನೌಕರರಿಗೆ ಸಂಬಂಧಿಸಿದಂತೆ]

೯) ಭಾರತೀಯ ರಿಸರ್ವ್ ಬ್ಯಾಂಕ್

೧೦) ಒಕ್ಕೂಟದ ಆಸ್ತಿ ಮತ್ತು ಅದರಿಂದ ಬರುವ ತೆರಿಗೆ

೧೧) ಒಕ್ಕೂಟದ ಸಾರ್ವಜನಿಕ ಸಾಲ

೧೨) ನೋಟು, ನಾಣ್ಯ ಮತ್ತು ಕಾನೂನು ಟೆಂಡರ್

೧೩) ಒಕ್ಕೂಟ ಪ್ರದೇಶಗಳ ಎಲ್ಲ ವಿಷಯಗಳು

೧೫) ಒಕ್ಕೂಟಕ್ಕೆ ಸೇರಿದ ಯಾವುದೇ ಪ್ರದೇಶದಲ್ಲಿ ತೀವ್ರ ಆರ್ಥಿಕ ತುರ್ತು ಪರಿಸ್ಥಿತಿಯನ್ನು ನಿರ್ವಹಿಸುವ ಅಧಿಕಾರ

೪) ನೂತನ ಸಂವಿಧಾನದಲ್ಲಿ ಘಟಕಗಳ ಕಾನೂನು ಮತ್ತು ಅಧಿನಿಯಮಾಧಾರಿತ ನ್ಯಾಯಿಕ

ವ್ಯವಹರಣೆಗಳ ದಾಖಲೆ ಇಡೀ ಒಕ್ಕೂಟದ ಗಮನಕ್ಕೆ ತರುವಂತಹ ಸೌಲಭ್ಯ ಕಲ್ಪಿಸಬೇಕು. ಒಂದು ಘಟಕದ ಆದೇಶ ಮತ್ತೊಂದು ಘಟಕದಲ್ಲಿ ಜಾರಿಗೊಂಡುದರ ಮಾಹಿತಿ ತಿಳಿಯಲು ಅವಕಾಶವಿರಬೇಕು. ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಈ ಬಗ್ಗೆ ಉಪಬಂಧ ನಿಗಮಿತವಾಗಿರುವುದು ನಮ್ಮ ಗಮನಕ್ಕೆ ಬಂದಿದೆ.

೫) ಕ್ಯಾಬಿನೆಟ್ ನಿಯೋಗದ ಹೇಳಿಕೆಯ ಅನುಸಾರ, ಒಕ್ಕೂಟ ಅಧಿಕಾರ ವ್ಯಾಪ್ತಿಗೆ ಒಳಪಡುವ ಮೇಲ್ಕಂಡ ವಿಷಯಗಳ ಜೊತೆಯಲ್ಲಿ ಕೆಳಕಂಡ ವಿಷಯಗಳನ್ನು ಒಕ್ಕೂಟದ ಪಟ್ಟಿಗೆ ಒಪ್ಪಂದದ ಮೇರೆಗೆ ಸೇರಿಸಲಾಗುವುದೆಂದು ನಂಬುತ್ತೇವೆ.

೧) ವಿಮೆ

೨) ಕಂಪೆನಿ ಕಾನೂನು

೩) ಬ್ಯಾಂಕ್ ವ್ಯವಹಾರ

೪) ವರ್ಗಾವಣೀಯ ಲಿಖಿತ ಪತ್ರ

೫) ಸ್ವಾಮ್ಯದ ಸನ್ನದು, ವ್ಯಾಪಾರ ಲಾಂಛನ, ವ್ಯಾಪಾರ ವಿನ್ಯಾಸ ಮತ್ತು ಕಾಪಿರೈಟ್

೬) ಯೋಜನೆ

೭) ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು

೮) ಮಾನಕ ತೂಕ ಮತ್ತು ಅಳತೆಗಳು

ಇಂತಹ ವ್ಯವಸ್ಥೆಯಿಂದ ಏಕರೂಪತೆಯ ಖಾತರಿ ದೊರೆಯುತ್ತದೆ. ವ್ಯಾಪಾರ ಮತ್ತು ವಾಣಿಜ್ಯದ ವಿಷಯದಲ್ಲಿ ಒಕ್ಕೂಟದ ರಾಜ್ಯ ಕ್ಷೇತ್ರಗಳುದ್ದಕ್ಕೂ ಏಕರೂಪತೆಗೆ ಖಾತರಿ ಇರುವುದನ್ನು ಕಾಣಬಹುದು. ಇದು ಅನೇಕ ಸಂಯುಕ್ತ ಸಂವಿಧಾನಗಳಲ್ಲಿ ಮಾನ್ಯ ಮಾಡಲ್ಪಟ್ಟಿದೆ. ಈ ಮೇಲ್ಕಂಡ ವಿಷಯಗಳ ಪಟ್ಟಿಗೆ ಯೋಜನೆಯನ್ನು ಸೇರಿಸಿದ್ದೇವೆ. ಕಾರಣವೇನೆಂದರೆ ಇವೆಲ್ಲವೂ ವಿವಿಧ ಘಟಕಗಳ ಅಧಿಕಾರಕ್ಕೆ ಒಳಪಟ್ಟಿದ್ದರೂ ಸಹ, ಅವುಗಳ ಹಿತದೃಷ್ಟಿಯಿಂದ ಒಂದು ಸಮನ್ವಯ ವ್ಯವಸ್ಥೆ ಇದ್ದರೆ, ಅದರ ಸಹಕಾರ ಪಡೆಯಬಹುದು.

೬) ಆಸ್ಟ್ರೇಲಿಯಾ ಸಂವಿಧಾನ ಅಧಿನಿಯಮದ ೫೧ನೇ ನಿಯಮದ xxxvii ನೇ ವಾಕ್ಯಖಂಡದ ಮಾದರಿಯಲ್ಲಿ ನಮ್ಮ ಸಂವಿಧಾನದಲ್ಲಿ ಒಂದು ಸಂವಿಧಾನವನ್ನು ಒಳಸೇರಿಸುವಂತೆ ನಾವು ಶಿಫಾರಸು ಮಾಡುತ್ತೇನೆ.

೭) ಒಕ್ಕೂಟ ಮತ್ತು ಘಟಕಗಳ ನಡುವೆ ಒಪ್ಪಂದದ ಮೇರೆಗೆ ಸಮವರ್ತಿ ವಿಷಯಗಳ ಒಂದು ಪಟ್ಟಿ ಇರಬೇಕೆಂದು ನಾವು ಶಿಫಾರಸು ಮಾಡುತ್ತೇನೆ.

| | |
|---|---|
| (ಸಹಿ) – | ಜವಾಹರಲಾಲ್ ನೆಹರು |
| ಪಂತ್ | " ಗೋವಿಂದ ವಲಭ |
| | " ಬಿ.ಎಲ್.ಮಿಟ್ಟರ್ |
| ದೌಲತ್‌ರಾಮ್ | " ಜೈರಾಮ್‌ದಾಸ್ |
| ಅಯ್ಯಂಗಾರ್ | " ಎನ್.ಗೋಪಾಲಸ್ವಾಮಿ |
| | " ಕೆ.ಎಂ.ಮುನ್ಷಿ |
| | " ವಿ.ಟಿ.ಕೃಷ್ಣಮಾಚಾರಿ |
| ಸೀತಾರಾಮಯ್ಯ | " ಬಿ.ಪಟ್ಟಾಬಿ |
| | " ಬಿಶ್ವನಾಥ್‌ದಾಸ್ |
| | " ಎ.ಕೃಷ್ಣಸ್ವಾಮಿ ಅಯ್ಯರ್ |

ನವದೆಹಲಿ

೧೭, ಏಪ್ರಿಲ್ ೧೯೪೭